ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 23 | ಜೂನ್ 3-9, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಎಡಶಕ್ತಿಗಳು ಮತ್ತೆ ಮೇಲೆದ್ದು ಬರುತ್ತವೆ



ಎಡ ಇಲ್ಲದ ಭಾರತದಲ್ಲಿ ಪ್ರಜೆಗಳಿಗೆ ಬಲವೆಲ್ಲಿ?



ಕೇರಳ: ಬಿಜೆಪಿ ಅಪಾಯದ LDF ಪ್ರತಿಪಾದನೆಯಿಂದ UDFಗೆ ಲಾಭ



ಎಲ್ಲೆಡೆ ಸಿಐಟಿಯು ಸುವರ್ಣ ಮಹೋತ್ಸವ

ಜನಗಳ ನಿಜ ಸಂಕಟಗಳನ್ನು ಬದಿಗೆ ತಳ್ಳುವಲ್ಲಿ ಬಿಜೆಪಿ–ಆರೆಸ್ಸೆಸ್ ಹೆಣೆದ ರಾಷ್ಟ್ರವಾದಿ ಅಬ್ಬರದ ಕಥನ ಯಶಸ್ವಿಯಾಗಿದೆ

–ಸಿಪಿಐ(ಎಂ) ಪೊಲಿಟ್ ಬ್ಯುರೊ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ–ಎನ್.ಡಿ.ಎ. 17ನೇ ಲೋಕಸಭೆಗೆ ನಡೆದ ಚುನಾವಣೆಗಳಲ್ಲಿ ಪ್ರಚಂಡ ಮತ್ತು ನಿರ್ಣಾಯಕ ಜನಾದೇಶವನ್ನು ಗಳಿಸಿದೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಇನ್ನು ಕೆಲವು ರಾಜ್ಯಗಳನ್ನು ಬಿಟ್ಟು ಬೇರೆಡೆಗಳಲ್ಲಿ ಹೆಚ್ಚಿನ ಪ್ರತಿಪಕ್ಷಗಳು ಈ ಚುನಾವಣೆಗಳಲ್ಲಿ ಒಂದು ದೊಡ್ಡ ನಷ್ಟವನ್ನು ಕಂಡಿವೆ.

ಸಿಪಿಐ(ಎಂ) ಮತ್ತು ಎಡಪಂಥ ಚುನಾವಣೆಗಳಲ್ಲಿ ಒಂದು ತೀವ್ರ ಹಿನ್ನಡೆಯನ್ನು, ನಿರ್ದಿಷ್ಟವಾಗಿ ತಮ್ಮ ಬಲಿಷ್ಟ ನೆಲೆಗಳಲ್ಲಿ, ಅನುಭವಿಸಿವೆ.

ಜನಗಳ ಮುಂದೆ ನಿರೂಪಣೆಯನ್ನು ಎನ್.ಡಿ.ಎ. ಸರಕಾರದ ಕಳೆದ ಐದು ವರ್ಷಗಳಲ್ಲಿ ಹೊರಿಸಿದ ಹತ್ತು–ಹಲವು ಜೀವನಾಧಾರದ ಪ್ರಶ್ನೆಗಳಿಂದ ಬೇರೆಡೆಗೆ ತಿರುಗಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಸಂಕುಚಿತ ಕೋಮುವಾದಿ ರಾಷ್ಟ್ರವಾದಿ ಅಬ್ಬರದ ಸುತ್ತ ಹೆಣೆದ ಕಥನ, ಜತೆಗೆ ಭಯೋತ್ಪಾದನೆಯ ವಿರುದ್ಧ ಹೋರಾಟದ ಪ್ರಶ್ನೆಗಳು ಜನಗಳನ್ನು ಬಾಧಿಸುತ್ತಿರುವ ದೈನಂದಿನ ಸಮಸ್ಯೆಗಳನ್ನೆಲ್ಲ ಬದಿಗೆ ತಳ್ಳಿದವು. ಹಲವಾರು ಅಂಶಗಳ ಮೂಲಕ ಮೋದಿಯವರ ವ್ಯಕ್ತಿ–ಪ್ರತಿಷ್ಠೆಯನ್ನು ಕಟ್ಟಿ ಬೆಳೆಸಿದ್ದು ಇದಕ್ಕೆ ನೆರವಾಯಿತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮೇ 26 ಮತ್ತು 27ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯರೊ 2019ರ ಲೋಕಸಭಾ ಚುನಾವಣೆಗಳ ಆರಂಭಿಕ ವಿಶ್ಲೇಷಣೆಯನ್ನು ನಡೆಸಿದ ನಂತರ ನೀಡಿರುವ ಹೇಳಿಕೆಯಲ್ಲಿ ಹೀಗಂದಿದೆ.

ಮೋದಿಯ ವ್ಯಕ್ತಿ–ಪ್ರತಿಷ್ಠೆಯನ್ನು ಕಟ್ಟಿ ಬೆಳೆಸಲು ತಂತ್ರಜ್ಞಾನವನ್ನು ಮತ್ತು ಜನತೆಗೆ ಸಂದೇಶಗಳನ್ನು ತಲುಪಿಸುವ ಸಲಕರಣೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲಾಯಿತು. ಇದಕ್ಕೆ ದೊಡ್ಡ ಪ್ರಮಾಣದ ಮಾಹಿತಿ–ವಿಶ್ಲೇಷಣಾ ಸಾಧನಗಳನ್ನು ಮತ್ತು ಸೂಕ್ಷ್ಮ ಮಟ್ಟದ ಸಾಮಾಜಿಕ ತಂತ್ರಗಾರಿಕೆಗಳನ್ನು ಬಳಸಲಾಯಿತು. **ಬೃಹತ್ ಪ್ರಮಾಣದ ಹಣಬಲದ ಬೆಂಬಲದಿಂದ ಇಂತಹ ಒಂದು ಕಥನವನ್ನು ಕಟ್ಟುವ ಯೋಜನೆಯಲ್ಲಿ ಮಾಧ್ಯಮಗಳ ಕೆಲವು ವಿಭಾಗಗಳು ಜತೆಗೂಡಿದವು. ಈ ರೀತಿಯ ಕಥನವನ್ನು ಕಟ್ಟಲು ಅನುಮತಿ ನೀಡುವಲ್ಲಿ ಚುನಾವಣಾ ಆಯೋಗದ ಪಾತ್ರವೂ ಇದೆ.** ಆರ್.ಎಸ್.ಎಸ್. ಗೆ ಸಂಯೋಜಿತವಾದ ಸಂಘಟನೆಗಳ ಒಂದು ಬೃಹತ್ ಜಾಲ ಈ ಪ್ರಕ್ರಿಯೆಗೆ ಸಹಾಯಕವಾಯಿತು ಎಂದು ಪೊಲಿಟ್ ಬ್ಯುರೊ ವಿಶ್ಲೇಷಿಸಿದೆ.

ಸಿಪಿಐ(ಎಂ)ನ ಚುನಾವಣಾ ನೆಲೆಗಟ್ಟು ನಮ್ಮ ಬಲಿಷ್ಟ ನೆಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕ್ಷರಣಗೊಂಡಿದೆ. ಇದಕ್ಕೆ ಕಾರಣವಾದ ಕೆಲವು ಪ್ರಶ್ನೆಗಳನ್ನು ಪೊಲಿಟ್‌ಬ್ಯುರೊ ಚರ್ಚಿಸಿತು. **ಜೂನ್ 7 ರಿಂದ 9 ರವರೆಗೆ ನಡೆಯಲಿರುವ ಪಕ್ಷದ ಕೇಂದ್ರ ಸಮಿತಿಯ ಸಭೆ ರಾಜ್ಯಗಳಿಂದ ಬರುವ ವರದಿಗಳ ಆಧಾರದಲ್ಲಿ ಚರ್ಚಿಸಿ ಈ ಚುನಾವಣೆಗಳ ಅನುಭವಗಳ ಒಂದು ಆತ್ಮಾವಲೋಕನದ ಆಧಾರದಲ್ಲಿ ಸರಿಯಾದ ಪಾಟಗಳನ್ನು ಪಡೆಯುವ ಒಂದು ವರದಿಯನ್ನು ಅಂಗೀಕರಿಸುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.**

ಈ ಕೇಂದ್ರ ಸಮಿತಿ ಸಭೆಯ ಮೊದಲು ಸಿಪಿಐ(ಎಂ)ನ ಶಕ್ತಿ ಹೆಚ್ಚಿರುವ ರಾಜ್ಯಗಳಲ್ಲಿ ಪಕ್ಷದ ರಾಜ್ಯಸಮಿತಿಗಳು ಸಭೆ ಸೇರಿ ತಮ್ಮ ಕಾರ್ಯನಿರ್ವಹಣೆಯ ಮೌಲ್ಯಮಾಪನವನ್ನು ಸ್ವವಿಮರ್ಶಾತ್ಮಕವಾಗಿ ನಡೆಸುತ್ತವೆ. ಮತ್ತು ಈ ಆಧಾರದಲ್ಲಿ ಕೇಂದ್ರ ಸಮಿತಿ ಸಿಪಿಐ(ಎಂ)ನ ಸ್ವತಂತ್ರ ಶಕ್ತಿಯನ್ನು ಮತ್ತು ಜನಸಮೂಹಗಳ ಹೋರಾಟಗಳ ಮೂಲಕ ತನ್ನ ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ಸರಿಪಡಿಕೆ ಕ್ರಮಗಳನ್ನು ರೂಪಿಸುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಪಕ್ಷದಿಂದ ಮೂವರು, ಇಬ್ಬರು ತಮಿಳುನಾಡಿನಿಂದ ಮತ್ತು ಒಬ್ಬರು ಕೇರಳದಿಂದ 17ನೇ ಲೋಕಸಭೆಗೆ ಚುನಾಯಿತರಾಗಿದ್ದಾರೆ. ಪಕ್ಷದ ಅಭ್ಯರ್ಥಿಗಳಿಗೆ ಮತನೀಡಿದ ಎಲ್ಲರಿಗೂ ಪೊಲಿಟ್ ಬ್ಯುರೊ ಪಕ್ಷದ ಧನ್ಯವಾದಗಳನ್ನು ಅರ್ಪಿಸಿದೆ.

ಪಶ್ಚಿಮ ಬಂಗಾಲದಲ್ಲೂ ಮತ್ತು ತ್ರಿಪುರಾದಲ್ಲೂ ಈ ಚುನಾವಣೆಗಳು ತೀವ್ರ ಭಯೋತ್ಪಾದನೆ ಮತ್ತು ಹಿಂಸಾಚಾರದ ಹಿನ್ನೆಲೆಯಲ್ಲಿ ನಡೆದಿವೆ. ಸಿಪಿಐ(ಎಂ) ಬೆಂಬಲಿಗರನ್ನು ದೊಡ್ಡ ಪ್ರಮಾಣದಲ್ಲಿ ಮತದಾನದಲ್ಲಿ ಭಾಗವಹಿಸದಂತೆ ದೈಹಿಕವಾಗಿ ತಡೆದಿರುವ ವರದಿಗಳು ವ್ಯಾಪಕ ಪ್ರಮಾಣದಲ್ಲಿ ಬಂದಿವೆ. ಚುನಾವಣೆಗಳನ್ನು 'ಮುಕ್ತ ಮತ್ತು ನ್ಯಾಯಸಮ್ಮತ'ವಾಗಿ ನಡೆಸುವ ಚುನಾವಣಾ ಆಯೋಗದ ಭರವಸೆಗಳನ್ನು ಜಾರಿಗೆ ತರಬೇಕು ಎಂಬ ಪಕ್ಷದ ಪತ್ರಗಳನ್ನು ಆಯೋಗ ಗಮನಕ್ಕೆ ತಗೊಳ್ಳದೇ ಹೋಗಿದೆ. ಚುನಾವಣೆಗಳ ಸಮಯದಲ್ಲಿ ಪಶ್ಚಿಮ ಬಂಗಾಲದಲ್ಲಿ ಇಬ್ಬರು ಬೆಂಬಲಿಗರು ಮತ್ತು ತ್ರಿಪುರಾದಲ್ಲಿ ಒಬ್ಬರು ಪ್ರಾಣ ಕಳಕೊಂಡಿದ್ದಾರೆ. ಎರಡೂ ರಾಜ್ಯಗಳಲ್ಲಿ ಚುನಾವಣಾ ನಂತರದ ಹಿಂಸಾಚಾರಗಳು ಮುಂದುವರೆದಿವೆ. ಇದು ಕೋಮು ಘರ್ಷಣೆಗಳತ್ತ ಅಪಾಯಕಾರೀ ತಿರುವು ಪಡೆಯುತ್ತಿದೆ.

ಚುನಾವಣಾ ಫಲಿತಾಂಶಗಳನ್ನು ಘೋಷಿಸಿದ ಬೆನ್ನಲ್ಲೇ ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳ ವರದಿಗಳು ಹರ್ಯಾಣ, ಮಧ್ಯಪ್ರದೇಶಗಳಿಂದ ಬಂದಿವೆ. ಇದು, ಹೊಸ ಸರಕಾರ ಎಲ್ಲರನ್ನೂ ಒಳಗೊಳ್ಳುವಂತದ್ದು ಆಗಿರುತ್ತದೆ, ಮತ್ತು ಎಲ್ಲ ಜನವಿಭಾಗಗಳ ನಡುವೆ ವಿಶ್ವಾಸವನ್ನು ನಿರ್ಮಿಸುತ್ತದೆ ಎಂಬ ಮತ್ತೆ ಪ್ರಧಾನ ಮಂತ್ರಿಯಾಗಲಿರುವ ನರೇಂದ್ರ ಮೋದಿಯವರ ಘೋಷಣೆ–ಸಬ್ ಕಾ ಸಾಥ್, ಸಬ್ ಕಾ ವಿಶ್ವಾಸ್–ಗೆ ತದ್ವಿರುದ್ಧವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಭಾರತೀಯ ಜನತೆ ಮತ್ತು ನಮ್ಮ ದೇಶದ ಮುಂದೆ ದೊಡ್ಡ ಸವಾಲುಗಳಿವೆ ಎಂಬುದು ಸ್ಪಷ್ಟ ಎಂದು ಹೇಳಿದೆ.

ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದ, ಸಂವಿಧಾನಿಕ ಸಂಸ್ಥೆಗಳ ರಕ್ಷಣೆ, ಜನಗಳ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಕಾಯ್ದುಕೊಳ್ಳುವುದು ಹಾಗೂ ಜನಗಳ ಜೀವನಾಧಾರಗಳ ಪ್ರಶ್ನೆಗಳು– ಈ ಎಲ್ಲ ಸವಾಲುಗಳನ್ನು ಎದುರಿಸಲು ಮುಂದೆ ಬರಬೇಕು ಎಂದು ಸಿಪಿಐ(ಎಂ) ಭಾರತೀಯ ಜನತೆಗೆ ಬಲವಾದ ಮನವಿ ಮಾಡಿದೆ.

ನಮ್ಮ ಸಾಮಾಜಿಕ ಬಂಧದ ನೆಚ್ಚಿನ ಸಾಮರಸ್ಯವನ್ನು ಬಲಪಡಿಸಬೇಕು ಮತ್ತು ಮುಂದೆ ಬರಲಿರುವ ಸವಾಲುಗಳನ್ನು ಎದುರಿಸಲು ಐಕ್ಯತೆಯಿಂದ ಎದ್ದು ನಿಲ್ಲಬೇಕು ಎಂದು ಭಾರತೀಯ ಜನತೆಯ ಎಲ್ಲ ವಿಭಾಗಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ ನೀಡಿದೆ.

ಕೋಮುವಾದಿ ಅಬ್ಬರಮಯ ರಾಷ್ಟ್ರಭಕ್ತಿ ಬಿಜೆಪಿಯ ಯಶಸ್ಸಿನ ಮಂತ್ರವಾಯಿತು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚುರಿಯವರು ಮೇ 27ರಂದು ಪೊಲಿಟ್‌ಬ್ಯುರೊ ಸಭೆಯ ಕಲಾಪಗಳನ್ನು ಕುರಿತಂತೆ ಪತ್ರಿಕಾಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು.

ದೇಶದಲ್ಲಿ ಒಂದು ನಕಾರಾತ್ಮಕ ಪ್ರಚಾರ ನಡೆಯಿತು, ಇದು ಬಿಜೆಪಿ ವಿಜಯಕ್ಕೆ ಕಾರಣವಾಯಿತೇ ಎಂಬ ಪ್ರಶ್ನೆಗೆ ಉತ್ತರಿಸುತ್ತ ಯೆಚುರಿಯವರು, ಎಡಪಕ್ಷಗಳು ಜನಗಳ ಪ್ರಶ್ನೆಗಳನ್ನು ಮುಂಚೂಣಿಗೆ ತರಲು ಪ್ರಯತ್ನಿಸಿದವು, ಆದರೆ ಇವನ್ನೆಲ್ಲ ಸಂಪೂರ್ಣವಾಗಿ ಬದಿಗೆ ತಳ್ಳುವುದು ಬಜೆಪಿಗೆ ಸಾಧ್ಯವಾಯಿತು ಎಂದರು.

ಪಶ್ಚಿಮ ಬಂಗಾಲದಲ್ಲಿ ಎಡಪಕ್ಷಗಳ ಮತಗಳಿಕೆಯ ಇಳಿಕೆಯ ಬಗ್ಗೆ ಕೇಳಿದಾಗ, ಅಲ್ಲಿ ಟಿಎಂಸಿ ಮತ್ತು ಬಿಜೆಪಿ ಜತೆಗೂಡಿ ಒಂದು 'ಸ್ಪರ್ಧಾತ್ಮಕ ಕೋಮುವಾದ'ದ ವಾತಾವರಣವನ್ನು ನಿರ್ಮಿಸಿದರು, ಇಂತಹ ವಾತಾವರಣದಲ್ಲಿ ಪ್ರಜಾಪ್ರಭುತ್ವ ಪ್ರಜ್ಞೆಯು ಇಳಿಮುಖಗೊಳ್ಳುತ್ತದೆ ಎಂದು ಯೆಚುರಿ ಹೇಳಿದರು. ಒಂದು ಬಲವಾದ 'ಮಹಾಮೈತ್ರಿ' ಸಮಯಕ್ಕೆ ಸರಿಯಾಗಿ ಏರ್ಪಟ್ಟಿದ್ದರೆ ಚುನಾವಣಾ ಫಲಿತಾಂಶ ಬೇರೆಯಾಗಿರುತ್ತಿತ್ತು ಎಂಬ ಅಭಿಪ್ರಾಯಕ್ಕೆ ಉತ್ತರಿಸುತ್ತ, ಬಿಜೆಪಿ/ಎನ್‌ಡಿಎ ಗೆದ್ದ 200ಕ್ಕೂ ಸೀಟುಗಳಲ್ಲಿ ಅದು 50%ಕ್ಕಿಂತಲೂ ಹೆಚ್ಚು ಮತಗಳನ್ನು ಪಡೆದಿವೆ ಎಂಬ ಸಂಗತಿಯತ್ತ ಯೆಚುರಿ ಗಮನ ಸೆಳೆದರು. ಆದ್ದರಿಂದ ಮೈತ್ರಿಯ ಬಲವು ಒಂದು ದೊಡ್ಡ ನಿರ್ಣಾಯಕ ಪ್ರಶ್ನೆಯಾಗಿಲ್ಲ ಎಂದರು.

ಸಿಪಿಐ(ಎಂ)ನ ಮುಂದಿನ ದಾರಿಯ ಬಗ್ಗೆ ಹೇಳುತ್ತ ಅವರು, ಪಕ್ಷವು ನಾಲ್ಕು ಪ್ರಮುಖ ಕಾರ್ಯಭಾರಗಳನ್ನು ಕೈಗೆತ್ತಿಕೊಳ್ಳುತ್ತದೆ ಎಂದರು. ಅವೆಂದರೆ:

- ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದ, ಸಂವಿಧಾನಿಕ ಸಂಸ್ಥೆಗಳ ರಕ್ಷಣೆ,
- ಜನಗಳ ಹಕ್ಕುಗಳನ್ನು ಕಾಯ್ದುಕೊಳ್ಳುವುದು
- ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳುವುದು
- ಜನಗಳ ಜೀವನಾಧಾರಗಳ ಪ್ರಶ್ನೆಗಳ ಮೇಲೆ ಆಂದೋಲನಗಳನ್ನು ಕಟ್ಟುವುದು.

ಬಿಜೆಪಿ ಒಡ್ಡಿರುವ ಅಪಾಯವನ್ನು ಪ್ರತಿಪಾದಿಸುವಲ್ಲಿನ ಎಲ್‌ಡಿಎಫ್ ಯಶಸ್ಸಿನಿಂದ ಯುಡಿಎಫ್‌ಗೆ ಲಾಭ–ಕೇರಳ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ

ಕೇರಳದಲ್ಲಿ ಎಲ್‌ಡಿಎಫ್‌ಗೆ ತೀವ್ರ ಹಿನ್ನಡೆ ಬಹಳಷ್ಟು ಪ್ರಜಾಪ್ರಭುತ್ವವಾದಿಗಳಿಗೆ ಆಶ್ಚರ್ಯ ಮತ್ತು ಖೇದ ಉಂಟುಮಾಡಿದೆ. ಈ ಬಗ್ಗೆ ವಿಶ್ಲೇಷಿಸುತ್ತ ಸಿಪಿಐ(ಎಂ) ನ ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ ಇದು ತಾತ್ಕಾಲಿಕ ಹಿನ್ನಡೆ ಎಂದು ಅಭಿಪ್ರಾಯ ಪಟ್ಟಿದೆ. ಮತಗಟ್ಟೆ ಸಮಿತಿಗಳಿಂದ ಹಿಡಿದು ರಾಜ್ಯ ಸಮಿತಿಯ ವರೆಗೆ ಪಕ್ಷದ ಎಲ್ಲ ಸಮಿತಿಗಳು ಈ ಬಗ್ಗೆ ವಿವರವಾದ ಪರಾಮರ್ಶೆಗಳನ್ನು ನಡೆಸಿ ಕಾರಣಗಳನ್ನು, ಲೋಪಗಳನ್ನು ಗುರುತಿಸಿ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕಾರ್ಯದರ್ಶಿ ಮಂಡಳಿ ಹೇಳಿದೆ.

ಪಕ್ಷವು ಅಂಗೀಕರಿಸಿದ ಮೂರು ಕಾರ್ಯಭಾರಗಳ ಆಧಾರದಲ್ಲಿ ರಾಜ್ಯದಲ್ಲಿ ಜನಗಳ ನಡುವೆ ಪ್ರಚಾರ ಕಾರ್ಯ ನಡೆಯಿತು. ಮೋದಿ ಸರಕಾರ ಮತ್ತೆ ಬಂದರೆ ಅದು ಸಮಾಜಕ್ಕೆ ಒಡ್ಡುವ ಅಪಾಯವನ್ನು ಜನಗಳಿಗೆ ಮನಗಾಣಿಸುವಲ್ಲಿ ಎಲ್‌ಡಿಎಫ್ ಯಶಸ್ವಿಯಾಗಿದೆ. ಆದರೆ ಇದರ ಪ್ರಯೋಜನ ಯುಡಿಎಫ್‌ಗೆ ಸಿಕ್ಕಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಮಾತ್ರವೇ ಪರ್ಯಾಯ ಸರಕಾರವನ್ನು ರಚಿಸಬಲ್ಲದು ಎಂಬ ತಿಳುವಳಿಕೆಯ ಆಧಾರದಲ್ಲಿ ಜನಗಳು ಯುಡಿಎಫ್‌ಗೆ ಮತನೀಡಿದರು. ಲೋಕಸಭೆಯಲ್ಲಿ ಎಡ ಪಕ್ಷಗಳನ್ನು ಬಲಪಡಿಸಬೇಕಾದ ಅಗತ್ಯವನ್ನು ಜನಗಳಿಗೆ ಮನಗಾಣಿಸುವುದು ಸಾಧ್ಯವಾಗಲಿಲ್ಲ ಎಂದು ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ.

ಕೇರಳದಲ್ಲಿ ಎಡಪಕ್ಷಗಳ ಪಾರಂಪರಿಕ ವೋಟ್ ನೆಲೆ ಸ್ವಲ್ಪ ಮಟ್ಟಿಗೆ ಕುಗ್ಗಿದೆ. ಇವರಲ್ಲಿ ಧಾರ್ಮಿಕ ನಂಬಿಕೆಗಳಿರುವ ಎಲ್‌ಡಿಎಫ್ ಬೆಂಬಲಿಗರ ದಾರಿ ತಪ್ಪಿಸುವಲ್ಲಿ ಬಲಪಂಥೀಯ ಶಕ್ತಿಗಳು ಯಶಸ್ಸು ಪಡೆದಿರುವುದು ಪ್ರಾಥಮಿಕ ವಿಶ್ಲೇಷಣೆಗಳಿಂದ ಕಂಡು ಬಂದಿದೆ. ಇದಕ್ಕೆ ಕಾರಣಗಳನ್ನು ಪಕ್ಷವು ಪರೀಕ್ಷಿಸುವುದು, ಈ ಜನಗಳ ಬೆಂಬಲವನ್ನು ಮತ್ತೆ ಗಳಿಸಲು ಸರಿಪಡಿಕೆ ಕ್ರಮಗಳನ್ನು ಐಕ್ಯತೆಯಿಂದ ಕೈಗೊಳ್ಳಲಾಗುವದು ಎಂದು ಸಿಪಿಐ(ಎಂ) ಕೇರಳ ಕಾರ್ಯದರ್ಶಿ ಮಂಡಳಿ ಹೇಳಿದೆ.

ತ್ರಿಪುರಾದಲ್ಲಿ ಚುನಾವಣೆಗಳ ನಂತರವೂ ಬಿಜೆಪಿ ಹಿಂಸಾಚಾರ ಮುಂದುವರೆದಿದೆ.





ಸಂಪಾದಕೀಯ

ಎಡಪಕ್ಷಗಳ ಕಾರ್ಯಕರ್ತರು ಧೃತಿಗೆಡದಿರಲಿ

17ನೇ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳಿಗೆ ತೀವ್ರ ಹಿನ್ನಡೆಯಾಗಿದೆ. 2014 ರಲ್ಲಿ ಎಡಪಕ್ಷಗಳು ತೀವ್ರ ಹಿನ್ನಡೆ ಅನುಭವಿಸಿದ್ದವು. ಈ ಬಾರಿ ಹಿನ್ನಡೆ ಮತ್ತಷ್ಟು ತೀವ್ರವಾಗಿದೆ. 2014 ರಲ್ಲಿ ಸಿಪಿಐ(ಎಂ) 9 ಸ್ಥಾನಗಳನ್ನು ಮತ್ತು ಸಿಪಿಐ ಒಂದು ಸ್ಥಾನವನ್ನು ಪಡೆದಿತ್ತು. ಸಿಪಿಐ(ಎಂ) ಬೆಂಬಲಿತ ಇಬ್ಬರು ಸ್ವತಂತ್ರ ಅಭ್ಯರ್ಥಿಗಳು ಜಯಗಳಿಸಿದ್ದರು. ಆದರೆ 2019 ರಲ್ಲಿ ಸಿಪಿಐ(ಎಂ) ಕೇವಲ 3 ಸ್ಥಾನಗಳಲ್ಲಿ ಮತ್ತು ಸಿಪಿಐ 2 ಸ್ಥಾನಗಳಲ್ಲಿ ಜಯಗಳಿಸಿವೆ. ಈ ಹಿನ್ನಡೆ ತೀರಾ ಅನಿರೀಕ್ಷಿತವಾಗಿತ್ತು. ಸ್ವಾತಂತ್ರ್ಯದ ನಂತರ, ಎಡಪಕ್ಷಗಳು ಇಷ್ಟೊಂದು ಕಡಿಮೆ ಸ್ಥಾನಗಳನ್ನು ಎಂದೂ ಪಡೆದಿರಲಿಲ್ಲ.

ಈ ಅನಿರೀಕ್ಷಿತ ಹಿನ್ನಡೆಯಿಂದಾಗಿ ದೇಶಾದ್ಯಂತ ಎಡಪಕ್ಷಗಳ ಸಾವಿರಾರು ಕಾರ್ಯಕರ್ತರಿಗೆ ಮತ್ತು ಹಿತೈಷಿಗಳಿಗೆ ತೀರಾ ನಿರಾಶೆಯಾಗಿದೆ. ವಿಶೇಷವಾಗಿ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಎಡ ಪಕ್ಷಗಳ ಕಾರ್ಯಕರ್ತರು ಎಡ ಪಕ್ಷಗಳ ಅಭ್ಯರ್ಥಿಗಳ ಗೆಲುವಿಗಾಗಿ ಹಗಲು ರಾತ್ರಿ ತಮ್ಮ ಜೀವದ ಹಂಗು ತೊರೆದು, ಆರೆಸ್ಸೆಸ್ ಹಂತಕರನ್ನು, ತೃಣಮೂಲ ಕಾಂಗ್ರೆಸಿನ ಕೊಲೆಗಡುಕರನ್ನು ಎದುರಿಸಿ ಶ್ರಮಿಸಿದ್ದ ಕಾರ್ಯಕರ್ತರು ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ.

ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕ ರಂಗ ಅಧಿಕಾರದಲ್ಲಿರುವ ಕೇರಳದಲ್ಲಿ ಕೇವಲ ಒಂದೇ ಒಂದು ಲೋಕಸಭಾ ಸ್ಥಾನಗಳಿಸಲು ಸಾಧ್ಯವಾಗಿದ್ದು ತೀರಾ ನಿರಾಶಾದಾಯಕವಾಗಿದೆ. ತಮಿಳುನಾಡಿನಲ್ಲಿ ಮಾತ್ರ ಡಿಎಂಕೆ ನೇತೃತ್ವದ ಮೈತ್ರಿಯ ಭಾಗವಾಗಿ ಸ್ಪರ್ಧಿಸಿದ್ದ ಎರಡೆರಡು ಸ್ಥಾನಗಳಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಯಗಳಿಸಿದ್ದು ಗಮನಾರ್ಹವಾಗಿದೆ. ಕೇರಳದ ಅಲಪುರಂ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಒಂದೂ ಸ್ಥಾನವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

ಎಡಪಕ್ಷಗಳ ಈ ಚುನಾವಣಾ ಹಿನ್ನಡೆಯನ್ನು ಬೇರೆ ಬೇರೆಯಾಗಿ ವ್ಯಾಖ್ಯಾನಿಸಲಾಗುತ್ತಿದೆ. ಭಾರತದ ರಾಜಕಾರಣದಲ್ಲಿ ಎಡಪಕ್ಷಗಳು ಅಪ್ರಸ್ತುತವಾಗುತ್ತಿವೆ ಎಂದು ತೀರಾ ಬಲಪಂಥೀಯರು ವಿಶ್ಲೇಷಿಸುತ್ತಾ ಬಂದಿದ್ದಾರೆ. 17ನೇ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳ ಪರಾಭಾವದ ಹಿನ್ನೆಲೆಯಲ್ಲಿ ಈ ಟೀಕೆ ಇನ್ನೂ ಹೆಚ್ಚಾಗಲಿದೆ. ಆದರೆ ಎಡಪಕ್ಷಗಳಿಗೆ ಉಂಟಾಗುವ ಹಿನ್ನಡೆ ಒಂದು ತಾತ್ಕಾಲಿಕ ವಿದ್ಯಮಾನವಾಗಿದೆ. ಎಡಪಂಥೀಯ ದಾರಿ ತಿರುವು ಮುರುವುಗಳ ದಾರಿ. ಒಮ್ಮೆ ಏರು, ಒಮ್ಮೆ ತಗ್ಗು, ಒಮ್ಮೆ ಜಯ, ಇನ್ನೊಮ್ಮೆ ಅಪಜಯ.

ಎಡಪಕ್ಷಗಳು ತಮ್ಮ ನಡೆಯನ್ನು ಕಾಲಕಾಲಕ್ಕೆ ಸ್ವವಿಮರ್ಶೆ ಮಾಡಿಕೊಳ್ಳುತ್ತವೆ. ತಪ್ಪುಗಳನ್ನು ಒಪ್ಪಿಕೊಳ್ಳುತ್ತವೆ. ಪಾಠ ಕಲಿಯುತ್ತವೆ. ಈ ಚುನಾವಣಾ ಹಿನ್ನಡೆಯ ಬಗ್ಗೆ ಎಡಪಕ್ಷಗಳು ಈಗಾಗಲೇ ಸ್ವವಿಮರ್ಶಾ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿವೆ. ಮುಕ್ತವಾದ ಸ್ವಯಂಟೀಕಾ ವಿಧಾನದ ಮೂಲಕ ಎಡಪಕ್ಷಗಳು ತಮ್ಮ ವಿಫಲತೆಯ ಮೂಲವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತವೆ. ಆ ಮೂಲಕ ತಮ್ಮ ರಾಜಕೀಯ ತಂತ್ರಾತ್ಮಕ ಧೋರಣೆಯಲ್ಲಿ ತಿದ್ದುಪಡಿಗಳನ್ನು ಮಾಡಿಕೊಳ್ಳುತ್ತವೆ.

ಭಾರತದ ಸಮಾಜದಲ್ಲಿ ಎಡ ಪಕ್ಷಗಳ ಪ್ರಸ್ತುತತೆಯನ್ನು ಮನಗಂಡವರೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ಅವರು ಎಡಪಕ್ಷಗಳ ಸದಸ್ಯರಾಗಿರಬಹುದು, ಅಥವ ಹಿತೈಷಿಗಳಾಗಿರಬಹುದು. ಶೋಷಿತರನ್ನು ಮತ್ತು ದಮನಿತರನ್ನು ಅವರು ಸಂಘಟಿಸುತ್ತಾರೆ. ಅವರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಟಗಳನ್ನು ಸಂಘಟಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಸಾವು ನೋವು ಕಷ್ಟ ನಷ್ಟ ಅನುಭವಿಸುತ್ತಾರೆ. ಎಡಪಕ್ಷಗಳ ಚಳುವಳಿ ಇಲ್ಲದ ಸಮಾಜವನ್ನು ಅವರು ಊಹಿಸಲಾರರು. ಎಡ ಇಲ್ಲದ ಸಮಾಜದಲ್ಲಿ ದುರ್ಬಲರಿಗೆ ಬಲವೆಲ್ಲಿದೆ? ಆದ್ದರಿಂದ ಶೋಷಣೆ ಎಂಬುದು ಇರುವ ತನಕ, ಸಾಮಾಜಿಕ ದಮನ ಎಂಬುದು ಇರುವ ತನಕ ಅವರ ಪಕ್ಷಪಾತಿಯಾಗಿರುವ ಎಡಪಕ್ಷಗಳು ಎಂದೂ ಅಪ್ರಸ್ತುತವಾಗಲಾರವು.

ಚುನಾವಣೆಗಳೇ ಎಡಪಕ್ಷಗಳ ಗುರಿಯಾಗಿರುವುದಿಲ್ಲ. ಶೋಷಿತ ಹಾಗೂ ದಮನಿತ ಜನಸಮೂಹಗಳನ್ನು ಒಂದು ಸಾಮಾಜಿಕ ಕ್ರಾಂತಿಗೆ ಸಜ್ಜುಗೊಳಿಸುವುದು ಎಡಪಕ್ಷಗಳ ಗುರಿಯಾಗಿರುತ್ತದೆ. ಈ ಗುರಿ ಸಾಧನೆಯ ಹಾದಿಯಲ್ಲಿ ಚುನಾವಣೆಗಳು ಎದುರಾದಾಗ ಎಡಪಕ್ಷಗಳು ಚುನಾವಣೆಗಳಲ್ಲಿ ಭಾಗವಹಿಸುತ್ತವೆ ಮತ್ತು ಆ ಮೂಲಕ ದೇಶದ ಎಡ ಕ್ರಾಂತಿಕಾರಿ ಆಂದೋಲನವನ್ನು ಬಲಪಡಿಸಿಕೊಳ್ಳುತ್ತವೆ. ಚುನಾವಣೆಗಳ ಸಂದರ್ಭದಲ್ಲಿ ಆಳುವ ವರ್ಗಗಳ ಪಕ್ಷಗಳ ಜನವಿರೋಧಿ ಧೋರಣೆಗಳಿಗೆ ಪರ್ಯಾಯವಾದ ಜನಪರ ಧೋರಣೆಗಳನ್ನು ಎಡಪಕ್ಷಗಳು ಮತದಾರರ ಮುಂದಿಡುತ್ತವೆ. ಚುನಾವಣೆಗಳಲ್ಲಿ ಎಡಪಕ್ಷಗಳನ್ನು ಗೆಲ್ಲಿಸುವುದು ಹೇಗೆ ಸಮಾಜ ಬದಲಾವಣೆಯ ಗುರಿಯತ್ತ ಒಂದು ದೃಢವಾದ ಹೆಜ್ಜೆಯಾಗುತ್ತದೆ ಎಂಬುದನ್ನು ಮತದಾರರಿಗೆ ಮನವರಿಕೆ ಮಾಡುತ್ತವೆ.

ಆಳುವ ವರ್ಗಗಳು ಮತ್ತು ಅವುಗಳ ರಾಜಕೀಯ ಪಕ್ಷಗಳು ಸಹಜವಾಗಿ ಎಡಪಕ್ಷಗಳ ಈ ಪ್ರಯತ್ನವನ್ನು ವಿಫಲಗೊಳಿಸಲು ಎಲ್ಲಾ ತಂತ್ರ ಕುತಂತ್ರಗಳನ್ನು ಹೂಡುತ್ತವೆ. ಆಳುವ ವರ್ಗಗಳ ಎಲ್ಲಾ ಪಕ್ಷಗಳು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಡಪಕ್ಷಗಳ ವಿರುದ್ಧ ಒಂದಾಗುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಎಡರಂಗದ ಸುಧೀರ್ಘ ಆಳ್ವಿಕೆಯನ್ನು ಕೊನೆಗಾಣಿಸಲು ಎಲ್ಲರೂ ಒಂದಾಗಿದ್ದನ್ನು ನಾವು ನೋಡಿದ್ದೇವೆ. ಹಿಂಸಾಚಾರ, ಚುನಾವಣಾ ಅಕ್ರಮಗಳ ಮೂಲಕ ಅವರು ಎಡಪಕ್ಷಗಳ ಬೆಂಬಲಿಗರು ಮತದಾನ ಮಾಡದಂತೆ ತಡೆಯುತ್ತಾರೆ. ಮತದಾರರನ್ನು ಒಡೆಯಲು, ಅವರ ಐಕ್ಯತೆಯನ್ನು ಮುರಿಯಲು ಜಾತಿ, ಧರ್ಮವನ್ನು ಬಳಸುತ್ತಾರೆ. ಹಣ, ಅಧಿಕಾರದ ಆಸೆ ಆಮಿಷ ಒಡ್ಡುತ್ತಾರೆ. ಈ ಕಾರಣಗಳಿಂದಾಗಿ ಎಡಪಕ್ಷಗಳು ಚುನಾವಣೆಗಳಲ್ಲಿ ಪರಾಭವಗೊಳ್ಳುತ್ತಿರುತ್ತವೆ.

ಬಂಡವಾಳಶಾಹಿ ರಾಜಕೀಯ ಪಕ್ಷಗಳು ಚುನಾವಣೆಗಳನ್ನು ಗೆಲ್ಲಲು ಅನುಸರಿಸುತ್ತಿರುವ ಅಕ್ರಮ ವಿಧಾನಗಳ ಬಗ್ಗೆ ಮತದಾರರಿಗೆ ತಿಳುವಳಿಕೆ ನೀಡುವ, ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವ ಮಹತ್ತರವಾದ ಜವಾಬ್ದಾರಿ ಎಡಪಕ್ಷಗಳಿಗೆ ಇದೆ. ಎಡಪಕ್ಷಗಳ ಕಾರ್ಯಕರ್ತರು ಚುನಾವಣಾ ಸೋಲುಗಳಿಂದ ವಿಚಲಿತರಾಗಬಾರದು. ಇಂತಹ ಸೋಲುಗಳನ್ನು ಸವಾಲಾಗಿ ಸ್ವೀಕರಿಸಬೇಕು. ಸಮರಶೀಲ ಹೋರಾಟಗಳು ಹೆಚ್ಚಾಗಬೇಕು. ಹೆಚ್ಚೆಚ್ಚು ಜನಸಮೂಹಗಳನ್ನು ಒಳಗೊಳ್ಳುವ ಸುಧೀರ್ಘ ಹೋರಾಟಗಳನ್ನು ಏರ್ಪಡಿಸಿ ಯಶಸ್ವಿಗೊಳಿಸಬೇಕು. ಎಡಪಕ್ಷಗಳ ಕಾರ್ಯಕರ್ತರಿಗೆ ಹಿಂಜರಿಕೆಯಿಲ್ಲ, ನಿರಾಶೆಯಿಲ್ಲ, ನಿರುತ್ಸಾಹವಿಲ್ಲ. ಮುನ್ನಡೆಯೋಣ ಸಂಗಾತಿಗಳೇ ಮುನ್ನಡೆಯೋಣ. ■

ವಿಜಯಪುರ: ಸಮರ್ಪಕ ಬರ ನಿರ್ವಹಣೆಗಾಗಿ ಆಗ್ರಹ

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್ ಪಕ್ಷ) ಜಿಲ್ಲಾ ಸಮಿತಿ ವಿಜಯಪುರ ವತಿಯಿಂದ ಬೃಹತ್ ಮೆರವಣಿಗೆ ಮೂಲಕ ತೆರಳಿ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೆರವಣಿಗೆಯು ನಗರ ಅಂಬೇಡ್ಕರ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರಿಗೆ ತಲುಪಿ ಸಭೆಯಾಗಿ ಮಾರ್ಪಟ್ಟಿತು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರದ ಭೀಮಶಿ ಕಲಾದಗಿ ಮಾತನಾಡಿ, ಕರ್ನಾಟಕ ಸರ್ಕಾರ ಜಿಲ್ಲೆಯನ್ನು ಶಾಶ್ವತ ಬರಗಾಲ ಎಂದು ಘೋಷಿಸಿ, ಸೇರಿಸಿದೆ. 1972 ರಲ್ಲಿ ಜಿಲ್ಲೆ ಭೀಕರ ಬರಗಾಲ ಬಿದ್ದಿತ್ತು. ಈ ವರ್ಷವೂ ಭೀಕರ ಬರಗಾಲ ಬಿದ್ದು, ಹಿಂಗಾರಿ, ಮುಂಗಾರಿ ಮಳೆ ಸರಿಯಾಗಿ ಬೀಳದೆ, ಎರಡೂ ಬೆಳೆಗಳು ನಷ್ಟವಾಗಿವೆ. ರೈತರು ಸಂಕಷ್ಟದಲ್ಲಿದ್ದಾರೆ. ಶಾಶ್ವತ ಬರಗಾಲ ಕಾಮಗಾರಿ ಸಮರೋಪಾದಿಯಲ್ಲಿ ಮಾಡಬೇಕು ಎಂದರು. ಹಿಂಗಾರಿ, ಮುಂಗಾರಿ ಬೆಳಗಳು ನಷ್ಟವಾಗಿದ್ದು, 25,000 ರೂ. ಪರಿಹಾರಧನ ಕೊಡಬೇಕು., ಆಲಮಟ್ಟಿ ಅಣೆಕಟ್ಟು 519 ಇದ್ದಿದ್ದನ್ನು 524ರ ವರೆಗೆ ಗೇಟ್ ಅಳವಡಿಸಬೇಕು. ಆಲಮಟ್ಟಿ ಅಣೆಕಟ್ಟಿನಲ್ಲಿ ಲಭ್ಯವಿದ್ದ ನೀರನ್ನು ಎಡ, ಬಲ ದಂಡೆ ಕಾಲುವೆಗೆ ನೀರು ಬಿಡಬೇಕು. ನಾರಾಯಣಪುರದಿಂದ



ಎಡದಂಡೆ ಕಾಲುವೆಗೆ ನೀರು ಹರಿಸಬೇಕು. ಸಿಂದಗಿ ಹಾಗೂ ಇಂಡಿ ಕೆಲವು ಭಾಗಕ್ಕೆ ನೀರು ಪೂರೈಸಬೇಕು. ಕೃಷ್ಣಾ ಹಾಗೂ ಭೀಮಾ ನದಿಗಳಿಂದ ಎಲ್ಲ ಕೆರೆಗಳಿಗೆ ನೀರು ತುಂಬಿಸಬೇಕು. ಕೃಷ್ಣಾ ನದಿಗೆ ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡುಗಡೆ ಮಾಡಬೇಕು. ಭೀಮಾನದಿಗೆ ಮಹಾರಾಷ್ಟ್ರದ ಉಜನಿಯಿಂದ ನೀರು ಬಿಡಬೇಕು. ಕೃಷ್ಣಾ ಮೂರನೇ ಹಂತದ ಕಾಲುವೆಗಳು ರಸ್ತೆ ಮೇಲೆ ಮೇಲ್ಸೇತುವೆಗಳು, ಸೊಲ್ಲಾಪುರ, ಇಂಡಿ, ಬುರಣಾಪುರ ಮೇಲ್ಸೇತುವೆಗಳು ಬಾಕಾಕಮಾನಿನಂತಿವೆ ತಕ್ಷಣ ಮೇಲ್ಸೇತುವೆಗಳನ್ನು ಪೂರ್ಣಗೊಳಿಸಬೇಕು. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿಯಲ್ಲಿ ಭ್ರಷ್ಟಾಚಾರ ಅವ್ಯವಾರ ನಡೆದಿದ್ದು ತಡೆಗಟ್ಟಬೇಕು. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಕೆರೆ ಹೂಳು ತೆಗೆಯಬೇಕು, ಚೆಕ್ ಡ್ಯಾಮ್ ನಿರ್ಮಿಸಬೇಕು, ಕೃಷಿ ಹೊಂಡ ನಿರ್ಮಿಸಬೇಕು, ಹಳ್ಳಗಳಿಗೆ ನೀರು ತಡೆಗೋಡೆ ನಿರ್ಮಿಸಬೇಕು, ಉದ್ಯೋಗ ಖಾತ್ರಿಯಲ್ಲಿ 300 ರೂ.

ಪುಟ 11 ಕ್ಕೆ

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ಕೂಡಲೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಕೈಬಿಡಲು ಸಿಪಿಐ(ಎಂ) ಒತ್ತಾಯ



ಈ ಶಾಲಾ ವರ್ಷದಿಂದ ರಾಜ್ಯದ ಆಯ್ದ ಹಲವಾರು ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸುವುದಾಗಿ ಕರ್ನಾಟಕ ರಾಜ್ಯ ಸರಕಾರ ಪ್ರಕಟಿಸಿದೆ. ಮುಂದಿನ ಸಾಲಿನಿಂದ ಇನ್ನೂ ಹೆಚ್ಚು ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ವಿಸ್ತರಿಸುವುದಾಗಿ ಪ್ರಕಟಿಸಲಾಗಿದೆ. ಹೀಗೆ ಮುಂದುವರಿದು ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಸಂಪೂರ್ಣಗೊಂಡರೆ, ಕನ್ನಡ ಸಂಸ್ಕೃತಿಯನ್ನಾಗಲೀ ಪ್ರಾದೇಶಿಕ ಸಂಸ್ಕೃತಿಯನ್ನಾಗಲೀ ಅರ್ಥ ಮಾಡಿಕೊಳ್ಳುವವರೇ ಇಲ್ಲವಾದೀತು. ಬಳಿಕ ನಮ್ಮ ಸಂಸ್ಕೃತಿ ಎಂದು ಹೇಳಿಕೊಳ್ಳಲು ನಮಗೆ ಏನೂ ಉಳಿದಿರುವುದಿಲ್ಲ ಎಂಬುದಾಗಿ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯ ವಾಸುದೇವ ಉಚ್ಚಿಲ ಆತಂಕ ವ್ಯಕ್ತಪಡಿಸಿದರು.

ಅವರು ರಾಜ್ಯದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಆರಂಭಿಸುವುದನ್ನು ವಿರೋಧಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ವತಿಯಿಂದ ಮೇ 27 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

1956 ನವಂಬರ್ 1 ರಂದು ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳೂ ಒಂದಾಗಿ ಕರ್ನಾಟಕ ರಾಜ್ಯ ರಚನೆಯಾಯಿತು. ಕನ್ನಡ ಭಾಷೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಮಾಧ್ಯಮವಾಗಿ ಚಲಾವಣೆಗೆ ಬಂದಿತು. ಮುಂದಿನ ಹಂತದಲ್ಲಿ ಆಡಳಿತವೂ ಕನ್ನಡದಲ್ಲಿರಬೇಕೆಂಬ ಧೋರಣೆ ಚಾಲ್ತಿಗೆ ಬಂತು. ಆದಾಗ್ಯೂ ಶಾಲಾ ಶಿಕ್ಷಣದಲ್ಲಿ ಇತರ ಮಾತೃಭಾಷಾ ಮಾಧ್ಯಮ ಶಾಲೆಗಳಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯಾಗಿಯೂ ಕಲಿಸದಿರುವ ಖಾಸಗಿ ಶಾಲೆಗಳಿದ್ದುವು. ಇದರ ವಿರುದ್ಧವಾಗಿ 1982–83ರ ಅವಧಿಯಲ್ಲಿ ಪ್ರಸಿದ್ಧವಾದ ಗೋಕಾಕ್ ಚಳುವಳಿ ನಡೆದು, ಕನ್ನಡವನ್ನು ಶಾಲೆಗಳಲ್ಲಿ ಒಂದು ಭಾಷೆಯಾಗಿ ಕಲಿಸುವುದನ್ನು ಕಡ್ಡಾಯಗೊಳಿಸಿತು ಎಂದು ವಾಸುದೇವ ಉಚ್ಚಿಲ ವಿವರಿಸಿದರು.

1990 ರಿಂದ ಈಚೆಗೆ ಆರ್ಥಿಕತೆಯ ಖಾಸಗೀಕರಣದ ಜೊತೆಗೆ ಶಿಕ್ಷಣದ ಖಾಸಗೀಕರಣವೂ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ದೇಶಾದ್ಯಂತ ಹೆಚ್ಚಿದೆ. ಶಿಕ್ಷಣವು ವ್ಯಾಪಾರೀಕರಣಗೊಂಡಿದೆ. ಕಾರ್ಪರೇಟ್ ಒತ್ತಡಗಳಿಂದ ಸರಕಾರಿ ಶಾಲೆಗಳಿಗೆ ಸಮಾನಾಂತರವಾಗಿ ಇಂಗ್ಲಿಷ್ ಮಾಧ್ಯಮದ ಖಾಸಗೀ ಶಾಲೆಗಳು ಪಟ್ಟಣ, ಹಳ್ಳಿಗಳೆನ್ನದೆ ವಿಸ್ತರಿಸುತ್ತಿವೆ. ಇಂಗ್ಲಿಷ್ ಮಾಧ್ಯಮಕ್ಕೆ ಕರ್ನಾಟಕ ರಾಜ್ಯದ ಎಲ್ಲಾ ಸರಕಾರಗಳೂ ಪ್ರೋತ್ಸಾಹಿಸಿದ್ದರ ಫಲವಾಗಿ ಸರಕಾರಿ ಶಾಲೆಗಳು ದುರ್ಬಲವಾಗಿವೆ; ಸೌಲಭ್ಯಗಳ ಕೊರತೆಯಿಂದ ಬಳಲುತ್ತಿವೆ.

ಈ ಸಾಲಿನಿಂದ ರಾಜ್ಯದ ಹಲವಾರು ಸರಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನು ಆರಂಭಿಸಲು ಮುಖ್ಯ ಮಂತ್ರಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ರಾಜ್ಯ ಸರಕಾರ ಕಾರ್ಯಾರಂಭಿಸಿದ್ದು, ಇದು ಕಾರ್ಪರೇಟ್ ಹಿತಗಳ ರಕ್ಷಣೆಗಾಗಿ, ಬಡಜನರು ಶಿಕ್ಷಣ ಪಡೆಯುವ ಸರಕಾರೀ ಶಾಲೆಗಳನ್ನು ಇನ್ನಷ್ಟು ದುರ್ಬಲಗೊಳಿಸುವ ಸಂಚಾಗಿದೆ. ಕೇರಳ ರಾಜ್ಯವು ಕಳೆದ 3 ವರ್ಷಗಳಿಂದ ಸರಕಾರಿ ಶಾಲೆಗಳನ್ನು ಬಲಿಷ್ಟಗೊಳಿಸುವ ಕಾರ್ಯಯೋಜನೆ ಹಾಕಿಕೊಂಡಿದ್ದು, ಅದನ್ನು ಅಧ್ಯಯನ ಮಾಡಿಯಾದರೂ, ಸರಕಾರೀ ಕನ್ನಡ ಮಾಧ್ಯಮ ಶಾಲೆಗಳನ್ನು ಬಲಪಡಿಸಬೇಕೆಂದು ವಾಸುದೇವ ಉಚ್ಚಿಲ ಆಗ್ರಹಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಇಂಗ್ಲಿಷ್ ಅನ್ನು ಭಾಷೆಯಾಗಿ ಸಮರ್ಥವಾಗಿ ಕಲಿಸುವ ಶಿಕ್ಷಕರನ್ನು ನೇಮಿಸಬೇಕು. ಆದರೆ ಕನ್ನಡ ಮಾಧ್ಯಮ ಶಾಲೆಗಳನ್ನು ಕೈಬಿಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಇಂಗ್ಲಿಷ್ ಮಾಧ್ಯಮದ ಜೊತೆಗೆ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಆರಂಭಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಸರಕಾರದ ಈ ಯೋಜನೆಯಿಂದ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಐ.ಸಿ.ಡಿ.ಎಸ್. ಕಾರ್ಯಕ್ರಮಕ್ಕೆ ಬಾಧೆ ಉಂಟಾಗಲಿದೆ. ಪೌಷ್ಠಿಕ ಆಹಾರ ಹಾಗೂ ಆರೋಗ್ಯ ರಕ್ಷಣೆಯಂಥ ಅಗತ್ಯ ಕಾರ್ಯಕ್ರಮಗಳಿಂದ ಮಕ್ಕಳು ಶಾಲೆಯ ಎಲ್‌ಕೆಜಿಗಳಿಗೆ ಸೇರಿಕೊಳ್ಳುವುದರಿಂದ ವಂಚಿತರಾಗುವರು. ಆದುದರಿಂದ ಎಲ್‌ಕೆಜಿ ಯುಕೆಜಿಗಳನ್ನು ಅಂಗನವಾಡಿಗಳಲ್ಲೇ ಆರಂಭಿಸಿ ಐ.ಸಿ.ಡಿ.ಎಸ್. ಯೋಜನೆಯನ್ನೂ ಉಳಿಸಿಕೊಳ್ಳಬೇಕೆಂದು ವಸಂತ ಆಚಾರಿ ಆಗ್ರಹಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಧನ್ಯವಾದ ಸಲ್ಲಿಸಿದರು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಯು.ಬಿ. ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್ ಹಾಗೂ ಜಿಲ್ಲಾ ಸಮಿತಿ ಸದಸ್ಯರು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ವರದಿ: ವಾ.ಉ.

ಅಂಗನವಾಡಿಯಲ್ಲೇ ಎಲ್‌ಕೆಜಿ / ಯುಕೆಜಿ ಆರಂಭಕ್ಕೆ ಆಗ್ರಹ



ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸುತ್ತಿರುವುದು

ರಾಮದುರ್ಗ: ಅಂಗನವಾಡಿಯಲ್ಲೇ ಎಲ್.ಕೆ.ಜಿ/ ಯುಕೆಜಿ ಪ್ರಾರಂಭಿಸಬೇಕು ಎಂದು ಒತ್ತಾಯಿಸಿ ಅಂಗನವಾಡಿ ನೌಕರರು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು ಗೆ) ಸಂಯೋಜಿತ ತಾಲೂಕಾ ಸಮಿತಿಯಿಂದ ಬುಧವಾರ ತಾ.ಪಂ ಆವರಣದಲ್ಲಿ ಧರಣಿ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಶಾಸಕ ಮಹಾದೇವಪ್ಪ ಯಾದವಾಡ ಅವರಿಗೆ ಮನವಿ ಸಲ್ಲಿಸಿದರು.

ಕಳೆದ 30–35 ವರ್ಷಗಳಿಂದ 3 ರಿಂದ 6 ವರ್ಷದ ಒಳಗಿನ ಮಕ್ಕಳಿಗೆ ಪೌಷ್ಠಿಕ ಆಹಾರ, ಪೂರ್ವ ಪ್ರಾಥಮಿಕ ಶಿಕ್ಷಣ ನೀಡುವದರ ಮೂಲಕ ಅಂಗನವಾಡಿ ನೌಕರರು ಜನಪ್ರೀಯ ಐಸಿಡಿಎಸ್ ಯೋಜನೆಯಡಿಯಲ್ಲಿ ಕಡಿಮೆ ವೇತನದಲ್ಲಿ ತಮ್ಮ ಜೀವನವನ್ನೆ ಕಳೆದಿದ್ದಾರೆ. ಇಂತಹ ಸಮಯದಲ್ಲಿ ಸರಕಾರಿ ಶಾಲೆಗಳಲ್ಲಿ ಪೂರ್ವ ಪ್ರಾರ್ಥಮಿಕ ಶಾಲೆಗಳನ್ನು ತೆರೆದು 3.5 ವರ್ಷ ಮೇಲ್ಪಟ್ಟು ಮಕ್ಕಳಿಗೆ ಬೆಳ್ಳಿಗ್ಗೆ 10 ರಿಂದ ಮಧ್ಯಾಹ್ನ 3.30 ರ ತನಕ ಶಾಲೆ ನಡೆಸಬೇಕು.

ಆದರೇ ಈ ಆದೇಶವನ್ನು ತರುವ ಪೂರ್ವದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಟ್ಟಿಗೆ ಮತ್ತು ಮಕ್ಕಳ, ಶಿಕ್ಷಣ ತಜ್ಞರೊಂದಿಗೆ, ಸಂಘಟನೆಗಳೊಂದಿಗೆ ಸಂವಾದ ನಡೆಸದೇ ಏಕಮುಖವಾಗಿ ಸುತ್ತೋಲೆಯನ್ನು ತರಲಾಗಿದೆ. 1975 ರಲ್ಲಿ ಬಂದ ಐಸಿಡಿಎಸ್ ಯೋಜನೆಯಡಿಯಲ್ಲಿ ಅಂಗನವಾಡಿ ಕೇಂದ್ರಗಳು ಸ್ಥಾಪನೆ ಆಗಿದ್ದೆ 3–6 ವರ್ಷದ ಮಕ್ಕಳಿಗಾಗಿ, ಈಗಾಗಲೇ 16,40,170 ಮಕ್ಕಳು ಅಂಗನವಾಡಿಗಳಲ್ಲಿ ದಾಖಲಾಗಿದ್ದಾರೆ. ಇದೇ ಮಕ್ಕಳೇ ಈಗ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಪಾರಂಭವಾಗುವ ಪಬ್ಲಿಕ್ ಶಾಲೆಗಳಿಗೆ ದಾಖಲು ಆಗಬೇಕಾಗುತ್ತದೆ. ಈ ಮಕ್ಕಳು ಅಲ್ಲಿಗೆ ಹೋದರೆ ಅಂಗನವಾಡಿ ಕೇಂದ್ರದ ಅಗತ್ಯವೇ ಬರುವುದಿಲ್ಲ ಏಕೆಂದರೆ 3 ವರ್ಷದೊಳಗಿನ ಮಕ್ಕಳಿಗೆ ಮನೆಗೆ ಆಹಾರವನ್ನು ಕೊಡಲಾಗುತ್ತದೆ.

6 ವರ್ಷದೊಳಗಿನ ಮಕ್ಕಳಲ್ಲಿ ಶೇ. 40% ದೈಹಿಕ ಮತ್ತು ಶೇ. 80% ಮಾನಸಿಕ ಬೆಳವಣಿಗೆ ನಡೆಯುತ್ತದೆ. ಈ ಸಂಧರ್ಭದಲ್ಲಿ ಅಗತ್ಯ ಪೌಷ್ಠಿಕ ಆಹಾರ ಪ್ರಾರ್ಥಮಿಕ ಆರೋಗ್ಯ ಸವಲತ್ತುಗಳು ಮತ್ತು ಪೂರ್ವ ಪ್ರಾರ್ಥಮಿಕ ಶಿಕ್ಷಣ ಜೊತೆಯಲ್ಲಿರಬೇಕು ಎಂಬ ಕಾರಣಕ್ಕೆ ರೂ. 4200 ಕೋಟಿ ಯನ್ನು ಈಗಾಗಲೇ ಖರ್ಚು ಮಾಡುತ್ತಿದೆ.

ಬೇಡಿಕೆ :

ಅಂಗನವಾಡಿ ಕೇಂದ್ರಗಳಲ್ಲಿ ನಡೆಯುತ್ತಿರುವ ಮಾತೃಪೂರ್ಣ ಕೆಲಸಕ್ಕೆ ಒಬ್ಬ ಹೆಚ್ಚುವರಿ ಸಹಾಯಕಿಯನ್ನು ನೇಮಕ ಮಾಡಬೇಕು. ಪೂರ್ವಪ್ರಾರ್ಥಮಿಕ ಶಿಕ್ಷಣ ಪೂರೈಸಿದವರಿಗೆ ಟಿಸಿ ಯನ್ನು ಕೊಟ್ಟು 1 ನೇ ತರಗತಿಗೆ ಸೇರಿಸುವ ವ್ಯವಸ್ಥೆ ಜಾರಿಗೆ ತರಬೇಕು. ಅಂಗನವಾಡಿ ಮತ್ತು ಸರಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಮಾತ್ರ ಸರಕಾರಿ ಸೌಲಭ್ಯಗಳೆಂದೂ ಘೋಷಿಸಬೇಕು. ಖಾಸಗಿ ಕಾನ್ವೆಂಟ್ ಮತ್ತು ಶಾಲೆಗಳಿಗೆ ಕೊಡುವ ಅನುಮತಿಯನ್ನು ರದ್ದು ಮಾಡಬೇಕು ಸೇರಿದಂತೆ ಇತರ ಬೇಡಿಕೆಗಳಿಗಾಗಿ ಒತ್ತಾಯಿಸಿದರು.

ಮನವಿ:

ರಾಮದುರ್ಗ ತಾಲೂಕಿನ ತಿಮ್ಮಾಪೂರ(ಎಸ್.ಎ) ದಲ್ಲಿ ಸುಮಾರು 450 ಜನಸಂಖ್ಯೆ ಇದ್ದು, ಇಲ್ಲಿ ಸ್ಮಶಾನಕ್ಕೆ ಹಾಗೂ ಇತರ ಸಾರ್ವಜನಿಕ ಉದ್ದೇಶಕ್ಕೆ ಜಾಗೆ ಇಲ್ಲ. ತಾಂಡಾದ ಪಕ್ಕದಲ್ಲಿರುವ ಸ.ನಂ 14 (7 ಎಕರೆ 33 ಗುಂಟೆ) ಜಮೀನು ಮೊದಲು ಕಂದಾಯ ಇಲಾಖೆಯದಾಗಿತ್ತು, ನಂತರ ಅರಣ್ಯ ಇಲಾಖೆಯ ಒಪ್ಪಿಸಿದ್ದು, ಈಗ ಜನತೆಗೆ ಸಮಸ್ಯೆಯಾಗುತ್ತಿದ್ದು, ಮರಳಿ ಆ ಭೂಮಿಯನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಿ ಅಲ್ಲಿನ ನಿವಾಸಿಗಳಿಗೆ ಅನುಕೂಲಕ ಕಲ್ಪಸಿಬೇಕು ಎಂದು ಸಚಿವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಿರಿಯ ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿ, ಗೈಬು ಜೈನೆಖಾನ, ಸರಸ್ವತಿ ಮಾಳಶೆಟ್ಟಿ, ಶಕುಂತಲಾ ನಾರಾಯಣಕರ, ತಾಹೀರಾ ಮಕಾನದಾರ ಮುಂತಾದವರಿದ್ದರು. ■

ವಸತಿ ಶಾಲೆಗಳಿಗೆ ದೇವದಾಸಿ ಮಹಿಳೆಯರ ಮಕ್ಕಳಿಗೆ ಯಾವುದೇ ನಿರ್ಬಂಧಗಳಿಲ್ಲದೇ ನೇರ ಪ್ರವೇಶ

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಮತ್ತು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿಗಳು ನಮ್ಮ ಹಲವು ಹಕ್ಕೊತ್ತಾಯಗಳಿಗಾಗಿ ಜಂಟಿಯಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದ ಪರಿಣಾಮವಾಗಿ,ರಾಜ್ಯ ಸರಕಾರ ದೇವದಾಸಿ ಮಹಿಳೆಯರ ಮಕ್ಕಳಿಗೆ ರಾಜ್ಯದ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿ ವರೆಗಿನ ವಸತಿ ಶಾಲೆಗಳಲ್ಲಿ ಉಚಿತ ಮತ್ತು ಯಾವುದೇ ನಿರ್ಬಂಧಗಳಿಲ್ಲದೇ ನೇರ ಪ್ರವೇಶ ನೀಡಲು ಕ್ರಮವಹಿಸಿದೆ.

ಇದೊಂದು ಸ್ವಾಗತಾರ್ಹ ಮತ್ತು ಹರ್ಷದಾಯಕ ವಿಚಾರವಾಗಿದೆ.

ಇದು ರಾಜ್ಯದ ನಮ್ಮ ಜಂಟಿ ಹೋರಾಟಕ್ಕೆ ಮತ್ತು ದೇವದಾಸಿ ಮಹಿಳೆಯರು ಮತ್ತು ಅವರ ಕುಟುಂಬದ ಸದಸ್ಯರು ನಡೆಸಿದ ಹೋರಾಟಕ್ಕೆ ಸಿಕ್ಕ ಮತ್ತೊಂದು ವಿಜಯವಾಗಿದೆ.

ಈ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳಾದ ಉಮಾ ಮಹಾದೇವನ್ ರವರು ದಿನಾಂಕ 29.10.2018 ರಂದು ಸರಕಾರದ ಪ್ರಧಾನ ಕಾರ್ಯದರ್ಶಿಗಳು,ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಗೆ ಪತ್ರವೊಂದನ್ನು ಬರೆದು ಮಾಹಿತಿ ನೀಡಿದ್ದಾರೆ.

ರಾಜ್ಯದಾದ್ಯಂತ ಎಲ್ಲಾ ದೇವದಾಸಿ ಮಹಿಳೆಯರ ಕುಟುಂಬದ ಸದಸ್ಯರು ಅದನ್ನು ಸದುಪಯೋಗ ಪಡಿಸಿಕೊಳ್ಳಲು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಘಟಕ ವಿನಂತಿಸಿದೆ.

ಅದೇ ರೀತಿ ರಾಜ್ಯ ಸರಕಾರ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು ಇದರ ಪ್ರಯೋಜನ ಸಿಗುವಂತಾಗಲು ಕೂಡಲೇ, ದೇವದಾಸಿ ಮಹಿಳೆಯರಿಗೆ ದೇವದಾಸಿ ಸರ್ಟಿಫಿಕೇಟ್ ಹಾಗೂ ಅವರ ಮಕ್ಕಳಿಗೆ ದೇವದಾಸಿ ಮಹಿಳೆಯರ ಕುಟುಂಬದ ಸದಸ್ಯರೆಂದು ಸರ್ಟಿಫಿಕೇಟ್ ಗಳನ್ನು ಉಚಿತವಾಗಿ ಒದಗಿಸಲು ಒತ್ತಾಯಿಸಿದೆ.

ಅದೇ ರೀತಿ ಇದಕ್ಕಾಗಿ ಅವರನ್ನು ಕೂಡಲೇ ಗಣತಿ ಮಾಡಲು ಕ್ರಮ ವಹಿಸಬೇಕು ಮತ್ತು ಸರ್ಟಿಫಿಕೇಟ್ ನೀಡಬೇಕೆಂದು ಸಂಘಟನೆ ಒತ್ತಾಯಿಸಿದೆ. ■

ಸಿಐಟಿಯು 50ನೇ ಸಂಸ್ಥಾಪನಾ ದಿನಾಚರಣೆ

ಸಮಕಾಲೀನ ಸವಾಲುಗಳನ್ನು ಎದುರಿಸಲು ಕಾರ್ಮಿಕ ವರ್ಗ ಸನ್ನದ್ಧವಾಗಲಿ

ಇಂದು ಕಾರ್ಮಿಕ ವರ್ಗ ಪಡೆಯುತ್ತಿರುವ ಅಲ್ಪ ಸ್ವಲ್ಪ ಸೌಲಭ್ಯಗಳ ಹಿಂದೆಯೂ ಅಪಾರವಾದ ತ್ಯಾಗ ಬಲಿದಾನಗಳ ಹೋರಾಟದ ಪರಂಪರೆಯೇ ಇದೆ. ಅದನ್ನು ಇವತ್ತಿನ ಕಾರ್ಮಿಕರು ಅರ್ಥ ಮಾಡಿಕೊಂಡು ಸಮಕಾಲೀನ ಸವಾಲುಗಳನ್ನು ಎದುರಿಸಲು ಕಾರ್ಮಿಕ ವರ್ಗ ಸನ್ನದ್ಧವಾಗಬೇಕು ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ ಕರೆ ನೀಡಿದರು.

ಹುಬ್ಬಳ್ಳಿ ಎಪಿಎಂಸಿ ಶ್ರಮಿಕ ಭವನದಲ್ಲಿ ಸಿಐಟಿಯು ಜಿಲ್ಲಾ ಸಮಿತಿ ಏರ್ಪಡಿಸಿದ್ದ ಭಾರತ ಕಾರ್ಮಿಕ ಚಳುವಳಿಯ ಶತಮಾನೋತ್ಸವ ಮತ್ತು ಸಿಐಟಿಯು 50 ನೇ ಸಂಸ್ಥಾಪನಾ ದಿನಾಚರಣೆ ಸುವರ್ಣ ಮಹೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಮೇಲೆ ಬ್ರಿಟೀಷರು ಹಾಗೂ ಶ್ರೀಮಂತ ಮಾಲೀಕ ವರ್ಗದಿಂದ ಹೇರಲ್ಪಟ್ಟ ತೀವ್ರ ರೀತಿಯ ಶೋಷಣೆ ಮತ್ತು ದಬ್ಬಾಳಿಕೆಗಳ ವಿರುದ್ಧ ಹೋರಾಡುತ್ತಲೇ ಸ್ವಾತಂತ್ರ್ಯ ಚಳುವಳಿಗಾಗಿ ಅಪಾರವಾದ ತ್ಯಾಗ ಬಲಿದಾನಗಳನ್ನು ಕಾರ್ಮಿಕ ವರ್ಗ ನಡೆಸಿದ ಇತಿಹಾಸ ಇದೆ. ಇಂತಹ ಇತಿಹಾಸದ ಅಧ್ಯಯನ ಹಾಗೂ ಸ್ಪೂರ್ತಿಗಳು ಮಾತ್ರವೇ ನಮ್ಮ ಸಮಕಾಲೀನ ಸವಾಲುಗಳನ್ನು ಎದುರಿಸಲು ಸಹಾಯವಾಗಬಲ್ಲವು ಹೀಗಾಗಿ ಚರಿತ್ರೆಯ ಈ ಅಂಶಗಳನ್ನು ಕಾರ್ಮಿಕರಿಗೆ



ಮನವರಿಕೆ ಮಾಡಿಕೊಡುವ ಕೆಲಸವನ್ನು ನಾವು ಮಾಡಿಕೋಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಬಿ.ಎಸ್.ಸೊಪ್ಪಿನ ಮಾತನಾಡಿ ಇವತ್ತಿನ ದಿನಮಾನದಲ್ಲಿ ದುಡಿಯುವ ವರ್ಗದ ಮೇಲೆ ಆಳುವ ಸರಕಾರಗಳು ನಡೆಸುತ್ತಿರುವ ಶೋಷಣೆಯ ವಿಧಾನಗಳು ಮೇಲ್ನೋಟಕ್ಕೆ ಗೋಚರಿಸಿದಂತೆ ಕಾಣದೆ ಅಗೋಚರವಾಗಿವೆ. ಕಾರ್ಮಿಕರು ಸಂಘಟಿತರಾಗುವ ಮೂಲಕ ಅದರ ಆಳ ಅಗಲವನ್ನು ತಿಳಿದುಕೊಳ್ಳಬೇಕು. ಈ ನಿಟ್ಟಿನಲ್ಲಿ ಸಿಐಟಿಯು ದೇಶದಲ್ಲಿ ಕಳೆದ ಐದು ದಶಕಗಳಿಂದ ನಿರ್ವಹಿಸಿದ ಪಾತ್ರ ಶ್ಲ್ಯಾಘನೀಯ ಎಂದರು.

ಧ್ವಜಾರೋಹಣ ನೇರವೇರಿಸಿ ಮಾತನಾಡಿದ ಸಿಐಟಿಯು ಜಿಲ್ಲಾ ಗೌರವಾಧ್ಯಕ್ಷ ಬಿ.ಎನ್.ಪೂಜಾರಿ ಕಳೆದ ಐದು ವರ್ಷಗಳಿಂದ ಕಾರ್ಮಿಕ ವರ್ಗ ಯಾವ ಕಾರ್ಪೋರೇಟ್ ನೀತಿಗಳು ಬದಲಾಗಬೇಕೆಂದು ಸತತ ಹೋರಾಟ ನಡೆಸಿದರೋ ಅದೇ ನೀತಿಗಳಿಗೆ ಅದೇ ಜನ ಚುನಾವಣೆಯಲ್ಲಿ ಬೆಂಬಲಿಸಿರುವುದು ಆತಂಕದ ಸಂಗತಿ. ಅದರಿಂದಾಗಿ ಭವಿಷ್ಯದಲ್ಲಿ ಮತ್ತಷ್ಟು ಅಪಾಯಗಳನ್ನು ಕಾರ್ಮಿಕ ವರ್ಗ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಸಿಐಟಿಯು ಸುವರ್ಣ ಮಹೋತ್ಸವ ಲಾಂಛನವನ್ನು ಬಿಡುಗಡೆ ಮಾಡಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾಧ್ಯಕ್ಷ ಬಿ.ಐ.ಈಳಿಗೇರ ಅಧ್ಯಕ್ಷತೆ ವಹಿಸಿದ್ದರು. ಗುರುಸಿದ್ದಪ್ಪ ಅಂಬಿಗೇರ ವಂದಿಸಿದರು. ಮುಖಂಡರಾದ ಬಸವಣ್ಣೆಪ್ಪ ನೀರಲಗಿ, ದುರ್ಗಪ್ಪ ರಾಯಚೂರ, ಕರಿಯಪ್ಪ ಧಳವಾಯಿ, ಮಂಜು ಹುಜರಾತಿ, ಎಂ.ಡಿ.ಕತಾಲ, ಹುಸೇನಸಾಬ ನದಾಫ್, ಅಜ್ಮೀರ ಸೊರಟಗೇರಿ, ವೀರೇಶ ಗಡ್ಡದೇವರಮಠ, ಎನ್.ಎಂ.ಪಾಟೀಲ, ಎ.ಎಂ. ಖಾನ ಮುಂತಾದವರು ಉಪಸ್ಥಿತರಿದ್ದರು.

–ಮಹೇಶ ಪತ್ತಾರ

ಜಿಲ್ಲೆಯ ಹಲವೆಡೆ ಸಿಐಟಿಯು ಸ್ಥಾಪನಾ ದಿನಾಚರಣೆ

ಕಾರ್ಮಿಕ ವರ್ಗದ ಧ್ರುವತಾರೆಯಾದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ದೇಶದಲ್ಲಿ ಜನ್ಮತಾಳಿ (30–05–2019) 49 ವರ್ಷಗಳನ್ನು ಪೂರೈಸಿ, ಸುವರ್ಣ ಮಹೋತ್ಸವದ ಸಂಭ್ರಮದತ್ತ ದಾಪುಗಾಲನ್ನಿಡುತ್ತಿರುವ ಸಂಧರ್ಭದಲ್ಲಿ ದ.ಕ.ಜಿಲ್ಲೆಯ ಹಲವೆಡೆ ಧ್ವಜಾರೋಹಣ ಮಾಡುವ ಮೂಲಕ ಸಿಐಟಿಯು ಸ್ಥಾಪನಾ ದಿನವನ್ನು ಆಚರಿಸಲಾಯಿತು.

ಬೆಳ್ತಂಗಡಿ ಪೇಟೆಯಲ್ಲಿ 300 ಕ್ಕೂ ಮಿಕ್ಕಿದ ಕಾರ್ಮಿಕರು ಮೆರವಣಿಗೆಯಲ್ಲಿ ಸಾಗುತ್ತಾ, ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ, ಕಾರ್ಮಿಕ ವರ್ಗದ ಕಣ್ಮಣಿ ಸಿಐಟಿಯು ಜಿಂದಾಬಾದ್, ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸುವ ಆಳುವ ವರ್ಗಕ್ಕೆ ಧಿಕ್ಕಾರ ಮುಂತಾದ ಘೋಷಣೆಗಳನ್ನು ಕೂಗಿದರು. ಬಳಿಕ ಅಂಬೇಡ್ಕರ್ ಭವನದಲ್ಲಿ ಸೇರಿದ್ದ ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿದ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, ಬಂಡವಾಳಶಾಹಿ ವರ್ಗದ ಸರಕಾರಗಳು ಕಾರ್ಮಿಕರ ಹಿತಾಸಕ್ತಿಯನ್ನು ಕಡೆಗಣಿಸಿ ಕಾರ್ಪೊರೇಟ್ ಕಂಪೆನಿಗಳ ಹಿತಾಸಕ್ತಿಯನ್ನು ಕಾಯುತ್ತಿವೆ. ಇದರಿಂದಾಗಿ ಕಾರ್ಮಿಕ ವರ್ಗ ತೀವ್ರ ಸಂಕಷ್ಟಕ್ಕೊಳಗಾದರೆ, ಬಂಡವಾಳ ಶಾಹಿಗಳು ಮಾತ್ರ ಕಾರ್ಮಿಕರ ರಕ್ತವನ್ನು ಹೀರಿ ಕೊಬ್ಬಿದ್ದಾರೆ. ಕಾರ್ಮಿಕ ವರ್ಗ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯಾಗಲು ಸಾಧ್ಯವೇ ಇಲ್ಲ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಸಿಐಟಿಯು ನ ಹುಟ್ಟು, ಬೆಳವಣಿಗೆ ಹಾಗೂ ಕಾರ್ಮಿಕ ವರ್ಗದ ಉನ್ನತಿಗಾಗಿ ನಡೆಸಿದ ಧೀರೋದಾತ್ತ ಹೋರಾಟಗಳನ್ನು ಎಳೆ ಎಳೆಯಾಗಿ ವಿವರಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಬೆಳ್ತಂಗಡಿ ತಾಲೂಕು ಅಧ್ಯಕ್ಷರಾದ ಶಿವಕುಮಾರ್ ವಹಿಸಿದ್ದರು. ವೇದಿಕೆಯಲ್ಲಿ ಸಿಐಟಿಯು ತಾಲೂಕು ಮುಖಂಡರಾದ ವಸಂತ ನಡ, ರೋಹಿಣಿ, ಜಯಂತಿ ಶೇಖರ್ ಲಾಯಿಲಾ ಉಪಸ್ಥಿತರಿದ್ದರು.

ಜಿಲ್ಲೆಯ ಇತರ ಕಡೆಗಳಾದ ಕುಪ್ಪೆಪದವಿನಲ್ಲಿ ಬೆಳಗಿನ ಜಾವ ಸಿಐಟಿಯು ರಾಜ್ಯ ನಾಯಕರಾದ ವಸಂತ ಆಚಾರಿಯವರು ಧ್ವಜಾರೋಹಣಗೈದರೆ, ಇತರ ಸಿಐಟಿಯು ಪ್ರಮುಖ ಮುಖಂಡರಾದ ಸದಾಶಿವದಾಸ್, ವಸಂತಿ, ಗಿರಿಜಾ ಮುಂತಾದವರು ಹಾಜರಿದ್ದರು. ಮಳಲಿಯಲ್ಲಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ನೋಣಯ್ಯ ಗೌಡರವರು ಹಾಗೂ ವಾಮಂಜೂರಿನಲ್ಲಿ ಸಿಐಟಿಯು ಹಿರಿಯ ನಾಯಕರಾದ ಗಂಗಯ್ಯ ಅಮೀನ್ ರವರು ಧ್ವಜಾರೋಹಣಗೈದರು.

ಬಜಾಲ್ ಪಕ್ಕಲಡ್ಕದಲ್ಲಿ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ.ಬಾಲಕ್ರಷ್ಣ ಶೆಟ್ಟಿಯವರು ಧ್ವಜಾರೋಹಣ ನಡೆಸಿ ಬಳಿಕ ಸೇರಿದ್ದ ಕಾರ್ಮಿಕರನ್ನುದ್ದೇಶಿಸಿ, ತ್ಯಾಗ ಬಲಿದಾನದ ಪರಂಪರೆ ಇರುವ ಸಿಐಟಿಯು ನ ಹಿನ್ನೆಲೆಯನ್ನು ಹೇಳುತ್ತಾ, ಭವಿಷ್ಯದ ದಿನಗಳಲ್ಲಿ ಕಾರ್ಮಿಕ ವರ್ಗ ಒಂದಾಗಿ ನಡೆಸಬೇಕಾದ ತೀವ್ರ ಹೋರಾಟದ ಮಹತ್ವ ವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಜಯಂತಿ ಶೆಟ್ಟಿ, ಜಯಲಕ್ಷ್ಮಿ ಮುಂತಾದವರು ಇದ್ದರು.

ತೊಕ್ಕೊಟು ಜಂಕ್ಷನ್ ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ ಹಿರಿಯ ಕಾರ್ಮಿಕ ಮುಖಂಡರಾದ ಪದ್ಮಾವತಿ ಕುತ್ತಾರ್ ರವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲೆಯ ನಾಯಕರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯಕ್, ಕ್ರಷ್ಣಪ್ಪ ಸಾಲಿಯಾನ್ ರವರು ಉಪಸ್ಥಿತರಿದ್ದರು.

ಅದೇ ರೀತಿ ಬೋಳಾರ, ಬಿಕರ್ನಕಟ್ಟೆ, ಮೂಡಬಿದ್ರೆ, ಸುಳ್ಯ, ಪುತ್ತೂರು ಸೇರಿದಂತೆ ಹಲವಾರು ಕಡೆಗಳಲ್ಲಿ ಸಿಐಟಿಯು ನ ಸ್ಥಾಪನಾ ದಿನವನ್ನು ಆಚರಿಸಲಾಯಿತು.

ಸುನಿಲ್ ಕುಮಾರ್ ಬಜಾಲ್

ಕುಂದಾಪುರದಲ್ಲಿ ಸಿಐಟಿಯು ಶತಮಾನೋತ್ಸವ

ಸ್ವಾತಂತ್ರ್ಯ ಪೂರ್ವದಲ್ಲೇ ಜನ್ಮ ತಳೆದ ಕಾರ್ಮಿಕ ಚಳುವಳಿಯು ಸ್ವಾತಂತ್ರ್ಯ ಹೋರಾಟದಲ್ಲಿ ಸಮರಧೀರ ಪಾತ್ರ ವಹಿಸಿದೆ. ಲಾಲ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್‌ರಂತಹ ಹೋರಾಟಗಾರರನ್ನು ಬ್ರಿಟಿಷರು ಬಂಧಿಸಿದಾಗ ಬೃಹತ್ ಮುಷ್ಕರ ದಾಖಲಿಸಿದ ಕೀರ್ತಿ ಕಾರ್ಮಿಕ ವರ್ಗಕ್ಕೆ ಸಲ್ಲುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರು ವಹಿಸಿದ ಪಾತ್ರ ಇತಿಹಾಸದಲ್ಲಿ ಮರೆಯಲು ಅಸಾಧ್ಯ ಎಂದು ಸಿಐಟಿಯು ರಾಜ್ಯ ಮುಖಂಡ ಬಾಲಕೃಷ್ಣ ಶೆಟ್ಟಿ ಹೇಳಿದ್ದಾರೆ.

ಕುಂದಾಪುರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ಆಶ್ರಯದಲ್ಲಿ ರವಿವಾರ ಕುಂದಾಪುರ ಹಂಚು ಕಾರ್ಮಿಕ ಭವನದಲ್ಲಿ ಜರುಗಿದ ದೇಶದ ಕಾರ್ಮಿಕ ಚಳವಳಿಯ ಶತಮಾನೋತ್ಸವ



ಸಿಐಟಿಯು ಸುವರ್ಣ ಮಹೋತ್ಸವದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಆಳುವ ಸರಕಾರಗಳು ಬದಲಾಗುತ್ತಿರುತ್ತವೆ. ಆದರೆ ಕಾರ್ಮಿಕರ ಬದುಕು ಹೋರಾಟವಿಲ್ಲದೇ ಬದಲಾಗಲು ಸಾಧ್ಯವಿಲ್ಲ. ಕಾರ್ಮಿಕ ವರ್ಗ ಕೆಲವು ಕಾನೂನುಗಳನ್ನು ಇಂತಹ ಹೋರಾಟಗಳಿಂದಲೇ ಗಳಿಸಿಕೊಂಡಿದೆ ಎಂದರು.

ದೇಶದ ಕಾರ್ಮಿಕ ಸಂಘಟನೆಗಳಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಈ ಐವತ್ತು ವರ್ಷಗಳಲ್ಲಿ ಐಕ್ಯ ಹೋರಾಟಗಳನ್ನು ನಡೆಸಿ ಇದುವರೆಗೂ 18 ಮಹಾ ಮುಷ್ಕರಗಳನ್ನು ಸಂಘಟಿಸಿ ಕಾರ್ಮಿಕ ಪರ ನೀತಿಗಳಿಗೆ ಒತ್ತಾಯಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ತಕ್ಷಣ ಬಿಎಂಎಸ್ ಕಾರ್ಮಿಕ ಸಂಘಟನೆಯನ್ನು ಐಕ್ಯ ಚಳವಳಿಯಿಂದ ದೂರ ಸರಿಯುವಂತೆ ಮಾಡಿರುವುದು ಕಾರ್ಮಿಕ ವರ್ಗಕ್ಕೆ ಮಾಡಿದ ದ್ರೋಹವಾಗಿದೆ ಎಂದರು.

ಕೇಂದ್ರ ಸರಕಾರ ಕಾರ್ಮಿಕ ವರ್ಗದ ಮೇಲೆ ದಮನಕಾರಿ ನೀತಿಗಳನ್ನು ಮತ್ತಷ್ಟು ವೇಗವಾಗಿ ತರಲು ಹೊಂಚು ಹಾಕಿದೆ. ಕಟ್ಟಡ ಕಾರ್ಮಿಕರ ಸೆಸ್ 7,500 ಕೋಟಿ ರೂ.ನ್ನು ರಾಜ್ಯ ಕಲ್ಯಾಣ ಮಂಡಳಿಯಿಂದ ಕೇಂದ್ರ ಸರಕಾರ ವಶಪಡಿಸಿಕೊಳ್ಳುವ

ಪುಟ 11 ಕ್ಕೆ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಪ್ರಜಾಪ್ರಭುತ್ವದ ಆಧಾರವು ಯಾವುದಾಗಿರಬೇಕು? ಸೀಸರ್‌ನ ವಿರುದ್ಧ ನಿಂತ ಒಳಸಂಚುಗಾರರು ನಂಬಿದ್ದೇನೆಂದರೆ ನಾಯಕನ ಆರಾಧನೆಯು ಪ್ರಜಾಪ್ರಭುತ್ವದ ವಿನಾಶದ ಕಾರಣವಾಗಬಲ್ಲದು. ಆದರೆ ಅವರು ಮಾಡುವ ಕೊಲೆಯೂ ಪ್ರಜಾಪ್ರಭುತ್ವದ ವಿನಾಶವೆಂಬುದು ಅವರಿಗೆ ತಿಳಿದಿಲ್ಲ. ವ್ಯಂಗ್ಯವೇನೆಂದರೆ ಮಾರ್ಕ್ ಆ್ಯಂಟನಿ ಜನರ ಮನಸ್ಸನ್ನು ಗೆದ್ದು ಮತ್ತೆ ಸ್ಥಾಪಿಸಲು ಹೊರಟಿದ್ದು ನಾಯಕನ ಆರಾಧನೆಯನ್ನೇ. 16ನೇ ಶತಮಾನದಲ್ಲಿ ಶೇಕ್ಸ್‌ಪಿಯರ್ 'ಜೂಲಿಯಸ್ ಸೀಸರ್'ನಲ್ಲಿ ಎತ್ತಿದ ಪ್ರಶ್ನೆಯು ಚರಿತ್ರೆಯ ಉದ್ದಕ್ಕೂ ಮರುಕಳಿಸುತ್ತಲೇ ಇದೆ. ಪ್ರಭಾವಿಯಾದ ನಾಯಕರು ಅಧಿಕಾರಕ್ಕೆ ಬರುವುದು ಜನಸಾಮಾನ್ಯರ ಕಣ್ಮಣಿಗಳಾಗಿಯೇ. ಆದರೆ ಅವರ ಚಿಂತನೆ ಹಾಗೂ ವ್ಯಕ್ತಿತ್ವಗಳು ಪ್ರಜಾಪ್ರಭುತ್ವದ ಸತ್ವವನ್ನೇ ನಾಶಮಾಡುತ್ತವೆ. ಆದ್ದರಿಂದಲೇ ಬಾಬಾಸಾಹೇಬ ಅಂಬೇಡ್ಕರ್ ಅವರು ಅತ್ಯಂತ ಕಟುವಾಗಿ ಖಂಡಿಸಿದ್ದು ನಾಯಕತ್ವದ ಆರಾಧನೆಯನ್ನೇ. ಅವರು ಬಯಸಿದ್ದು ಬುದ್ಧನು ಮತ್ತು ಅವನಿಗೆ ಮಾದರಿಯಾಗಿದ್ದ ಬುಡಕಟ್ಟುಗಳು ಪಾಲಿಸುತ್ತಿದ್ದ ಪ್ರಜಾಪ್ರಭುತ್ವವಾಗಿತ್ತು.

ಭಾರತದ ಪ್ರಜಾಪ್ರಭುತ್ವ ಆತ್ಮವಿನಾಶದತ್ತ ಖಚಿತವಾದ ಹೆಜ್ಜೆಗಳನ್ನು ಇಟ್ಟಿರುವ ಇಂದಿನ ಸಂದರ್ಭದಲ್ಲಿ ಶೇಕ್ಸ್ ಪಿಯರ್, ಬುದ್ಧ ನೆನಪಾಗುತ್ತಿದ್ದಾರೆ.

ಶೇಕ್ಸ್‌ಪಿಯರ್, ಬುದ್ಧ ನೆನಪಾಗುತ್ತಿದ್ದಾರೆ

ನೆನ್ನೆ ಗೆಳೆಯರ ಜೊತೆಗೆ ಮಾತನಾಡುತ್ತಾ ಶೇಕ್ಸ್‌ಪಿಯರ್‌ನ 'ಜೂಲಿಯಸ್ ಸೀಸರ್' ನಾಟಕದ ಪ್ರಸ್ತಾಪ ಬಂತು. ಅದೇಕೆ ಆಧುನಿಕ ರಾಜಕೀಯದ ಅನೇಕ ಸನ್ನಿವೇಶಗಳಲ್ಲಿ ಅವನ ನಾಟಕಗಳ ಮಾತುಗಳು ಇಷ್ಟು ಅರ್ಥಗರ್ಭಿತವಾಗಿ ಕಾಣುತ್ತವೆ ಎಂದು ಚರ್ಚಿಸುತ್ತಿದ್ದೆವು. ನಮಗೆ ಗೊತ್ತಿರುವ ಮಟ್ಟಿಗೆ ಶೇಕ್ಸ್‌ಪಿಯರ್‌ಗೆ ರಾಜಕಾರಣದಲ್ಲಿ ತಲೆ ಹಾಕುವ ವ್ಯವಧಾನವೇ ಇರಲಿಲ್ಲ. ಒಬ್ಬ ಸಾಮಾನ್ಯ ನಟನಾಗಿ (ಅಂದರೆ ಸಹಾಯಕ ಪಾತ್ರಗಳಲ್ಲಿ) ಕಂಪನಿ ಸೇರಿಕೊಂಡು ಆನಂತರ ಎಲ್ಲರೂ ಅಚ್ಚರಿ ಪಡುವಂತೆ ಮಹಾನ್ ನಾಟಕಕಾರನಾಗಿ ಅವನು ಬೆಳೆದ. ಜೊತೆಗೆ ಅತ್ಯಂತ ಜನಪ್ರಿಯನೂ ಆಗಿದ್ದ. ಹೀಗಾಗಿ ತನ್ನ 56ನೇ ವಯಸ್ಸಿನಲ್ಲಿ ಯಶಸ್ಸು, ಶ್ರೀಮಂತಿಕೆ ಹಾಗೂ ಸಾಮಾಜಿಕ ಮನ್ನಣೆ ಪಡೆದುಕೊಂಡು ತನ್ನ ಊರಿಗೆ ಮರಳಿದ ಅವನಿಗೆ ರಾಜಕೀಯದ ಒಳಸುಳಿಗಳು ಅರ್ಥವಾಗಿದ್ದು ಹೇಗೆ?

'ಜೂಲಿಯಸ್ ಸೀಸರ್' ನಾಟಕವನ್ನೇ ತೆಗೆದುಕೊಳ್ಳಿ. ನಾಟಕದ ಕತೆಗಾಗಿ ಅವನಿಗೆ ಸಿಕ್ಕಿದ್ದು ಪ್ಲುಟಾರ್ಕ್ ಎನ್ನುವವನು ಬರೆದ ಜೀವನ ಚರಿತ್ರೆಗಳ ಕೃತಿಯ ಇಂಗ್ಲಿಷ್ ಅನುವಾದ ಮತ್ತು ಇಂತದೇ ಆದ ಒಂದಿಷ್ಟು ವಿವರಗಳು. ಆದರೆ ಇಂಥ ಕಚ್ಚಾ ಸಾಮಗ್ರಿಯಿಂದ ಅವನು ರಚಿಸಿದ್ದು ಒಂದು ಅತ್ಯುತ್ತಮವಾದ ರಾಜಕೀಯ ನಾಟಕ. ಪ್ಲೇಟೋನ ಕಾಲಕ್ಕಿಂತಲೂ ಮೊದಲೇ ಬಹುಶಃ ಗ್ರೀಕ್ ಸಮಾಜದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆ ಇತ್ತು. ಪ್ಲೇಟೋ ಅದನ್ನು ತನ್ನ 'ರಿಪಬ್ಲಿಕ್'ನಲ್ಲಿ ವಿಸ್ತರಿಸಿದ. ಅವನಿಗೆ ಅದೊಂದು ಆದರ್ಶಪರವಾದ ಕಲ್ಪನೆಯಾಗಿತ್ತು. ಹಾಗಂತ ಅವನೇನು ಎಲ್ಲರಿಗೂ ಸಮಾನತೆಯನ್ನು ಕಲ್ಪಿಸಿರಲಿಲ್ಲ. ಅವನ ಆದರ್ಶ ಪ್ರಜಾರಾಜ್ಯದಲ್ಲಿ ಗುಲಾಮರಿಗೆ ಹಾಗೂ ಮಹಿಳೆಯರಿಗೆ ಸಮಾನತೆ ಇರಲಿಲ್ಲ. ರಾಜಕೀಯ ಹಕ್ಕುಗಳೂ ಇರಲಿಲ್ಲ. ಆದರೆ ಒಂದು ಮಾತಂತೂ ನಿಜ. ಸಮಾನತೆಗಿಂತ ಗ್ರೀಕ್ ಸಂಪ್ರದಾಯದಲ್ಲಿ ಮನುಷ್ಯರು ತಮ್ಮ ವಿವೇಕ ಹಾಗೂ ರೀಸನ್' ಮೂಲಕ ಸಮಾಜವನ್ನು ಕಟ್ಟುವ ಬಗ್ಗೆ ಚಿಂತನೆಯು ಬೆಳೆದಿತ್ತು. ಮನುಷ್ಯರ ಅತಾರ್ಕಿಕ ಚಿಂತನೆ ಹಾಗೂ ನಡವಳಿಕೆಗಳ ಬಗ್ಗೆ ಗ್ರೀಕ್ ಚಿಂತನೆಯಲ್ಲಿ ಗಾಢವಾದ ಅನುಮಾನಗಳಿದ್ದವು. ಮನುಷ್ಯರು ತಮ್ಮ ನಿರ್ಧಾರಗಳನ್ನು ತರ್ಕಬದ್ಧವಾಗಿ, ವಿವೇಕಪೂರ್ಣವಾಗಿ ಮಾಡುವುದಿಲ್ಲವೆನ್ನುವ ಅಪನಂಬಿಕೆಯೂ ಇತ್ತು. ಇಂಥ ಚಿಂತನೆಯನ್ನು ಬಳುವಳಿಯಾಗಿ ಪಡೆದಿದ್ದ ರೋಮನ್ ರಾಜಕೀಯವು ರಾಜರು, ದೊರೆಗಳು ಇಲ್ಲದ ಜನಪ್ರತಿನಿಧಿಗಳ ಆಳ್ವಿಕೆಯ ಒಂದು ಪ್ರಯತ್ನವನ್ನು ಮಾಡಿತು. ಇದರ ಒಂದು ಭಾಗವೇ ಜೂಲಿಯಸ್ ಸೀಸರ್‌ನ ಚರಿತ್ರೆ.


ಶೇಕ್ಸಪಿಯರ್‌ನ ನಾಟಕವು ಆರಂಭವಾಗುವುದೇ ಜೂಲಿಯಸ್ ಸೀಸರ್‌ನ ನಾಯಕತ್ವದ ಆರಾಧನೆಯ ಬಗ್ಗೆ ಅವನ ಹಳೆಯ ಸಂಗಾತಿಗಳಲ್ಲಿ ಹುಟ್ಟಿಕೊಂಡಿರುವ ತೀವ್ರ ಅನುಮಾನಗಳಲ್ಲಿ. ಮೂವರು ಟ್ರಯಮ್‌ವರೇಟ್‌ರಲ್ಲಿ ಒಬ್ಬನಾದ ಸೀಸರ್ ಈಗ ತನ್ನ ಅಪ್ರತಿಮ ಯುದ್ಧ ಕೌಶಲ್ಯಗಳಿಂದಾಗಿ, ತನ್ನ ವಿಜಯಗಳಿಂದಾಗಿ ರೋಮ್‌ನ ಅನಧಿಕೃತ ಚಕ್ರವರ್ತಿಯಾಗಬಹುದಾದ ಸ್ಥಿತಿಗೆ ಬಂದಿದ್ದಾನೆ. ಸಾಮಾನ್ಯ ಜನರು ಅವನನ್ನು ತಮ್ಮ ನಾಯಕ ಮಾತ್ರನಲ್ಲ ಅಧಿದೇವತೆಯೆಂದೇ ತಿಳಿಯತೊಡಗಿದ್ದಾರೆ. ಬ್ರೂಟಸ್‌ನೂ ಸೇರಿದಂತೆ ಅವನ ಸಂಗಾತಿಗಳು ಇದರ ಬಗ್ಗೆ ಆತಂಕಿತರಾಗಿದ್ದಾರೆ. ಅವರಲ್ಲಿ ಅನೇಕರು ಅಸೂಯೆಯಿಂದ ವೈಯಕ್ತಿಕ ದ್ವೇಷದಿಂದಾಗಿ ಸೀಸರ್‌ನ ವಿರುದ್ಧ ಮಾಡುತ್ತಿದ್ದಾರೆ. ಆದರೆ ಅವರು ಎತ್ತುವ ಪ್ರಶ್ನೆಗಳು ಗಂಭೀರವಾಗಿವೆ. ಸೀಸರ್ ಹೀಗೆ ಅನೈಸರ್ಗಿಕವಾದ ದೈತ್ಯ ವ್ಯಕ್ತಿತ್ವದವನೆಂದಾದರೆ ಪ್ರಜಾಪ್ರಭುತ್ವದ ಗತಿಯೇನು? ಜನಸಾಮಾನ್ಯರು ಅವನ ಬಗ್ಗೆ ಅದೆಂಥ ಭಕ್ತಿಯನ್ನೂ ಬೆಳೆಸಿಕೊಂಡಿದ್ದಾರೆಂದರೆ ಅವರು ಅವನಿಗೆ ಮೂರು ಸಾರಿ ರೋಮ್‌ನ ಕಿರೀಟವನ್ನು ಧರಿಸಲು ಪ್ರಯತ್ನಿಸುತ್ತಾರೆ.

ಅದನ್ನು ತಿರಸ್ಕರಿಸಿರುವ ಸೀಸರ್ ನಿಜವಾಗಿಯೂ ಅಧಿಕಾರದ ಮೋಹದಿಂದ ದೂರವಿದ್ದಾನೆಯೆ? ಅವನಲ್ಲೊಬ್ಬ ಬೆಳೆಯಲು ಕಾದಿರುವ ಸರ್ವಾಧಿಕಾರಿ ಅಡಗಿಲ್ಲವೆ? ಈ ಪ್ರಶ್ನೆಗಳನ್ನು ಕೇಳುತ್ತಿರುವವರನ್ನು ಒಳಸಂಚುಗಾರರು ಎಂದು ಸಾರಾಸಗಟಾಗಿ ಕರೆಯಲಾಗುತ್ತದೆ. ಆದರೆ ಅವರಲ್ಲಿ ಬ್ರೂಟಸ್ ನಂಥ ಒಬ್ಬ ಪ್ರಾಮಾಣಿಕ ವಿಚಾರವಂತನೂ ಇದ್ದಾನೆ. ಅಲ್ಲದೆ ಉಳಿದವರಿಗೂ ಕೂಡ ಸಮಾನತೆ, ಪ್ರಜಾಪ್ರಭುತ್ವದ ಹಿಂದಿನ ಉದಾಹರಣೆಗಳ ನೆನಪಿದೆ. ಆದರೆ ಸಮಸ್ಯೆಯೆಂದರೆ ಸೀಸರ್‌ನ ಆರಾಧಕರಾದ ಜನಸಾಮಾನ್ಯರಿಗೆ ಇದಾವುದೂ ಬೇಕಿಲ್ಲ. ಅವರಿಗೆ ಒಂದು ಮೂರ್ತಿ ಬೇಕಿದೆಯಷ್ಟೆ ಆರಾಧನೆಗೆ. ಶೇಕ್ಸ್‌ಪಿಯರ್ ಈ ನಾಟಕದಲ್ಲಿ ಸಾಮಾನ್ಯ ಜನರನ್ನು ಚಂಚಲ ಮನಸ್ಸಿನವರಾಗಿ, ಅತಾರ್ಕಿಕ ವ್ಯಕ್ತಿಗಳನ್ನಾಗಿ ಹಾಗೂ "ಸ್ವಂತತೆಯೆ ಬಂದಾಗಿ ಮಂದೆಯಲ್ಲಿ ಒಂದಾಗಿ' ಹೋಗುವವರನ್ನಾಗಿ ನೋಡುತ್ತಾನೆ. ಆಗ ತಾನೆ ಅಧಿಕಾರ, ಶ್ರೀಮಂತಿಕೆ ಪಡೆಯುತ್ತಿದ್ದ ಮಧ್ಯಮವರ್ಗದ ಶೇಕ್ಸ್‌ಪಿಯರ್ ಜನಸಾಮಾನ್ಯರ ಬಗ್ಗೆ ಸಿನಿಕಲ್ ಆಗಿದ್ದನೆ? ಪೂರ್ವಾಗ್ರಹ ಹೊಂದಿದ್ದನೆ? ಹೀಗೆಲ್ಲಾ ಪ್ರಶ್ನೆಗಳನ್ನು ಕೇಳಲಾಗಿದೆ. 'ಕೋರಿಯೋಲೇನಸ್' ನಾಟಕದಲ್ಲಿಯೂ ಇಂಥದೇ ವರ್ಣನೆ ಸಾಮಾನ್ಯರ ಬಗ್ಗೆ ಇದೆ. ಇದನ್ನು ಅಲ್ಲಗಳೆಯುವುದಾಗುವುದಿಲ್ಲ.

ಅದೇ ಹೊತ್ತಿಗೆ ನಾಟಕದ ಮುಖ್ಯ ಪ್ರಶ್ನೆಯನ್ನು ಆಚೆಗಿಡುವುದೂ ಆಗುವುದಿಲ್ಲ. ಪ್ರಜಾಪ್ರಭುತ್ವದ ಬೆನ್ನೆಲುಬಾದ ಪ್ರಜೆಗಳು ಪ್ರಜಾಪ್ರಭುತ್ವದ ಮೂಲ ಗುಣಕ್ಕೇ ವಿರೋಧಿಯಾದ ನಾಯಕನ ಆರಾಧನೆ, ಅವನ ಅತಿಮಾನುಷ ಶಕ್ತಿಯ ಬಗ್ಗೆ ನಂಬಿಕೆ ಮತ್ತು ಅವನನ್ನು ವಿರೋಧಿಸುವವರ ಬಗ್ಗೆ ಅಪಾರವಾದ ಕ್ರೌರ್ಯ ಇವುಗಳನ್ನೇ ಬೆಳೆಸಿಕೊಂಡರೆ ಅದಾವ ರೀತಿಯ ಪ್ರಜಾಪ್ರಭುತ್ವವು ಇರಲು ಸಾಧ್ಯ? ಹೀಗಾಗಿ ಒಂದು ರೀತಿಯಲ್ಲಿ ಈ ನಾಟಕದಲ್ಲಿ ಸೀಸರ್ ಮುಖ್ಯನಲ್ಲ. ಅವನಿಲ್ಲದಿದ್ದರೆ ಜನರು ಇನ್ನೊಬ್ಬ ಆರಾಧ್ಯಮೂರ್ತಿಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈ ನಾಟಕದ ಅತ್ಯಂತ ಪ್ರಸಿದ್ಧವಾದ ಭಾಗವೆಂದರೆ ಸೀಸರ್‌ನ ಕೊಲೆಯ ನಂತರ ಅವನ ಶವವನ್ನು ಇಟ್ಟಿರುವ ಸಾರ್ವಜನಿಕ ಸ್ಥಳದಲ್ಲಿ ಮೊದಲು ಬ್ರೂಟಸ್ ಆನಂತರ ಮಾರ್ಕ್ ಆ್ಯಂಟನಿ ಮಾಡುವ ಭಾಷಣಗಳ ಭಾಗ ಆ ಕಾಲದಲ್ಲಿಯೇ ಶೇಕ್ಸ್‌ಪಿಯರ್ ಕಂಡುಕೊಂಡಿದ್ದೆಂದರೆ ಜನರು ಕೇಳಬಯಸುವುದು ಸತ್ಯವನ್ನಲ್ಲ, ಅವರಿಗೆ ಬೇಕಾದದ್ದು ಭಾಷಣ ಪಟುತ್ವ. ಅದರಲ್ಲೂ ವಿಚಾರದ ಬದಲಾಗಿ ಭಾವನೆಗಳ ಉದ್ರೇಕ ಹಾಗೂ ಮನುಷ್ಯ ಸ್ವಭಾವದ ತಳದಲ್ಲಿಯೇ ಇರುವ ಪ್ರವೃತ್ತಿಗಳನ್ನು ಪ್ರಚೋದಿಸುವ ಭಾಷೆ. ಅಂದರೆ ಮುಖ್ಯವಾಗಿರುವುದು ಜನರು ವಿಚಾರ ಮಾಡದಂತೆ ಅವರನ್ನು ತೀವ್ರವಾದ ಭಾವನೆಗಳ ಲೋಕಕ್ಕೆ ತಳ್ಳುವುದು. ಬ್ರೂಟಸ್‌ನ ವಾದವೆಂದರೆ, ನಾನು ಸೀಸರ್‌ನನ್ನು ಪ್ರೀತಿಸುತ್ತಿದ್ದೆ. ಆದರೆ ಅವನು ಪ್ರಜಾಪ್ರಭುತ್ವದ ಶತ್ರುವಾಗತೊಡಗಿದ್ದರಿಂದ ಅವನನ್ನು ಕೊಂದೆ. ಏಕೆಂದರೆ ನಾನು ರೋಮ್‌ವನ್ನು ಹೆಚ್ಚು ಪ್ರೀತಿಸುತ್ತೇನೆ'. ಆದರೆ ನಂತರ ತನ್ನ ಭಾಷಣದಲ್ಲಿ ಈ ಮಾತುಗಳನ್ನು ಬಳಸುವುದು ಬ್ರೂಟಸ್ ತನ್ನ ಸ್ನೇಹಿತನ ಕೊಲೆಗಾರ, ಗೆಳೆಯನಿಗೆ ದ್ರೋಹ ಮಾಡಿದವನು ಎಂದು ತೋರಿಸಲು! ಅತ್ಯಂತ ಆಶ್ಚರ್ಯಕರವಾದ ಮಾತೆಂದರೆ ಮಾರ್ಕ್‌ಆ್ಯಂಟನಿಯ ಪ್ರಕಾರ ಮನುಷ್ಯರಿಗೆ ಭೂಷಣವಾದ ವಿಚಾರವಂತಿಕೆಯು ಈಗ ಪಶುಗಳಲ್ಲಿ ಹೋಗಿ ಸೇರಿಕೊಂಡಿದೆ. ನಿಜವೇನೆಂದರೆ ಅವನೇ ಈ ವಿಚಾರವಂತಿಕೆಯ ಬದಲಾಗಿ ಭಾವನೆಗಳ ನಾಟಕವೊಂದನ್ನು ಆಡುತ್ತಿದ್ದಾನೆ!

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಪ್ರಜಾಪ್ರಭುತ್ವದ ಆಧಾರವು ಯಾವುದಾಗಿರಬೇಕು? ಸೀಸರ್‌ನ ವಿರುದ್ಧ ನಿಂತ ಒಳಸಂಚುಗಾರರು ನಂಬಿದ್ದೇನೆಂದರೆ ನಾಯಕನ ಆರಾಧನೆಯು ಪ್ರಜಾಪ್ರಭುತ್ವದ ವಿನಾಶದ ಕಾರಣವಾಗಬಲ್ಲದು. ಆದರೆ ಅವರು ಮಾಡುವ ಕೊಲೆಯೂ ಪ್ರಜಾಪ್ರಭುತ್ವದ ವಿನಾಶವೆಂಬುದು ಅವರಿಗೆ ತಿಳಿದಿಲ್ಲ. ವ್ಯಂಗ್ಯವೇನೆಂದರೆ ಮಾರ್ಕ್ ಆ್ಯಂಟನಿ ಜನರ ಮನಸ್ಸನ್ನು ಗೆದ್ದು ಮತ್ತೆ ಸ್ಥಾಪಿಸಲು ಹೊರಟಿದ್ದು ನಾಯಕನ ಆರಾಧನೆಯನ್ನೇ. 16ನೇ ಶತಮಾನದಲ್ಲಿ ಶೇಕ್ಸ್‌ಪಿಯರ್ ಎತ್ತಿದ ಪ್ರಶ್ನೆಯು ಚರಿತ್ರೆಯ ಉದ್ದಕ್ಕೂ ಮರುಕಳಿಸುತ್ತಲೇ ಇದೆ. ಪ್ರಭಾವಿಯಾದ ನಾಯಕರು ಅಧಿಕಾರಕ್ಕೆ ಬರುವುದು ಜನಸಾಮಾನ್ಯರ ಕಣ್ಮಣಿಗಳಾಗಿಯೇ. ಆದರೆ ಅವರ ಚಿಂತನೆ ಹಾಗೂ ವ್ಯಕ್ತಿತ್ವಗಳು ಪ್ರಜಾಪ್ರಭುತ್ವದ ಸತ್ವವನ್ನೇ ನಾಶಮಾಡುತ್ತವೆ.

ಆದ್ದರಿಂದಲೇ ಬಾಬಾಸಾಹೇಬ ಅಂಬೇಡ್ಕರ್ ಅವರು ಅತ್ಯಂತ ಕಟುವಾಗಿ ಖಂಡಿಸಿದ್ದು ನಾಯಕತ್ವದ ಆರಾಧನೆಯನ್ನೇ. ಸ್ವತಃ ಅತ್ಯಂತ ಪ್ರಭಾವಿಯಾದ ಜನನಾಯಕರಾಗಿದ್ದ ಅವರು ನಾಯಕರುಗಳ ವರ್ಚಸ್ಸಿನ ಬಗ್ಗೆ ತುಂಬಾ ಶಂಕೆಗಳನ್ನು ಇಟ್ಟುಕೊಂಡಿದ್ದರು. ಅವರು ಬಯಸಿದ್ದು ಬುದ್ಧನು ಮತ್ತು ಅವನಿಗೆ ಮಾದರಿಯಾಗಿದ್ದ ಬುಡಕಟ್ಟುಗಳು ಪಾಲಿಸುತ್ತಿದ್ದ ಪ್ರಜಾಪ್ರಭುತ್ವವಾಗಿತ್ತು. ಹೀಗಾಗಿ ಅವರು ಬುದ್ಧನ ಬಗೆಗಿನ ತಮ್ಮ ಪುಸ್ತಕದಲ್ಲಿ ಬುದ್ಧನನ್ನು ದೇವಪುರುಷನ ಬದಲಾಗಿ ಒಬ್ಬ ವಿಚಾರವಾದಿಯ ಹಾಗೆ ವರ್ಣಿಸಿದ್ದಾರೆ. ಬುದ್ಧನು ಉಪದೇಶಿಸಿದ ದುಃಖದ ಬಗೆಗಿನ ವ್ಯಾಖ್ಯಾನವನ್ನು ಅದು ಅವನದಲ್ಲವೆಂದು ತಿರಸ್ಕರಿಸುತ್ತಾರೆ. ಬುದ್ಧನ ಸಾವಿನ ಬಗ್ಗೆ ಇರುವ ಐತಿಹ್ಯವೊಂದನ್ನು ಅವರು ನಂಬಿದ ಪ್ರಜಾಪ್ರಭುತ್ವದ ನಡುವಳಿಕೆಯ ಉದಾಹರಣೆಯಾಗಿ ನೋಡಬಹುದಾಗಿದೆ. ಬುದ್ಧನ ಪರಿನಿರ್ವಾಣವಾದದ್ದು ಕುಶಿನಗರದ ಹತ್ತಿರ. ಅದು ಮಲ್ಲರು ಎಂದು ಕರೆಯಲಾಗುತ್ತಿದ್ದ ಬುಡಕಟ್ಟಿಗೆ ಹತ್ತಿರವಾದ ಪ್ರದೇಶ. ಅವನ ಸಾವಿನ ಸುದ್ದಿ ಬಂದಾಗ ಮಲ್ಲರು ಸಭೆಯಲ್ಲಿ ಚರ್ಚೆಯೊಂದನ್ನು ನಡೆಸುತ್ತಿದ್ದರು. ಹೀಗಾಗಿ ಮೊದಲು ಈ ಚರ್ಚೆಯನ್ನು ಮುಗಿಸಿ ಆಮೇಲೆ ಬುದ್ಧನ ಸಾವಿನ ಬಗ್ಗೆ ಚಿಂತಿಸುವುದು ಎಂದು ನಿರ್ಣಯಿಸಿ ಮುಂದುವರೆಯಲಾಯಿತಂತೆ. 'ನಿಮಗೆ ನೀವೇ ದೀಪವಾಗಿ' ಎಂದ ಬುದ್ಧನ ನಿಜವಾದ ಅನುಯಾಯಿಗಳು ಅವರು. ಭಾರತದ ಪ್ರಜಾಪ್ರಭುತ್ವ ಆತ್ಮವಿನಾಶದತ್ತ ಖಚಿತವಾದ ಹೆಜ್ಜೆಗಳನ್ನು ಇಟ್ಟಿರುವ ಇಂದಿನ ಸಂದರ್ಭದಲ್ಲಿ ಶೇಕ್ಸ್ ಪಿಯರ್ ಬುದ್ಧ ನೆನಪಾಗುತ್ತಿದ್ದಾರೆ. ■



ಸೀಸರ್‌ನ ಕೊಲೆಯ ನಂತರ ಅವನ ಶವವನ್ನು ಇಟ್ಟಿರುವ ಸಾರ್ವಜನಿಕ ಸ್ಥಳದಲ್ಲಿ ಮೊದಲು ಬ್ರೂಟಸ್ ಆನಂತರ ಮಾರ್ಕ್ ಆ್ಯಂಟನಿ ಮಾಡುವ ಭಾಷಣದ ದೃಶ್ಯದ ಕಲಾಕೃತಿ

ಲೋಕಸಭಾ ಚುನಾವಣೆ 2019
ಸಿಪಿಐ(ಎಂ) ಅಭ್ಯರ್ಥಿಗಳು ಪಡೆದ ಮತಗಳು

ಕ್ರ. ಸಂಖ್ಯೆ	ರಾಜ್ಯದ ಹೆಸರು	ಸಂಖ್ಯೆ	ಲೋಕಸಭಾ ಕ್ಷೇತ್ರದ ಹೆಸರು	ಮತಗಳು	%
1	ಆಂಧ್ರ ಪ್ರದೇಶ	1	ಕರ್ನೂಲ	18,919	1.6
2		2	ನೆಲ್ಲೂರ್	18,830	1.46
3	ಅಸ್ಸಾಂ	1	ಕೋಕ್ರಾಜಾರ್ (ಎಸ್.ಟಿ.)	28,128	1.9
4		2	ಲಕ್ಕೀಪುರ	12,809	1
5	ಬಿಹಾರ್	1	ಯುಜಿಯಾಪುರ	27,577	2.85
6	ಹರ್ಯಾಣ	1	ಹೀಸಾರ್	9,150	0.78
7	ಹಿಮಾಚಲ ಪ್ರದೇಶ	1	ಮಂಡಿ	14,838	1.58
8	ಜಾರ್ಖಂಡ್	1	ರಾಜಮಹಲ್(ಎಸ್.ಟಿ)	35,586	3.4
9	ಕರ್ನಾಟಕ	1	ಚಿಕ್ಕಬಳ್ಳಾಪುರ	18,648	1.34
10	ಕೇರಳ	1	ಕಾಸರಗೋಡ್	4,34,523	39.5
11		2	ಕನ್ನೂರ್	4,35,182	41.29
12		3	ವಡಕರ	4,42,092	41.49
13		4	ಕೊಜೀಕ್ಕೋಡ್	4,08,219	37.93
14		5	ಮಲಪ್ಪುರಂ	3,29,720	31.87
15		6	ಅಲತ್ತೂರ್ (ಎಸ್.ಸಿ)	3,74,847	36.8
16		7	ಪಾಲಕ್ಕಾಡ್	3,87,637	37.7
17		8	ಚಾಲಕುಡಿ	3,41,170	34.45
18		9	ಎರ್ನಾಕುಲಂ	3,22,110	33.3
19		10	ಕೊಟ್ಟಾಯಂ	3,14,787	34.58
20		11	ಆಲಪುರ	4,45,970	40.96
21		12	ಪಟ್ಟನಂತಿಟ್ಟಾ	3,36,684	32.8
22		13	ಕೊಲ್ಲಂ	3,50,821	36.24
23		14	ಅಟ್ಟಿಂಗಲ್	3,42,748	34.11
24		15	ಇಡುಕ್ಕಿ	3,27,440	35.62
25		16	ಪೊನ್ನಾನಿ	3,28,551	32.3
26	ಮಧ್ಯ ಪ್ರದೇಶ	1	ರೇವಾ	10,453	1.03
27	ಮಹಾರಾಷ್ಟ್ರ	1	ದಿಂಡೊರಿ (ಎಸ್.ಟಿ)	1,09,570	9.63
28	ಒಡಿಶಾ	1	ಭುವನೇಶ್ವರ	23,026	2.29
29	ಪಂಜಾಬ್	1	ಅನಂದಪುರ ಸಾಹಿಬ್	10,655	0.99
30	ರಾಜಸ್ತಾನ	1	ಬಿಕನೇರ್ (ಎಸ್.ಸಿ)	8,997	0.82
31		2	ಸಿಕಾರ್	31,462	2.37
32		3	ಚುರು	25,090	1.89
33	ತಮಿಳುನಾಡು	1	ಮಧುರೈ	4,47,075	44
34		2	ಕೊಯಂಬತ್ತೂರ್	5,71,150	45.66
35	ತೆಲಂಗಾಣ	1	ನಲ್ಗೊಂಡ	25,089	2.13
36		2	ಖಿಮ್ಮಮ್	57,102	5.01
37	ತ್ರಿಪುರ	1	ತ್ರಿಪುರ ಪೂರ್ವ (ಎಸ್.ಟಿ)	2,00,963	19.22
38		2	ತ್ರಿಪುರ ಪಶ್ಚಿಮ	1,71,826	15.51
39	ಉತ್ತರಖಂಡ್	1	ತೆಹ್ರಿ	6,626	0.76
40	ಪಶ್ಚಿಮ ಬಂಗಾಳ	1	ಜಾಲ್‌ಪೈಗುರಿ (ಎಸ್.ಸಿ)	76,166	5.07
41		2	ರಾಯ್‌ಗಂಜ್	1,82,035	14.25
42		3	ಮುರ್ಶಿದಾಬಾದ್	1,80,793	12.44
43		4	ರಾಣಾಘಾಟ್ (ಎಸ್.ಸಿ)	97,771	6.59
44		5	ಬಂಗಾವ್ (ಎಸ್.ಸಿ)	90,122	6.4
45		6	ಡಮ್ ಡಮ್	1,67,590	13.91
46		7	ಡಂಡಂ ಹಾರ್ಬರ್	93,941	6.67
47		8	ಜಾಧವಪುರ	3,02,264	21.04
48		9	ಕೊಲ್ಕತಾ ದಕ್ಷಿಣ	1,40,275	11.63
49		10	ಉಲುಬೇರಿಯಾ	81,314	6.2
50		11	ಹೂಗ್ಲಿ	1,21,588	8.34
51		12	ಅರಂಬಾಗ್ (ಎಸ್.ಸಿ.)	1,00,520	6.83
52		13	ಬಿಷ್ಣುಪುರ್ (ಎಸ್.ಸಿ.)	1,02,615	7.22
53		14	ಬರ್ಧಮಾನ್ ಪುರ್ಬ (ಎಸ್.ಸಿ)	1,75,920	12.22
54		15	ಬರ್ಧಮಾನ್ ದುರ್ಗಾಪುರ	1,61,329	11.26
55		16	ಬೀರಭೂಮ್	96,763	6.68
56		17	ಡಾರ್ಜಿಲಿಂಗ್	50,524	3.99
57		18	ಕೃಷ್ಣಾನಗರ	1,20,222	8.8
58		19	ಬರಕ್ಪುರ್	1,17,456	10.63
59		20	ಮತುರಾಪುರ್(ಎಸ್.ಸಿ)	92,417	6.59
60		21	ಕೋಲ್ಕತ ಉತ್ತರ	71,080	7.48
61		22	ಹೌರಾ	1,05,547	8.64
62		23	ಶ್ರೀರಾಮಪುರ್	1,52,281	10.86
63		24	ತಮ್ಲುಕ್	1,36,129	9.41
64		25	ಕಾಂತಿ	76,185	5.35
65		26	ಜಾರ್ಗ್ರಾಮ್ (ಎಸ್.ಟಿ.)	75,680	5.38
66		27	ಬಂಕುರಾ	1,00,282	7.38
67		28	ಅಸನ್ಸೋಲ್	87,608	7.08
68		29	ಬೋಲಾಪುರ (ಎಸ್.ಟಿ)	91,964	6.29
69		30	ಜಾಂಗಿರ್‌ಪುರ್	95,501	7.32
70		31	ಮಾಲ್ಡಾ ಉತ್ತರ	50,401	3.72
71	ಯು.ಟಿ. ಆಫ್ ಲಕ್ಷದ್ವೀಪ	1	ಲಕ್ಷದ್ವೀಪ (ಎಸ್.ಟಿ)	420	0.89



ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಉರ್ವಸ್ಟೋರ್ ಘಟಕದ ವತಿಯಿಂದ ತೀರಾ ಬಡತನವಾಗಿರುವ ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆಯನ್ನು ದಿನಾಂಕ 26-05-2019 ರಂದು ಉರ್ವಸ್ಟೋರ್ ಸುಂಕದಕಟ್ಟೆಯಲ್ಲಿರುವ ಕಾಂ. ಸುಧೀರ್ ಕುಮಾರ್ ಭವನದಲ್ಲಿ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರು...

ಮುಖ್ಯ ಅತಿಥಿ – ಇಮ್ತಿಯಾಜ್ ಬಿ.ಕೆ. ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷರು.

ಅಧ್ಯಕ್ಷತೆ– ಮನೋಜ್ ಕುಲಾಲ್ (ಕಟ್ಟಡ ಕಾರ್ಮಿಕರ ಮುಖಂಡರು)

ಪ್ರಶಾಂತ ಎಂ.ಬಿ. (ದಲಿತ ಮುಖಂಡರು), ಉದಯ ಕೆ.ಎಸ್, ಗಂಗಾಧರ, ಸಾಗರ್ ಉರ್ವಾಸ್ಟೋರ್ಸ್ (ಸ್ವಾಗತ), ಪ್ರಶಾಂತ ಜೀ ಆಚಾರ್ಯ (ಕಾರ್ಯಕ್ರಮ ನಿರ್ವಹಣೆ), ಧನರಾಜ್ ಕುಮಾರ್ (ಡಿವೈಎಫ್‌ಐ ಕಾರ್ಯದರ್ಶಿ) ಸಮಾರೋಪ ಮಾಡಿದರು. ●

ಬೆಳ್ತಂಗಡಿ ಪ್ರಸನ್ನ ಐಟಿಐ ಕಾಲೇಜಿನ ವಿಧ್ಯಾರ್ಥಿ ಮೇಲೆ ಹಲ್ಲೆ ಖಂಡನೆ

ಮಂಗಳೂರು: ಬೆಳ್ತಂಗಡಿ ಪ್ರಸನ್ನ ಐಟಿಐ ವಿದ್ಯಾರ್ಥಿಯ ಮೇಲೆ ಮಾರಾಣಾಂತಿಕ ಹಲ್ಲೆ ನಡೆಸಿದ ಎಬಿವಿಪಿ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳು ಹಾಗೂ ಅವರಿಗೆ ಬೆಂಬಲ ನೀಡುತ್ತಿರುವ ಸಮಾಜಘಾತುಕ ಶಕ್ತಿಗಳ ವಿರುದ್ಧ ಸರ್ಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಎಸ್.ಎಫ್.ಐ. ಒತ್ತಾಯಿಸಿದೆ.

ಕಾಲೇಜು ಸರ್ವ ಜನಾಂಗದ ಶಾಂತಿಯ ತೋಟ. ಆದರೆ ಎ.ಬಿ.ವಿ.ಪಿ.ಯಂತಹ ಮತಾಂಧ ಸಂಘಟನೆಗಳು ವಿದ್ಯಾರ್ಥಿಗಳ ಮಧ್ಯೆ ವಿಷ ಬೀಜ ಬಿತ್ತಿ ಇಂತಹ ಹಲ್ಲೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ವಿಭಜಿಸುವ ಕೆಲಸ ಮಾಡುತ್ತಿದೆ. ಆದರಿಂದ ಕಾಲೇಜಿನ ಪ್ರಾಂಶುಪಾಲರು ಕಾಲೇಜಿನಲ್ಲಿ ಎಬಿವಿಪಿ ನಡೆಸುತ್ತಿರುವ ಗೂಂಡಾಗಿರಿಯ ಮೇಲೆ ನಿಯಂತ್ರಣ ಹೇರಬೇಕು ಮತ್ತು ಕಾಲೇಜಿನಲ್ಲಿ ಶಾಂತಿಯ ವಾತಾವರಣ ನಿರ್ಮಿಸಲು ಪ್ರಯತ್ನಿಸಬೇಕು ಎಂದು ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಮಾಧುರಿ ಬೋಳಾರ್ ಹಾಗೂ ಜಿಲ್ಲಾ ಅಧ್ಯಕ್ಷ ಚರಣ್ ಶೆಟ್ಟಿ ಪಂಜಿಮೊಗರು ಒತ್ತಾಯಿಸಿದ್ದಾರೆ. ●

ಎಡಶಕ್ತಿಗಳು ಮತ್ತೆ ಮೇಲೆದ್ದು ಬರುತ್ತವೆ...



ಎಡಶಕ್ತಿಗಳ ಭವಿಷ್ಯವನ್ನು ಕೇವಲ ಚುನಾವಣೆ ಕಣದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಪ್ರತಿಗಾಮಿ ಕೋಮುವಾದ ಮತ್ತು ಅದನ್ನು ಬಳಸಿಕೊಳ್ಳುತ್ತಿರುವ ನವ-ಉದಾರವಾದ - ಈ ಎರಡೂ ಶಕ್ತಿಗಳ ವಿರುದ್ಧ ಅವು ನಿರಂತರ ಹೋರಾಟ ನಡೆಸುತ್ತಿವೆ. ಎಡ ನೇತೃತ್ವದ ಸಾಮೂಹಿಕ ಸಂಘಟನೆಗಳು ದುಡಿಯುವ ಜನರು, ರೈತರು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡವರ ಇತರೆ ವಿಭಾಗಗಳ ಹೋರಾಟಗಳನ್ನು ಸಂಘಟಿಸುವಲ್ಲಿ ಮತ್ತು ಭಾಗವಹಿಸುವಲ್ಲಿ ನೇತೃತ್ವದ ಪಾತ್ರ ವಹಿಸುತ್ತಿವೆ. ಎಡಪಕ್ಷಗಳ ಈ ಸಂಸದೀಯೇತರ ಪಾತ್ರವು ಇಂದು ಹೆಚ್ಚಿನ ಮಹತ್ವವನ್ನು ಗಳಿಸಿದೆ. ಬಲಪಂಥೀಯ ಆಕ್ರಮಣದ ವಿರುದ್ಧ ಹೋರಾಟಕ್ಕೆ ಸೈದ್ಧಾಂತಿಕ ಅಸ್ತ್ರಗಳು ಇರುವುದು ಎಡಪಕ್ಷಗಳಲ್ಲಿ ಮಾತ್ರ.

*** ಪ್ರಕಾಶ್ ಕಾರಟ್**

ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಅಳಿದು ಹೋಗಿವೆ ಎಂದು ಕೆಲವು ಮುಖ್ಯ ವಾಹಿನಿ ಪತ್ರಿಕೆಗಳು ತಮ್ಮ ಸಂಪಾದಕೀಯದಲ್ಲಿ ಪ್ರಕಟಿಸಿವೆ. "ಎಡಪಂಥ ಮುಗಿದು ಹೋದ ಕತೆ" ಅಥವಾ ಅವನತಿಯ ಅಂಚಿನಲ್ಲಿವೆ ಎಂದು ಈ ಪತ್ರಿಕೆಗಳು ತೀರ್ಪಿತ್ತಿವೆ.

ಲೋಕಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ತೀವ್ರ ಸೋಲಿನ ಹಿನ್ನೆಲೆಯಲ್ಲಿ ಇಂಥ ಶ್ರದ್ಧಾಂಜಲಿ ಬರಹಗಳನ್ನು ಪ್ರಕಟಿಸಲಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಯಾವುದೇ ಸ್ಥಾನಗಳನ್ನು ಗಳಿಸಿಲ್ಲ ಮತ್ತು ಕೇರಳದಲ್ಲಿ ಕೇವಲ ಒಂದು ಸೀಟನ್ನು ಗೆದ್ದಿದೆ ಎಂಬ ಆಧಾರದಲ್ಲಿ ಈ ರೀತಿ ಬರೆಯಲಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ಚರಮಗೀತೆಯನ್ನು ಬರೆಯುವುದು ಶುದ್ಧ ತಪ್ಪು ಹಾಗೂ ಅದು ಎಡಪಂಥೀಯತೆ ಎಂದರೇನು ಎಂಬ ಬಗ್ಗೆ ಗಂಭೀರವಾಗಿ ಅಪಾರ್ಥ ಮಾಡಿಕೊಂಡಿರುವುದರ ಪರಿಣಾಮವಾಗಿದೆ. 2019 ಲೋಕಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸಂಸದೀಯ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಫಲಿತಾಂಶ ಪಡೆದಿವೆ ಎಂಬುದು ನಿಜವೇ ಹೌದು. ಆದರೆ ಈ ಚುನಾವಣಾ ಕಾರ್ಯ ನಿರ್ವಹಣೆಯನ್ನು ಆಧರಿಸಿಯಷ್ಟೇ ಎಡಪಂಥದ ಭವಿಷ್ಯವನ್ನು ಅಳೆಯುವುದು ಶುದ್ಧ ತಪ್ಪು.

ತ್ರಿಪುರಾ ಚುನಾವಣೆ ಫಲಿತಾಂಶವು ಚುನಾವಣೆಯನ್ನೇ ಹುಸಿಗೊಳಿಸಿರುವುದರ ಫಲವಾಗಿದೆ. ಅದು ಎಡರಂಗದ ನಿಜವಾದ ಶಕ್ತಿಯನ್ನು ಪ್ರತಿನಿಧಿಸುವುದಿಲ್ಲ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ 2018ರ ವಿಧಾನಸಭೆ ಚುನಾವಣೆಯ ನಂತರದಿಂದ ತ್ರಿಪುರಾದಲ್ಲಿ ಸಿಪಿಐ(ಎಂ) ವಿರುದ್ಧ ಭಯ ಮತ್ತು ಹಿಂಸೆಯ ವಾತಾವರಣವಿತ್ತು. ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಸಹಜ ರಾಜಕೀಯ ಚಟುವಟಿಕೆಗಳಿಗೆ ಆಸ್ಪದವಿರಲಿಲ್ಲ. ರಾಜ್ಯದ ಎರಡು ಲೋಕಸಭೆ ಕ್ಷೇತ್ರಗಳ ಪೈಕಿ ಒಂದಾದ ತ್ರಿಪುರಾ ಪಶ್ಚಿಮ ಕ್ಷೇತ್ರದಲ್ಲಿ ಭಾರೀ ಪ್ರಮಾಣದ ಚುನಾವಣಾ ಮೋಸ ನಡೆಸಲಾಯಿತು ಮತ್ತು ಮತದಾರರನ್ನು ಭಯಪಡಿಸಲಾಯಿತು. ಈ ರೀತಿಯ ರಿಗ್ಗಿಂಗ್‌ನಿಂದಾಗಿ ಈ ಕ್ಷೇತ್ರದ ಹೆಚ್ಚು ಕಮ್ಮಿ ಶೇಕಡಾ ಹತ್ತರಷ್ಟು ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಚುನಾವಣೆ ಆಯೋಗ ಆದೇಶಿಸಬೇಕಾಯಿತು. ಇದೂ ಕಡಿಮೆಯೇ. ವಾಸ್ತವವಾಗಿ ಹೀಗೆ ಮರು ಮತದಾನ ನಡೆಸಬೇಕಾಗಿದ್ದ ಮತಗಟ್ಟೆಗಳ ಸಂಖ್ಯೆ ಇನ್ನೂ ಬಹಳ ಹೆಚ್ಚಿತ್ತು. ಇದರಿಂದಾಗಿ ಎರಡನೇ ಹಂತದಲ್ಲಿ ಚುನಾವಣೆ ನಡೆಯಬೇಕಿದ್ದ ತ್ರಿಪುರಾ ಪೂರ್ವ ಕ್ಷೇತ್ರದ ಮತದಾನವನ್ನು ಕೂಡ ಒಂದು ವಾರ ಮುಂದೂಡಲಾಯಿತು. ಮತದಾರರ ಮೇಲೆ ಬಲವಂತ ಮಾಡಿದ್ದರಿಂದ, ಪೋಲಿಂಗ್ ಏಜೆಂಟರನ್ನು ಓಡಿಸಿದ್ದರಿಂದ ಮತ್ತು ಇತರ ಅವ್ಯವಹಾರಗಳಿಂದಾಗಿ ಸುಮಾರು 400 ಬೂತ್‌ಗಳಲ್ಲಿ ತೊಂದರೆಯಾಯಿತು. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಚುನಾವಣೆ ನಂತರ ನಡೆದ ಹಿಂಸಾಚಾರಗಳು ಬಿಜೆಪಿ ಮತ್ತದರ ಗೂಂಡಾಗಳು ರಾಜ್ಯ ಮತ್ತು ಪ್ರಜಾಪ್ರಭುತ್ವವನ್ನು ಯಾವ ಸ್ಥಿತಿಗೆ ತಳ್ಳಿವೆ ಎಂಬುದಕ್ಕೆ ಸಾಕ್ಷಿಯಾಗಿವೆ.

ಪಶ್ಚಿಮ ಬಂಗಾಳದಲ್ಲಿ ಎಂಟು ವರ್ಷ ಕಾಲ ತೃಣಮೂಲ ಕಾಂಗ್ರೆಸ್ ಮತ್ತು ಮಮತಾ ಬ್ಯಾನರ್ಜಿ ಸರಕಾರ ನಡೆಸಿದ ಭಯೋತ್ಪಾದನೆ, ಹಿಂಸಾಚಾರ ಮತ್ತು ಗೂಂಡಾಗಿರಿಯು ಎಡಪಂಥೀಯರನ್ನು ಮಟ್ಟ ಹಾಕಲು ಮತ್ತು ಸಿಪಿಐ(ಎಂ) ಅನ್ನು ನಾಶ ಮಾಡಲು ಮಾಡಿದ ಹುನ್ನಾರವಾಗಿತ್ತು. ಸಿಪಿಐ(ಎಂ) ಮತ್ತು ಎಡಪಕ್ಷಗಳ 213 ಸದಸ್ಯರು ಹಾಗೂ ಬೆಂಬಲಿಗರ ಹತ್ಯೆ, ಪಕ್ಷದ ಸಾವಿರಾರು ಸದಸ್ಯರು ಹಾಗೂ ಬೆಂಬಲಿಗರು ಮನೆಮಠ ಕಳೆದುಕೊಳ್ಳಲು ಹಾಗೂ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ನೂರಾರು ಕಚೇರಿಗಳನ್ನು ವಶಪಡಿಸಿಕೊಳ್ಳಲು ಕಾರಣವಾದ ಫ್ಯಾಸಿಸ್ಟ್ ರೀತಿಯ ದಾಳಿಗಳನ್ನು ಕಾರ್ಪೊರೇಟ್ ಮಾಧ್ಯಮಗಳು ಬೇಕಂತಲೇ ನಿರ್ಲಕ್ಷಿಸಿದವು.

ಇಂಥ ಸನ್ನಿವೇಶದಲ್ಲಿ, ಆರ್‌ಎಸ್‌ಎಸ್ ಬೆಂಬಲ ಹೊಂದಿದ ಬಿಜೆಪಿಗೆ ರಾಜ್ಯದಲ್ಲಿ ತನ್ನ ಅಸ್ತಿತ್ವವನ್ನು ತೋರಿಸಲು ಸಾಧ್ಯವಾಯಿತು. ಎಡಪಕ್ಷಗಳು ನಿರಂತರ ಆಕ್ರಮಣಕ್ಕೆ ಒಳಗಾಗಿದ್ದಾಗ, 2004ರ ನಂತರದಲ್ಲಿ ಆರ್‌ಎಸ್‌ಎಸ್ ಮತ್ತು ಅದರ ಸಂಘಟನೆಗಳಿಗೆ ರಾಜ್ಯದಲ್ಲಿ ಮುಕ್ತ ಅವಕಾಶವನ್ನು ನೀಡಲಾಯಿತು. ಸಂಘ ಪರಿವಾರದ ಕೋಮುವಾದದ ಆಕ್ರಮಣದ ಮುಂದೆ, ಟಿಎಂಸಿ ಮತ್ತು ಮಮತಾ ಬ್ಯಾನರ್ಜಿ ಅದೇ ನೆಲೆಯಲ್ಲಿ ಕೋಮುವಾದ ಎದುರಿಸುವ ಸಮಯಸಾಧಕ ಧೋರಣೆ ಪ್ರದರ್ಶಿಸಿ ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿದರು. ಬಂಗಾಳದಲ್ಲಿ ಬಿಜೆಪಿಯ ಬೆಳವಣಿಗೆ ಮತ್ತು ಅದರ ಚುನಾವಣಾ ಯಶಸ್ಸಿಗೆ ಯಾರನ್ನಾದರೂ ದೂಷಿಸಬೇಕಿದ್ದರೆ, ಮಮತಾ ಬ್ಯಾನರ್ಜಿ ಮತ್ತು ಟಿಎಂಸಿಯನ್ನು, ಅದರ ತೀರಾ ಕೆಳಮಟ್ಟಕ್ಕಿಳಿದ ರಾಜಕೀಯ ಮತ್ತು ಪ್ರಜಾಪ್ರಭುತ್ವವನ್ನು ವ್ಯವಸ್ಥಿತವಾಗಿ ದಮನ ನಡೆಸಿದ್ದನ್ನು ದೂಷಿಸಬೇಕು.

ಕಳೆದ ಮೂರು ವರ್ಷಗಳಲ್ಲಿ, ಸಿಪಿಐ(ಎಂ) ಮತ್ತು ಎಡರಂಗ ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಕೋಮುವಾದದ ವಿರುದ್ಧ ಅನೇಕ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಿದ್ದವು ಮತ್ತು ದುಡಿಯುವ ಜನರ ಅನೇಕ ಹೋರಾಟಗಳಿಗೆ ನೇತೃತ್ವ ನೀಡಿವೆ. ಸಿಪಿಐ(ಎಂ) ಮತ್ತು ಎಡರಂಗದ ಮತ ಗಳಿಕೆಯ ಪ್ರಮಾಣದಲ್ಲಿ ತೀವ್ರ ಕುಸಿತ ಆಗಿರುವುದು ಒಂದು ಗಂಭೀರ ವಿಷಯವೇ. ಆದರೆ ಮತ್ತೆ ಹೋರಾಟದ ರಂಗಕ್ಕೆ ಮರಳಲು, ಒಂದು ಕಠಿಣಶ್ರಮ ಮತ್ತು ದೀರ್ಘ ಹೋರಾಟವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವಂತೆ ಚುನಾವಣೆ ಫಲಿತಾಂಶವನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗುವುದು, ಅಗತ್ಯವಾದ ರಾಜಕೀಯ ಮತ್ತು ಸಂಘಟನಾತ್ಮಕ ಪಾಠಗಳನ್ನು ಕಲಿಯಲಾಗುವುದು.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಎಡಪಕ್ಷಗಳ ರಕ್ಷಣೆಯ ಹೋರಾಟ ಮತ್ತು ಅದರ ಭವಿಷ್ಯವನ್ನು ಕೇವಲ ಚುನಾವಣೆ ಕಣದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಚಳವಳಿ, ಅದರ ಕಾರ್ಯಕರ್ತರು ಮತ್ತು ಬೆಂಬಲಿಗರ ರಕ್ಷಣೆಗಾಗಿ, ಸರಕಾರಿ ಬೆಂಬಲಿತ ಭಯೋತ್ಪಾದನೆ ಮತ್ತು ಹಿಂಸೆಯನ್ನು ಎದುರಿಸಲು ಮತ್ತು ಜನಪ್ರಿಯ ಹೋರಾಟ ಹಾಗೂ ಚಳವಳಿಗಳನ್ನು ಕಟ್ಟಲು ಒಂದು ಸುದೀರ್ಘ ಹೋರಾಟದ ಅಗತ್ಯವಿದೆ

ಕೇರಳದಲ್ಲಿ ವಿಧಾನಸಭೆ ಮತ್ತು ಸಂಸತ್ ಚುನಾವಣೆಗಳಲ್ಲಿ ಮತದಾನದ ವಿಧಾನ ಭಿನ್ನವಾಗಿರುವುದಕ್ಕೆ ಒಂದು ಇತಿಹಾಸವೇ ಇದೆ. ಎಲ್‌ಡಿಎಫ್‌ಗೆ ವಿಧಾನಸಭೆ ಚುನಾವಣೆಗಳಿಗೆ ಹೋಲಿಸಿದರೆ ಲೋಕಸಭೆ ಚುನಾವಣೆಗಳಲ್ಲಿ ಹೆಚ್ಚು ಸೋಲು ಆಗಿದೆ. 1977ರ ಲೋಕಸಭೆ ಚುನಾವಣೆಗಳಲ್ಲಿ ಉತ್ತರ ಭಾರತದಲ್ಲಿ ಕಾಂಗ್ರೆಸ್ ಧೂಳೀಪಟವಾಗಿದ್ದಾಗ ಸಿಪಿಐ(ಎಂ) ಒಂದೇ ಒಂದು ಸ್ಥಾನ ಗೆದ್ದಿರಲಿಲ್ಲ. ಆದರೆ ಕೇರಳದಲ್ಲಿ ಕಾಂಗ್ರೆಸ್ ಪ್ರಚಂಡ ಜಯ ಸಾಧಿಸಿತ್ತು. ಹಾಗಿದ್ದರೂ ಮುಂದಿನ 1980ರ ಅಸೆಂಬ್ಲಿ ಚುನಾವಣೆಯಲ್ಲಿ ಎಲ್‌ಡಿಎಫ್ ಜಯಗಳಿಸಿ ಸರಕಾರವನ್ನು ರಚಿಸಿತು. ಅದೇ ರೀತಿ, 1984ರ ಲೋಕಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಒಂದು ಸ್ಥಾನವನ್ನು ಮಾತ್ರ ಗಳಿಸಿತು, 1987ರ ವಿಧಾನಸಭೆ ಚುನಾವಣೆಯಲ್ಲಿ ಎಲ್‌ಡಿಎಫ್ ಒಂದು ಖ್ಯಾತ ಗೆಲವನ್ನು ಸಂಪಾದಿಸಿತು

ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ಗೆ ಕೇರಳದಲ್ಲಿ ಒಂದು ಸಾಮೂಹಿಕ ನೆಲೆಯಿದೆ, ಕಾರ್ಯಕರ್ತರ ಬಲವಾದ ಜಾಲವಿದೆ ಮತ್ತು ಜನತೆಯಿಂದ ತನ್ನ ಸಾಮಾಜಿಕ-ಆರ್ಥಿಕ ಧೋರಣೆಗಳಿಗೆ ಸಕಾರಾತ್ಮಕ ಪ್ರತಿಕ್ರಿಯೆ ಗಳಿಸಿರುವ ಒಂದು ಎಲ್‌ಡಿಎಫ್ ಸರಕಾರವಿದೆ. ಈ ಚುನಾವಣೆಗಳ ಅನುಭವದಿಂದ ಪಾಠ ಕಲಿತು ನಮ್ಮಿಂದ ದೂರವಾದ ಜನರ ಬೆಂಬಲವನ್ನು ಮರಳಿ ಗಳಿಸಲು ತಕ್ಷಣದ ಕ್ರಮಗಳನ್ನು ಕೈಗೊಳ್ಳಲಾಗುವುದು

ಭಾರತದಲ್ಲಿ ತೀರಾ ವೈಷಮ್ಯಭರಿತವಾದ ಒಂದು ವಾತಾವರಣದಲ್ಲಿ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಕೆಲಸ ಮಾಡುತ್ತಿವೆ. ಆಳುವ ವರ್ಗಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ನವ-ಉದಾರವಾದಿ ಆಳ್ವಿಕೆಯು ಎಡಪಕ್ಷಗಳನ್ನು ಗುರಿಯಾಗಿಸಿಕೊಂಡಿದ್ದು ಅವುಗಳ ರಾಜಕೀಯ ಪ್ರಭಾವವನ್ನು ನಾಶ ಮಾಡಲು ಟೊಂಕಕಟ್ಟಿ ನಿಂತಿದೆ. ಈ ಉದ್ದೇಶಕ್ಕೆ ಅದು ಪ್ರತಿಗಾಮಿ ಕೋಮುವಾದಿ ಹಿಂದುತ್ವ ಶಕ್ತಿಗಳನ್ನು ಬಳಸಿಕೊಳ್ಳುತ್ತಿದೆ.

ನವ-ಉದಾರವಾದ ಮತ್ತು ಕೋಮುವಾದ- ಈ ಎರಡೂ ಶಕ್ತಿಗಳ ವಿರುದ್ಧ ಎಡಶಕ್ತಿಗಳು ನಿರಂತರ ಹೋರಾಟ ನಡೆಸುತ್ತಿವೆ. ಎಡ ನೇತೃತ್ವದ ಸಾಮೂಹಿಕ ಸಂಘಟನೆಗಳು ದುಡಿಯುವ ಜನರು, ರೈತರು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡವರ ಇತರೆ ವಿಭಾಗಗಳ ಹೋರಾಟಗಳನ್ನು ಸಂಘಟಿಸುವಲ್ಲಿ ಮತ್ತು ಭಾಗವಹಿಸುವಲ್ಲಿ ನೇತೃತ್ವದ ಪಾತ್ರ ವಹಿಸುತ್ತಿವೆ. ಎಡಪಕ್ಷಗಳ ಈ ಸಂಸದೀಯೇತರ ಪಾತ್ರವು ಇಂದು ಹೆಚ್ಚಿನ ಮಹತ್ವವನ್ನು ಗಳಿಸಿದೆ. ಬಲಪಂಥೀಯ ಆಕ್ರಮಣದ ವಿರುದ್ಧ ಹೋರಾಟಕ್ಕೆ ಸೈದ್ಧಾಂತಿಕ ಅಸ್ತ್ರಗಳು ಇರುವುದು ಎಡಪಕ್ಷಗಳಲ್ಲಿ ಮಾತ್ರ

ಒಟ್ಟಾರೆಯಾಗಿ ಹೇಳುವುದಾದರೆ, ತೀವ್ರ ಚುನಾವಣಾ ಹಿನ್ನಡೆ ಬಗ್ಗೆ ನಾಯಕತ್ವವು ಅಂದರೆ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಗಂಭೀರ ಸ್ವ-ವಿಮರ್ಶೆ ಮಾಡಿಕೊಳ್ಳಬೇಕು. ಇದನ್ನು ಮಾಡಲಾಗುತ್ತದೆ ಹಾಗೂ ಪಕ್ಷದ ಸ್ವತಂತ್ರ ಶಕ್ತಿಯನ್ನು ಪುನರುಜ್ಜೀವನಗೊಳಿಸಿ ಬೆಳೆಸಲು ರಾಜಕೀಯ ಮತ್ತು ಸಂಘಟನಾತ್ಮಕ ಕಾರ್ಯಭಾರಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಅವುಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

ಅನು: ವಿಶ್ವ





ಎಡ ಇಲ್ಲದ ಭಾರತದಲ್ಲಿ ಪ್ರಜೆಗಳಿಗೆ ಬಲವೆಲ್ಲಿ?

ವಿಜಯ ಪ್ರಸಾದ್, ಸುಧನ್ವ. ಅನು: ನಾ ದಿವಾಕರ

ರೈತರ, ಕಾರ್ಮಿಕರ, ಮಹಿಳೆಯರ ಮತ್ತು ದಲಿತರ ಧ್ವನಿವರ್ಧಕಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಭಾರತದ ಯಾವುದೋ ಒಂದು ಎಡಪಂಥೀಯ ಸಂಘಟನೆ ಅಥವಾ ಎಡಪಂಥೀಯ ಚಳವಳಿಗಳು. ಎಡಪಂಥೀಯ ಚಳವಳಿಗಳು ಇಂದಿನ ಕಾಲದ ವಾಸ್ತವಗಳಿಗೆ ವಿಮುಖವಾಗಿ ಅಥವಾ ಅಂಚಿಗೆ ತಳ್ಳಲ್ಪಟ್ಟಿವೆ ಎಂಬ ಅಭಿಪ್ರಾಯಗಳು ಸಾಮಾನ್ಯವಾಗಿ ಕೇಳಿಬರುತ್ತವೆ. ಆದರೂ 2018 ರಲ್ಲಿ ಇಡೀ ದೇಶವನ್ನೇ ಬೆಚ್ಚಿಬೀಳಿಸುವಂತೆ ಹೋರಾಟದ ಕಣಕ್ಕಿಳಿದ ಜನಸಾಮಾನ್ಯರ ಆಂದೋಲನಗಳಲ್ಲಿ ಎಡಪಂಥೀಯರ ಪಾತ್ರ ಮಹತ್ವದ್ದಾಗಿತ್ತು.

ಭಾರತದಲ್ಲಿ ಇಬ್ಬರ ಪೈಕಿ ಒಬ್ಬರು ರಾತ್ರಿ ಹಸಿದ ಹೊಟ್ಟೆಯಲ್ಲೆ ಮಲಗುತ್ತಾರೆ. ಅಂದರೆ 70 ಕೋಟಿ ಜನ ಎನ್ನಬಹುದು. ಇದು ಮೆಕೆನ್ಸಿ ನೀಡಿರುವ ಅಂಕಿ ಅಂಶ. ಆದರೆ ಭಾರತದಲ್ಲಿರುವ ಬಿಕ್ಕಟ್ಟುಗಳನ್ನು ಗ್ರಹಿಸಲು ಸಲಹೆಗಾರರು ಬೇಕಿಲ್ಲ. ದೇಶದ ರಸ್ತೆಗಳಲ್ಲಿ ವಾಸ್ತವದ ದರ್ಶನವಾಗುತ್ತದೆ. ರೈತರ ಆತ್ಮಹತ್ಯೆಯ ಹೆಚ್ಚಳದಿಂದ ಸಂಕೀರ್ಣವಾಗುತ್ತಿರುವ ಕೃಷಿ ಬಿಕ್ಕಟ್ಟು ಮತ್ತು ನಗರಗಳಲ್ಲಿ ಏರುತ್ತಿರುವ ಕೊಳೆಗೇರಿಗಳ ಸಂಖ್ಯೆಯಿಂದ ಸಾಬೀತಾಗುವ ನಗರದ ಸಮಸ್ಯೆಗಳು ಸಾಮಾನ್ಯ ಸಂಗತಿಗಳಾಗಿವೆ. ಭಾರತದ ಅರ್ಧಕ್ಕೂ ಹೆಚ್ಚು ಜನತೆ ಎದುರಿಸುತ್ತಿರುವ ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ನೀತಿಗಳು ಯಾವುದೇ ರೀತಿಯಲ್ಲೂ ಪರಿಣಾಮಕಾರಿಯಾಗಿಲ್ಲ. ಜನಸಾಮಾನ್ಯರಲ್ಲಿ ಮೂಡಿರುವ ಅನಾಥ ಪ್ರಜ್ಞೆ ಹಲವು ಬಾರಿ ಆಕ್ರೋಶಕ್ಕೆ ಎಡೆಮಾಡಿಕೊಡುತ್ತದೆ.

ದಲಿತರ, ರೈತರ ಮತ್ತು ಆದಿವಾಸಿಗಳ ದನಿಗಳನ್ನು ವ್ಯವಸ್ಥಿತವಾಗಿ ದಮನಿಸಲಾಗುತ್ತಿದೆ. ಬಹುಪಾಲು ರಾಜಕೀಯ ಪಕ್ಷಗಳು ಈ ಸಮುದಾಯಗಳನ್ನು ನಿರ್ಲಕ್ಷಿಸುತ್ತಿದ್ದು, ರಾಜಕೀಯ ನಿರ್ಣಯಗಳಿಗೆ ಮಧ್ಯಮ ವರ್ಗಗಳೇ ನಿರ್ಣಾಯಕ ಎನ್ನುವ ರೀತಿಯಲ್ಲಿ ಮಧ್ಯಮ ವರ್ಗಗಳನ್ನು ಪೋಷಿಸುತ್ತಿವೆ. ವಾಸ್ತವ ಸಂಗತಿ ಎಂದರೆ 1991 ರ ನಂತರದಲ್ಲಿ ಸರ್ಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಗಳ ಫಲಾನುಭವಿಗಳು ಈ ಮಧ್ಯಮ ವರ್ಗಗಳಲ್ಲ. ಬದಲಾಗಿ ಶೇ. 10 ರಷ್ಟು ಶ್ರೀಮಂತರು ದೇಶದ ಶೇ. 75 ರಷ್ಟು ಸಂಪತ್ತಿನ ಒಡೆಯರೂ, ಫಲಾನುಭವಿಗಳೂ ಆಗಿದ್ದಾರೆ. ದೇಶದ ಪ್ರಮುಖ ಉದ್ದಿಮೆಗಳ ಹಿತಾಸಕ್ತಿಯೇ ಕೇಂದ್ರ ಬಿಂದು ಆಗಿದೆ. ಆಂಧ್ರ ಪ್ರದೇಶದ ಪರಿಗಿ ಮಂಡಲದಲ್ಲಿ ಆತ್ಮಹತ್ಯೆಗೆ ಶರಣಾದ ಚಿನ್ನ ಬಾಲಯ್ಯ ಆಗಲಿ, ಬಿಹಾರದ ಗಯಾ ಜಿಲ್ಲೆಯಲ್ಲಿ ಗೌರವ ಹತ್ಯೆಗೆ ಬಲಿಯಾದ 16 ವರ್ಷದ ಬಾಲಕಿಯಾಗಲಿ ಗಣನೆಗೆ ಬರುವುದೇ ಇಲ್ಲ. ಇಂತಹ ನೂರಾರು, ಸಾವಿರಾರು ಜನರು ನಿರ್ಲಕ್ಷ್ಯಕ್ಕೊಳಗಾಗುತ್ತಿದ್ದಾರೆ.

ರೈತರ, ಕಾರ್ಮಿಕರ, ಮಹಿಳೆಯರ ಮತ್ತು ದಲಿತರ ಧ್ವನಿವರ್ಧಕಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಭಾರತದ ಯಾವುದೋ ಒಂದು ಎಡಪಂಥೀಯ ಸಂಘಟನೆ ಅಥವಾ ಎಡಪಂಥೀಯ ಚಳವಳಿಗಳು. ಎಡಪಂಥೀಯ ಚಳವಳಿಗಳು ಇಂದಿನ ಕಾಲದ ವಾಸ್ತವಗಳಿಗೆ ವಿಮುಖವಾಗಿ ಅಥವಾ ಅಂಚಿಗೆ ತಳ್ಳಲ್ಪಟ್ಟಿವೆ ಎಂಬ ಅಭಿಪ್ರಾಯಗಳು ಸಾಮಾನ್ಯವಾಗಿ ಕೇಳಿಬರುತ್ತವೆ. ಆದರೂ 2018 ರಲ್ಲಿ ಇಡೀ ದೇಶವನ್ನೇ ಬೆಚ್ಚಿಬೀಳಿಸುವಂತೆ ಹೋರಾಟದ ಕಣಕ್ಕಿಳಿದ ಜನಸಾಮಾನ್ಯರ ಆಂದೋಲನಗಳಲ್ಲಿ ಎಡಪಂಥೀಯರ ಪಾತ್ರ ಮಹತ್ವದ್ದಾಗಿತ್ತು. 2018 ರಲ್ಲಿ ಮಹಾರಾಷ್ಟ್ರದಲ್ಲಿ ನಡೆದ ರೈತರ ಸುದೀರ್ಘ ಪಾದಯಾತ್ರೆ ನಗರದ ಮಧ್ಯಮ ವರ್ಗಗಳ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದೇ ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿನ ಸಮಸ್ಯೆಯನ್ನು ಗ್ರಹಿಸುವಂತೆ ಉತ್ತೇಜಿಸಿತು. ನೂರಾರು ಜನರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ರೈತರನ್ನು ಬರಮಾಡಿಕೊಂಡು ಆತಿಥ್ಯ ನೀಡಿದ್ದರು. ಮರುದಿನ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿದ್ದಾರೆ ಎಂದು ಅರಿತ ರೈತ ಸಂಘಟನೆಗಳು ಆ ರಾತ್ರಿಯೇ ತಮ್ಮ ಸಾಮಾನು ಸರಂಜಾಮುಗಳನ್ನು ಹೊತ್ತು ಆಜಾದ್ ಮೈದಾನಕ್ಕೆ ಹೋಗಿ ತಂಗಿದ್ದರು. ರೈತರ ಈ ಸೂಕ್ಷ್ಮ ಸಂವೇದನೆ ಮುಂಬೈ ನಗರವಾಸಿಗಳಿಂದ ಪ್ರಶಂಸೆಗೀಡಾಗಿತ್ತು. ಈ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದವರು ರೈತರೆ ನಿಜ, ಆದರೆ ಈ ಆಂದೋಲನಕ್ಕೆ ರೂವಾರಿಯಾಗಿದ್ದುದು ಸಿಪಿಎಂ ಪಕ್ಷದ ಅಖಿಲ ಭಾರತ ಕಿಸಾನ ಸಭಾ. ಭಾರತದ ರೈತರು ಎದುರಿಸುತ್ತಿರುವ ಬಿಕ್ಕಟ್ಟು ಒಂದು ರೀತಿಯಲ್ಲಿ ಅಜ್ಞಾತ ಅವಸ್ಥೆಯಲ್ಲಿದ್ದು ರೈತರ ಆತ್ಮಹತ್ಯೆ ಪ್ರಕರಣಗಳು ಇದಕ್ಕೆ ಸಾಕ್ಷಿಯಾಗಿವೆ. ಒಂದು ಸಂಘಟನೆ ಈ ಏಕಾಂತತೆಯನ್ನು ಹೋಗಲಾಡಿಸಿ ಇದಕ್ಕೆ ರಾಜಕೀಯ ಸ್ವರೂಪ ನೀಡುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ ಭಾರತದಾದ್ಯಂತ ಜನಸಾಮಾನ್ಯರು ಬಂಡವಾಳ ವ್ಯವಸ್ಥೆಯ ವ್ಯತ್ಯಯಗಳ ವಿರುದ್ಧ ಸಿಡಿದೆದ್ದಿದ್ದರೂ ನರೇಂದ್ರ ಮೋದಿ ಸರ್ಕಾರ ಜನಸಾಮಾನ್ಯರಲ್ಲಿ ಮಡುಗಟ್ಟಿದ್ದ ಪ್ರಕ್ಷುಬ್ಧತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ದೇಶವ್ಯಾಪಿ ಪ್ರತಿಭಟನೆ ನಡೆಸಿದ್ದರು. ಲಕ್ಷಾಂತರ ರೈತರು ದಿಲ್ಲಿಗೆ ಪಾದಯಾತ್ರೆ ನಡೆಸಿದ್ದರು. 2019 ರ ಜನವರಿಯಲ್ಲಿ ದೇಶದ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ಹೂಡಿದ್ದರು. ಇಂತಹ ಹಲವಾರು ಹೋರಾಟಗಳು ನಡೆಯುತ್ತಲೇ ಇವೆ. ಈ ಎಲ್ಲ ಪ್ರತಿಭಟನೆ ಮತ್ತು ಹೋರಾಟಗಳು ಎಡಪಂಥೀಯ ಕಾರ್ಮಿಕ ಸಂಘಟನೆಗಳ, ಕೃಷಿ ಕಾರ್ಮಿಕರ ಮತ್ತು ರೈತ ಸಂಘಟನೆಗಳ ನೇತೃತ್ವದಲ್ಲಿ ನಡೆದಿದ್ದವು. ಭಾರತದ ಸೂಕ್ಷ್ಮ ಪ್ರಜ್ಞೆಯ ಜನಸಾಮಾನ್ಯರ ಒತ್ತಾಸೆಗೆ ಪೂರಕವಾಗಿ ಎಡ ಪಕ್ಷಗಳು ಮತ್ತು ಎಡ ಪಂಥೀಯ ಧೋರಣೆಯುಳ್ಳ ಸಂಘಟನೆಗಳು ಗೋರಕ್ಷರ ವಿರುದ್ಧ ಗೌರವ ಹತ್ಯೆಗಳ ರೂವಾರಿಗಳ ವಿರುದ್ಧ ಹೋರಾಟ ನಡೆಸುತ್ತಿವೆ. ರಾಜಸ್ಥಾನದಲ್ಲಿ ಎಡಪಕ್ಷಗಳು ಆಯೋಜಿಸಿದ್ದ ಕಿಸಾನ್ ರ್‍ಯಾಲಿ ಈ ನಿಟ್ಟಿನಲ್ಲಿ ಮಹತ್ತರವಾದದ್ದು ಮತ್ತು ಅತಿ ಹೆಚ್ಚು ಪರಿಣಾಮಕಾರಿಯಾದದ್ದು. ಈ ಹೋರಾಟಗಳು, ದಿಲ್ಲಿ ಮತ್ತು ಮಹಾರಾಷ್ಟ್ರದ ರೈತರ ಪಾದಯಾತ್ರೆಗಳು ಕೃಷಿ ಬಿಕ್ಕಟ್ಟನ್ನು ಆಡಳಿತ ವ್ಯವಸ್ಥೆಯ ಮುಂದಿರಿಸಿವೆ. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಛತ್ತೀಸ್‌ಗಡ, ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿ ಸೋಲು ಅನುಭವಿಸುವುದಕ್ಕೆ ಈ ಹೋರಾಟಗಳು ಪ್ರಮುಖ ಕಾರಣ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಜನಸಾಮಾನ್ಯರ ಈ ಕ್ರೋಡೀಕರಣವನ್ನು ಎಡಪಕ್ಷಗಳು ಚುನಾವಣಾ ಕಣದಲ್ಲಿ ಮತಗಳಾಗಿ ಪರಿವರ್ತಿಸಲು ಸಾಧ್ಯವಾಗದಿರುವುದು, ಭಾರತದ ಚುನಾವಣಾ ವ್ಯವಸ್ಥೆಯ ನ್ಯೂನತೆಗಳಿಗೆ ಒಂದು ನಿದರ್ಶನವಷ್ಟೆ. ಏಕೆಂದರೆ ಚುನಾವಣಾ ರಾಜಕಾರಣದಲ್ಲಿ ಜಾತಿ, ಸಮುದಾಯ ಮತ್ತು ಹಣಬಲ ಪ್ರಧಾನ ಪಾತ್ರ ವಹಿಸುತ್ತವೆ.

ನೋಟು ಅಮಾನ್ಯೀಕರಣದ ಅಘಾತಕಾರಿ ಪರಿಣಾಮಗಳನ್ನು ಮತ್ತು ಜಿಎಸ್‌ಟಿ ಜಾರಿಯಾದ ನಂತರ ಉದ್ಭವಿಸಿದ ಸಮಸ್ಯೆಗಳು, ದೇಶದೆಲ್ಲೆಡೆ ವ್ಯಾಪಕವಾಗಿ ಹರಡಿದ ಗುಂಪು ಹಲ್ಲೆಗಳು ಮತ್ತು ಕೋಮುವಾದಿ ಧ್ರುವೀಕರಣ, ಬೌದ್ಧಿಕ ಸಂಸ್ಥೆಗಳ ವಿಜ್ಞಾನ ವಿರೋಧಿ ಧೋರಣೆ, ಸಾರ್ವಜನಿಕ ಚರ್ಚೆಗಳಲ್ಲಿ ವ್ಯಾಪಕವಾಗಿ ವ್ಯಕ್ತವಾಗುತ್ತಿದ್ದ ಹಿಂಸಾತ್ಮಕ ಭಾಷೆ ಇವೆಲ್ಲವೂ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಿತ್ತು. ಏತನ್ಮಧ್ಯೆ ಕೇರಳದ ಎಡರಂಗ ಸರ್ಕಾರ ಒಂದು ಪರ್ಯಾಯ ಸಂಕಥನ, ಮಾರ್ಗ ಮತ್ತು ಚಟುವಟಿಕೆಯನ್ನು ಪ್ರೋತ್ಸಾಹಿಸಿತು. ಸಾಂಸ್ಕೃತಿಕ ಮಡಿವಂತಿಕೆಯನ್ನು ಭಂಗಗೊಳಿಸಲು ಸಣ್ಣ ಪ್ರಮಾಣದ ಕ್ರಮಗಳನ್ನು ಕೈಗೊಳ್ಳಲಾಯಿತು. ಸರ್ಕಾರಿ ಶಾಲೆಗಳಲ್ಲಿನ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ಒದಗಿಸಲಾಯಿತು. ಇದರಿಂದ ಋತುಸ್ರಾವದ ಕಾರಣದಿಂದಲೇ ಸಾಮಾಜಿಕವಾಗಿ ಅಪಮಾನ ಎದುರಿಸುತ್ತಿದ್ದ ಮಹಿಳೆಯರಿಗೆ ಸಾಂತ್ವನ ನೀಡಿದಂತಾಗಿತ್ತು. ಕೊಚ್ಚಿಯ ಮೆಟ್ರೋ ಟಿಕೆಟ್ ನಿರ್ವಾಹಕರ ಹುದ್ದೆಗೆ ಕೆಲವು ತೃತೀಯ ಲಿಂಗಿಗಳನ್ನು ನೇಮಕ ಮಾಡಲಾಯಿತು. ಆರೆಸ್ಸೆಸ್‌ನ ವಿಭಜಕ ರಾಜಕಾರಣವನ್ನು ಪಿಣರಾಯಿ ವಿಜಯನ್ ನೇತೃತ್ವದ ಎಡರಂಗ ಸರ್ಕಾರ ಸಮರ್ಥವಾಗಿ ಎದುರಿಸಲು ಸಾಧ್ಯವಾಗಿತ್ತು.

ಈ ಸಂದರ್ಭದಲ್ಲೇ ಕೇರಳ ಎಂದೂ ಕಾಣದಂತಹ ಭೀಕರ ಪ್ರವಾಹವನ್ನು ಎದುರಿಸಬೇಕಾಯಿತು. ಕೇಂದ್ರ ಸರ್ಕಾರದ ಅಲ್ಪಪ್ರಮಾಣದ ನೆರವು ಉಪಯುಕ್ತವಾಗಲಿಲ್ಲ. ನೈಸರ್ಗಿಕ ವಿಕೋಪಗಳನ್ನೂ ಬಿಜೆಪಿಯಂತಹ ಪಕ್ಷಗಳು ಹೇಗೆ ಪಕ್ಷಪಾತದಿಂದ ನಿರ್ವಹಿಸುತ್ತವೆ ಎಂದು ಈ ಪ್ರವಾಹಗಳ ಸಂದರ್ಭದಲ್ಲಿ ಕಾಣಬಹುದಿತ್ತು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬಡ ಜನತೆಯ ಪರಿಹಾರ ಮತ್ತು ಪುನರ್ವಸತಿ ಪೂರ್ಣವಾಗಲು ವರ್ಷಗಳೇ ಬೇಕಾಗುತ್ತದೆ.

ಕೇರಳದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಮ್ಮೆ ಪ್ರವಾಸ ಮಾಡಿದರೆ ಈ ಪ್ರವಾಹಗಳು ಸೃಷ್ಟಿಸಿರುವ ಅಘಾತಕಾರಿ ಪ್ರತ್ಯಕ್ಷ ದರ್ಶನವಾಗುತ್ತದೆ. ಆದರೆ ಈ ಪ್ರವಾಹಪೀಡಿತ ಪ್ರದೇಶಗಳಲ್ಲಿ ಕೈಗೊಂಡಿರುವ ಪುನರ್ವಸತಿ ಕ್ರಮಗಳನ್ನು ನೋಡಿದರೆ ಅಚ್ಚರಿಯಾಗುವಂತಿತ್ತು. ರಾಜ್ಯದ ಜನಸಾಮಾನ್ಯರ ಸ್ಪಂದನೆ ಮತ್ತು ಇಲ್ಲಿನ ಜನಸಂಸ್ಕೃತಿಯ ಬೇರುಗಳು ಇಲ್ಲಿ ಸ್ಪಷ್ಟವಾಗಿ ಕಾಣುವಂತಿತ್ತು. ವಿವಿಧ ಗುಂಪುಗಳು ಸ್ವಪ್ರೇರಣೆಯಿಂದ ಸಂಘಟನಾತ್ಮಕವಾಗಿ ಪ್ರಕೃತಿ ವಿಕೋಪವನ್ನು ಎದುರಿಸಿ ಪರಸ್ಪರ ನೆರವಾಗಿದ್ದವು. ತಮ್ಮ ರಕ್ಷಣೆಯನ್ನೂ ಲೆಕ್ಕಿಸದೆ, ಜೀವ ಕೊಟ್ಟು ನೀರೊಳಗೆ ಧುಮುಕಿ ನೂರಾರು ಜನರನ್ನು ರಕ್ಷಿಸಿದ ಮೀನುಗಾರರ ಮಾನವೀಯ ಸ್ಪಂದನೆ ಮತ್ತು ಸ್ಥೈರ್ಯ ವರ್ಣಿಸಲಾಗದು. ಇದಕ್ಕೆ ಪೂರಕವಾಗಿದ್ದುದು ಕೇರಳದ ಎಡರಂಗ ಸರ್ಕಾರದ ಧೋರಣೆ ಮತ್ತು ಮಾನವೀಯ ಸ್ಪಂದನೆ. ಯಾವುದೇ ಪಕ್ಷಪಾತ ಇಲ್ಲದೆ, ತಾರತಮ್ಯ ತೋರದೆ ಎಡರಂಗ ಸರ್ಕಾರ ಪರಿಹಾರ ಕಾರ್ಯಗಳನ್ನು ಕ್ಷಿಪ್ರಗತಿಯಲ್ಲಿ ಕೈಗೊಂಡಿತು. ಇದಕ್ಕೆ ತದ್ವಿರುದ್ಧವಾಗಿ ಕೇಂದ್ರ ಮೋದಿ ಸರ್ಕಾರ ಎಡಪಂಥೀಯ ಸರ್ಕಾರವನ್ನು ಚುನಾಯಿಸಿದ ತಪ್ಪಿಗಾಗಿ ಕೇರಳದ ಜನತೆಯ ಸಮಸ್ಯೆಗಳಿಗೆ ವಿಮುಖವಾಗಿತ್ತು. ಮತ್ತೊಂದೆಡೆ ಹಿಂದುತ್ವ ಗುಂಪುಗಳು ಈ ಅನಾಹುತಕ್ಕೆ ಕೋಮುವಾದಿ ಸ್ವರೂಪವನ್ನು ನೀಡುವುದರಲ್ಲಿ ನಿರತವಾಗಿದ್ದವು.

ಒಮ್ಮೆ ಯೋಚಿಸಿ ನೋಡಿ, ಭಾರತದಲ್ಲಿ ಎಡಪಂಥೀಯ ಸಂಘಟನೆಗಳು ಇಲ್ಲದೆ ಹೋದರೆ ಕಾರ್ಮಿಕರ ಮತ್ತು ರೈತರ ದನಿಗಳಿಗೆ, ಅವಕಾಶವಂಚಿತ ಸಮುದಾಯಗಳ ದನಿಗಳಿಗೆ, ಜಿಗುಪ್ಸೆ ಹೊಂದಿದ ಪ್ರಜೆಗಳ ದನಿಗಳಿಗೆ ದನಿಗೂಡಿಸುವವರು ಯಾರು? ಉತ್ತಮ ಜೀವನಕ್ಕಾಗಿ ಈ ಶ್ರಮಜೀವಿಗಳು ಹೋರಾಡುವಾಗ ಇವರ ಆಕ್ರೋಶದ ದನಿಗಳಿಗೆ ಧ್ವನಿಯಾಗುವ ಮತ್ತ್ಯಾವುದೇ ಸಂಘಟನೆಗಳು ಇರುವುದೇ? ಶಬರಿಮಲೆ ದೇವಾಲಯದಲ್ಲಿ ಮಹಿಳೆಯರಿಗೆ ಪ್ರವೇಶ ನೀಡುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದಾಗ ಇದನ್ನು ಜಾರಿಗೊಳಿಸಲು ಲಕ್ಷಾಂತರ ಮಹಿಳೆಯರ ಮಾನವ ಸರಪಳಿ ನಿರ್ಮಿಸುವ ಮೂಲಕ ಒಂದು ಆಂದೋಲನವನ್ನೇ ಹುಟ್ಟುಹಾಕುವ ಮಹತ್ಕಾರ್ಯವನ್ನು ಮತ್ತ್ಯಾರು ಮಾಡಲು ಸಾಧ್ಯವಿತ್ತು.? ವ್ಯಕ್ತಿಗತ ಸಂಪತ್ತಿನ ಕ್ರೋಡೀಕರಣವನ್ನು ಬದಿಗೊತ್ತಿ, ವಿಭಜಕ ತಂತ್ರಗಳನ್ನು ಮೀರಿ ವಿವೇಕಯುತವಾಗಿ ಹೋರಾಡಲು ಯಾರಿದ್ದಾರೆ? ಹಲವು ವರ್ಷಗಳ ಹಿಂದೆ ಉರ್ದು ಕವಿ ಅಕ್ಬರ್ ಅಲಹಬಾದಿ "ನೀವು ಸಾಮಾನ್ಯ ಜನರಂತಿದ್ದಿರಿ. ಸಾಕಷ್ಟು ಪ್ರಯಾಸ ಪಟ್ಟು ಮಾನವರಾಗಿದ್ದೀರಿ" ಎಂದು ಹೇಳಿದ್ದರು. ಈ ಪ್ರಯಾಸದ ಒಡಲಲ್ಲಿ ಎಡಪಂಥೀಯ ಚಿಂತನೆಗಳು ವಾಸಿಸುತ್ತವೆ. ಈ ಪ್ರಯತ್ನಗಳಿಲ್ಲದೆ ಹೋದರೆ ಮನುಕುಲ ಉಳಿಯಲು ಸಾಧ್ಯವೇ?



ಕೃಪೆ: ವಾರ್ತಾ ಭಾರತಿ (ದಿ. ಹಿಂದೂ)



ಮುಂದಿನ ದಿನಗಳಲ್ಲಿ ಈ ಫ್ಯಾಸಿಸ್ಟ್ ಶಕ್ತಿಗಳ ಒತ್ತಡದಿಂದಾಗಿ (ಅವು ಅದಿಕಾರದಲ್ಲಿ ಇರಲಿ ಅಥವಾ ಬಿಡಲಿ) ಸಮಾಜವು ಫ್ಯಾಸಿಸಂಕರಣಗೊಳ್ಳುತ್ತಲೆ ಇರುತ್ತದೆ. ಈ ಮಾದರಿಯ ಫ್ಯಾಸಿಸಂಕರಣವು ಫ್ಯಾಸಿಸ್ಟ್ ಪ್ರಭುತ್ವವನ್ನು ಹೇರುವುದರ ಮೂಲಕ ಸಮಾಜವನ್ನು ಫ್ಯಾಸಿಸಂಕರಣಗೊಳಿಸುತ್ತಿದ್ದ 1930ರ ಮಾದರಿಗೆ ಸಂಪೂರ್ಣ ವಿರುದ್ದವಾಗಿದೆ. ಫ್ಯಾಸಿಸ್ಟ್ ಪ್ರಭುತ್ವವಿಲ್ಲದೆ ಸಮಾಜವನ್ನು ಫ್ಯಾಸಿಸಂಕರಣಗೊಳಿಸುವ, ಯಾವುದೋ ಒಂದು ಸಂದರ್ಭದಲ್ಲಿ ಸ್ವತಃ ತಾನೆ ನಾಶವಾಗುವ ತನಕವೂ ಇದು "ಶಾಶ್ವತ ಫ್ಯಾಸಿಸಂ"ಗೆ ಒಂದು ನಿದರ್ಶನದಂತಿದೆ.

ನವಉದಾರೀಕರಣದ ಬಿಕ್ಕಟ್ಟು ಈ ತರಹದ ಸಂದರ್ಭಗಳಲ್ಲೊಂದು. ಇಂಡಿಯಾದಲ್ಲಿ ಈ ಫ್ಯಾಸಿಸಂಕರಣವನ್ನು ಪರಿಣಾಮಕಾರಿಯಾಗಿ ವಿರೋಧಿಸಬೇಕೆಂದರೆ ತನ್ನ ಕೊನೆ ತುದಿಯನ್ನು ತಲುಪಿರುವ ಈಗಿನ ನವ ಉದಾರೀಕರಣದ ಬಂಡವಾಳಶಾಹಿ ಆಳ್ವಿಕೆಯನ್ನು ಮೀರಿ ಚಿಂತಿಸಬೇಕಾಗುತ್ತದೆ. ಸಮಾಜ ಮತ್ತು ರಾಜ್ಯ ವ್ಯವಸ್ಥೆ ಫ್ಯಾಸಿಸಂಕರಣಗೊಳಿಸುವುದನ್ನು ತಡೆಯಲು ಬೇರೆಯದೇ ಚಿಂತನೆಗಳ ಅವಶ್ಯಕತೆ ಇದೆ. ಈ ನವಉದಾರೀಕರಣದ ಸುಲಿಗೆಯಿಂದ ದುಡಿಯುವ ವರ್ಗದ ಜನರನ್ನು ಕಾಪಾಡಲು ಕಾರ್ಯಯೋಜನೆಗಳ ಅವಶ್ಯಕತೆ ಇದೆ.

(ಈ ಲೇಖನ ಓದುವಾಗ ಲೋಕಸಭಾ ಚುನಾವಣೆ ಆರಂಭಗೊಳ್ಳುವ ಮೊದಲೇ ಬರೆದದ್ದು ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೂ ಅದರ ಪ್ರಮುಖ ವಿಶ್ಲೇಷಣೆಗೆ ಅದರಿಂದ ಯಾವುದೇ ಭಂಗ ಬರುವುದಿಲ್ಲ.)

ಫ್ಯಾಸಿಸಂನ ನೆರಳು

– ಪ್ರೊ. ಪ್ರಬಾತ್ ಪಟ್ನಾಯಕ್
ಅನು: ಬಿ. ಶ್ರೀಪಾದ ಭಟ್
(ಕೃಪೆ: ಫ್ರಂಟ್‌ಲೈನ್ 12, ಎಪ್ರಿಲ್ 2019)

ಮಾನವ ಹಕ್ಕುಗಳ ಮೇಲೆ ಹಲ್ಲೆ, ಅದಿಕಾರದ ಕೇಂದ್ರೀಕರಣ ಮತ್ತು ಭಯವನ್ನು ಸೃಷ್ಟಿಸುವ ವಾತಾವರಣ ಈ ಕಾರಣಗಳಿಗೆ ನರೇಂದ್ರ ಮೋದಿಯನ್ನು ಇಂದಿರಾ ಗಾಂಧಿಯವರ ತುರ್ತುಪರಿಸ್ಥಿತಿಯ ದಿನಗಳಿಗೆ ಹೋಲಿಸಬಹುದು. ಆದರೆ ಈ ಹೋಲಿಕೆ ಇಲ್ಲಿಗೆ ನಿಲ್ಲುತ್ತದೆ. ವಾಸ್ತವದಲ್ಲಿ ಅನೇಕ ವಿಷಯಗಳಲ್ಲಿ ಇವರಿಬ್ಬರೂ ತುಂಬಾ ಭಿನ್ನವಾಗಿದ್ದಾರೆ. ಮೊದಲನೆಯದಾಗಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ದೊಂಬಿ ಹತ್ಯೆಗಳು (ಲಿಂಚಿಂಗ್) ನಡೆಯುತ್ತಿರಲಿಲ್ಲ, ಮತಾಂಧರು ಬೀದಿಯಲ್ಲಿ ನಿಂತು ಜನರನ್ನ ಹೆದರಿಸುತ್ತ 'ರಾಷ್ಟ್ರೀಯತೆ'ಯ ಪಾಠ ಹೇಳಿಕೊಡುತ್ತಿರಲಿಲ್ಲ. ಈಗ ಸರಕಾರದ ವೈಫಲ್ಯವನ್ನು ಟೀಕೆ ಮಾಡುವವರ ಮೇಲೆ ಹಿಂದುತ್ವದ ಮತೀಯವಾದಿಗಳು ಹಲ್ಲೆ ಮಾಡಿ ತಪ್ಪು ಒಪ್ಪಿಕೊಳ್ಳುವಂತೆ ದೌರ್ಜನ್ಯ ನಡೆಸುತ್ತಿದ್ದಾರೆ. ಮತ್ತು ಈ ಪ್ರಜ್ಞಾವಂತರ ನೆತ್ತಿಯ ಮೇಲೆ ಸದಾ ಬಂಧನದ ಭೀತಿಯ ಕತ್ತಿ ತೂಗುತ್ತಲೇ ಇರುತ್ತದೆ. ಫೇಸ್‌ಬುಕ್‌ನಲ್ಲಿ ಸರಕಾರವನ್ನು ಟೀಕಿಸಿದ ಪ್ರಾಧ್ಯಾಪಕರನ್ನು ಮಂಡಿಯೂರಿ ಕ್ಷಮಾಪಣೆ ಕೇಳುವಂತೆ ಮಾಡಿದ ಇತ್ತೀಚಿನ ಘಟನೆಯನ್ನು ಮರೆಯಲು ಸಾದ್ಯವಿಲ್ಲ

ಹೊಸ ರಾಷ್ಟ್ರೀಯತೆ

ಎರಡನೆಯದಾಗಿ ಈಗಿನ ದಬ್ಬಾಳಿಕೆಯು ಹಿಂದುತ್ವವೆಂದರೆ ಅದು 'ರಾಷ್ಟ್ರೀಯತೆ'ಯ ಸಿದ್ಧಾಂತವೆಂದು ಹುಯಿಲಿಡುತ್ತಿದೆ. ಆದರೆ ಯಾವುದೇ ಸಾಮ್ಯತೆ ಇಲ್ಲದ ಸ್ವಾತಂತ್ರ್ಯ ಸಂದರ್ಭದ ವಸಾಹತುಶಾಹಿ–ವಿರೋದಿ ರಾಷ್ಟ್ರೀಯತೆಯ ಹೆಸರನ್ನು ಬಳಸಿಕೊಂಡು ಲಾಭ ಪಡೆದುಕೊಳ್ಳುತ್ತಿದೆ. ತುರ್ತುಪರಿಸ್ಥಿತಿಯ ಕಾಲದ ದಬ್ಬಾಳಿಕೆಯಲ್ಲಿ ಇಂದಿರಾಗಾಂಧಿಯವರ ಟೀಕಾಕಾರರನ್ನು ಗೌರವಾನ್ವಿತರು ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಈಗಿನ ದಬ್ಬಾಳಿಕೆಯು ಟೀಕಾಕಾರರನ್ನು ತುಚ್ಚವಾಗಿ ಪರಿಗಣಿಸುತ್ತಿದೆ ಮತ್ತು ಅವರನ್ನ 'ಜನ ವಿರೋದಿ' ಎಂದು ಕರೆಯಲಾಗುತ್ತಿದೆ. ವಿರೋದ ಪಕ್ಷಗಳನ್ನು ಭ್ರಷ್ಟರು ಎಂದು ದಾಳಿ ಮಾಡಲಾಗುತ್ತಿದೆ. ಜನರ ಮುಂದೆ ಅವರ ನೈತಿಕತೆಯನ್ನು ನಾಶ ಮಾಡುವ ಉದ್ದೇಶದಿಂದ ಈ ದಬ್ಬಾಳಿಕೆ ಮಾಡಲಾಗುತ್ತಿದೆ.

ಮೂರನೆಯ ವ್ಯತ್ಯಾಸವೆಂದರೆ ಸರಕಾರವು ಮಾದ್ಯಮವನ್ನು ಕಬ್ಜಾ ಮಾಡಿಕೊಂಡಿರುವುದು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮುದ್ರಣ ಮಾದ್ಯಮವನ್ನು ಪೂರ್ವ–ಸೆನ್ಸಾರ್‌ಶಿಪ್‌ಗೆ ಒಳಪಡಿಸಲಾಗಿತ್ತು. ಇದನ್ನು ವಿರೋಧಿಸಿ ಖಾಲಿ ಪುಟಗಳಲ್ಲಿ ಪತ್ರಿಕೆಯನ್ನು ಮುದ್ರಿಸಲಾಗುತ್ತಿತ್ತು. ಈಗ (ಕೆಲವನ್ನ ಹೊರತುಪಡಿಸಿ) ಬಹುಪಾಲು ಮಾಧ್ಯಮಗಳು ಹಿಂದುತ್ವದ ಅಂಗಣದಲ್ಲಿವೆ. ಈ ಮಾದ್ಯಮಗಳನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ಬಗ್ಗು ಬಡಿಯಲಾಗುತ್ತಿದೆ.

ಮಾಧ್ಯಮಗಳ ಬದಲಾದ ಪಾತ್ರವು ತುರ್ತು ಪರಿಸ್ಥಿತಿ ಮತ್ತು ಈಗಿನ ಪರಿಸ್ಥಿತಿಯ ನಡುವಿನ ನಾಲ್ಕನೆ ಮುಖ್ಯ ವ್ಯತ್ಯಾಸ. ಬಂಡವಾಳಶಾಹಿಗಳ ಹಿತಾಸಕ್ತಿಯೊಂದಿಗೆ ಸಂಪೂರ್ಣವಾಗಿ ಅಡವಿಟ್ಟಿರುವ ಮೋದಿ ಸರಕಾರಕ್ಕೆ ಹೋಲಿಸಿದರೆ ಇಂದಿರಾಗಾಂದಿ ಸರಕಾರವು ಬಂಡವಾಳ ಶಾಹಿಗಳೊಂದಿಗೆ ಅಂತರವನ್ನು ಕಾಯ್ದುಕೊಂಡಿತ್ತು ಮತ್ತು ಬಂಡವಾಳಶಾಹಿ–ವಿರೋಧಿ ಮುಂಗಡಪತ್ರ ಮಂಡಿಸಿತ್ತು. ಯಾವುದೇ ಸ್ವಾತಂತ್ರ್ಯೋತ್ತರ ಸರಕಾರವು ಮೋದಿ ಸರಕಾರದಷ್ಟು ಬಂಡವಾಳ ಶಾಹಿಗಳ ಜೊತೆ ಅನೋನ್ಯತೆಯಿಂದ ಇರಲಿಲ್ಲ. ಇದು ಅಡಾನಿಯ ಖಾಸಗಿ ವಿಮಾನಗಳಲ್ಲಿ ಮೋದಿ ಸುತ್ತಾಡುವಷ್ಟರ ಮಟ್ಟಿಗೆ ಗೆಳೆತನ ಹೊಂದಿದೆ (ತಮ್ಮ ಪತ್ನಿ ಕಮಲಾ ನೆಹರೂ ಅವರು ಸ್ವಿಸ್ ದೇಶದ ಆರೋಗ್ಯಧಾಮದಲ್ಲಿ ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾಗ ಹಿಂದುತ್ವವಾದಿಗಳು ಸದಾ ಹೀಗೆಳೆಯುವ ನೆಹರೂ ಅವರಿಗೆ ವಿದೇಶಕ್ಕೆ ತೆರಳಲು ಅವಶ್ಯಕವಾದ ಹಣವಿರಲಿಲ್ಲ. ಜಿ.ಡಿ.ಬಿರ್ಲಾ ಹಣಕಾಸು ನೆರವು ಒದಗಿಸಲು ಮುಂದಾದಾಗ ನೆಹರೂ ಆ ನೆರವನ್ನು ತಿರಸ್ಕರಿಸಿದರು. ಬದಲಿಗೆ ತಾವೇ ಹಣದ ವ್ಯವಸ್ಥೆ ಮಾಡಿಕೊಂಡರು)

ಅಲ್ಪಸಂಖ್ಯಾತ ವಿರೋಧಿ

ಅಲ್ಪಸಂಖ್ಯಾತರ ವಿರುದ್ದ ಅದರಲ್ಲೂ ಮುಸ್ಲಿಮರ ವಿರುದ್ದ ಮೋದಿ ಸರಕಾರದ ದೌರ್ಜನ್ಯ ಐದನೆ ವ್ಯತ್ಯಾಸ. ಇಂದಿರಾಗಾಂಧಿಯವರ ದಬ್ಬಾಳಿಕೆಯು ಯಾವುದೇ ಜಾತಿ, ಧರ್ಮ, ಜನಾಂಗದ ವಿರುದ್ದವಿರಲಿಲ್ಲ. ಇದು ತುಂಬಾ ಸರಳವಾಗಿ ತನ್ನ ರಾಜಕೀಯ ವಿರೋಧಿಗಳ ವಿರುದ್ಧ, ಅದರಲ್ಲೂ ಮೋಸದ ಚಟುವಟಿಕೆ ಮಾಡುತ್ತಿದ್ದ ಅವರ ಮಗ ಸಂಜಯ ಗಾಂಧಿಯವರ ವಿರೋಧಿಗಳ ವಿರುದ್ಧವಾಗಿತ್ತು. ಜೊತೆಗೆ ಇತಿಹಾಸವನ್ನು ತಿರುಚಿ ಸತ್ಯವನ್ನು ಮರೆ ಮಾಚಿ ಮಕ್ಕಳ ತಲೆಯೊಳಗೆ ಸುಳ್ಳುಗಳನ್ನು ತುರುಕಿ ತಮ್ಮದೇ ದೇಶದ ಪ್ರಜೆಗಳ ವಿರುದ್ದ ದ್ವೇಷ ಹುಟ್ಟಿಸುವಂತಹ ಕೆಲಸವನ್ನು ಇಂದಿರಾಗಾಂಧಿ ಎಂದಿಗೂ ಮಾಡಲಿಲ್ಲ.

ವೈಜ್ಞಾನಿಕ ಮನೋದರ್ಮವನ್ನು ತಿರಸ್ಕರಿಸಿ ಅವೈಜ್ಞಾನಿಕವಾದ, ಕಟ್ಟು ಕತೆಗಳ ಸಿದ್ದಾಂತವನ್ನ ವಿಜ್ಞಾನವೆಂದು ಪ್ರತಿಪಾದಿಸುವ ಪ್ರಮಾಣಿಸಿ ನೋಡುವ ಮನೋದರ್ಮವನ್ನ ಗೇಲಿ ಮಾಡುವ ಈಗಿನ ಮೋದಿ ಸರಕಾರದ ಮನಸ್ಥಿತಿ ಆರನೆ ವ್ಯತ್ಯಾಸವಾಗಿದೆ. ಕಳೆದ ಅನೇಕ ದಶಕಗಳಿಂದ ಆರೆಸ್ಸಸ್ ಈ ತರಹದ ಮತಿಹೀನ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಿತ್ತು ಇಂದು ಇದು ಸರಕಾರದ ಇಲಾಖೆಗಳಲ್ಲಿ ವ್ಯಾಪಿಸಿಕೊಂಡಿದೆ. ಭಾರತೀಯ ವಿಜ್ಞಾನ ಕಾಂಗ್ರೆಸ್ ಸಹ ಇದರಿಂದ ಹೊರತಾಗಿಲ್ಲ.

ಮೋದಿ ಸರಕಾರವು ಸಾರ್ವಜನಿಕ ಸಂಸ್ಥೆಗಳನ್ನು ಅದರಲ್ಲೂ ಕೇಂದ್ರೀಯ ವಿಶ್ವವಿದ್ಯಾಲಯಗಳು, ರಾಜ್ಯ ವಿವಿಗಳನ್ನ ನೈತಿಕವಾಗಿ ನಾಶ ಮಾಡಿದ್ದು ಏಳನೆ ವ್ಯತ್ಯಾಸವಾಗಿದೆ. ವಿಮರ್ಶಾತ್ಮಕ ಚಿಂತನೆಗಳನ್ನು ಹತ್ತಿಕ್ಕುವುದರ ಮೂಲಕಬೌದ್ದಿಕವಾಗಿ ಅವುಗಳನ್ನು ಸಾಯಿಸಲಾಗುತ್ತಿದೆ. ಒಂದುವೇಳೆ ವಿಮರ್ಶಾತ್ಮಕ ಚಿಂತನೆ, ಬೋಧನೆಗಳಿಗೆ ಒತ್ತಾಯಿಸಿದರೆ ಆ ಸಾರ್ವಜನಿಕ ಸಂಸ್ಥೆಗಳಿಗೆ ಅನುದಾನವನ್ನು ನಿರಾಕರಿಸಲಾಗುತ್ತದೆ ಮತ್ತು ಜೆಎನ್‌ಯುನಲ್ಲಿ ನಡೆದಂತೆ "ರಾಷ್ಟ್ರವಿರೋಧಿ"ಗಳಿಗೆ ಆಶ್ರಯ ನೀಡಲಾಗುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತದೆ. ಈ ದೇಶದ ಅತ್ಯುತ್ತಮ ವಿಶ್ವವಿದ್ಯಾಲಯಗಳಾದ ಜೆಎನ್‌ಯು, ಹೈದರಬಾದ್ ವಿವಿ, ಪುಣೆಯ ಫಿಲ್ಮ ಇನ್ಸಟ್ಯೂಟ್, ಟಾಟಾ ಇನ್ಸಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್ ಇತ್ಯಾದಿಗಳು ಇಂದು ಉಸಿರಾಡಲು ಕಷ್ಟಪಡುತ್ತಿರುವುದನ್ನು ಕಂಡಾಗ ಇದು ಈ ಕಾಲದ ದುರಂತವನ್ನು ಹೇಳುತ್ತದೆ. ಈ ಮುಂಚೆ ಈ ರೀತಿ ಎಂದಿಗೂ ನಡೆದಿರಲಿಲ್ಲ ಯಾವುದೆ ಸರಕಾರವು ಸ್ವತಂತ್ರ ಚಿಂತನೆಗೆ ಇಂತಹ ಅಸಡ್ಡೆ, ತಿರಸ್ಕಾರ ತೋರಿರಲಿಲ್ಲ

ದಬ್ಬಾಳಿಕೆ

ತುರ್ತುಪರಿಸ್ಥಿಯ ದಿನಗಳಿಗೂ ಮೋದಿಯ ವರ್ಷಗಳಿಗೂ ಇರುವ ಮೇಲಿನ ಈ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ಈ ರೀತಿ ಮಂಡಿಸಬಹುದು.

ತ್ುತ್ುರ್ಪರಿಸ್ಥಿತಿಂುು ಪ್ರಭುತ್ವದಿಂದ ಹೇರಲ್ಪಟ್ಟ ನಿರಂಕುಶ ಅಧಿಕಾರವಾಗಿತ್ತು. ಸಂಪೂರ್ಣ ಕೇಂದ್ರೀಕರಣಗೊಂಡಿತ್ತು. ಅದು ಪ್ರಜಾಪ್ರಭುತ್ವದ ಸಮಾಜ ವ್ಯವಸ್ಥೆ ಮತ್ತು ಬಂಡವಾಳಶಾಹಿ ಅಭಿವೃದ್ದಿಯನಡುವಿನವೈರ್ಯುಧ್ಯಗಳ ಕಾರಣದಿಂದ ಉಂಟಾಗಿತ್ತು. ಆದರೆ ಆಗ ಬಂಡವಾಳಶಾಹಿ ನೇರವಾಗಿ ಆಡಳಿತದ ಪ್ರತಿನಿಧಿ ಆಗಿರಲಿಲ್ಲ. ಮೋದಿಯವರ ಈ ವರ್ಷಗಳು ಸಮಾಜದ ಮೇಲೆ ಪ್ರಭುತ್ವದ ನಿರಂಕುಶ ಅಧಿಕಾರದ ದಬ್ಬಾಳಿಕೆಯ ಜೊತೆಗೆ ಅತಿಯಾಗಿ ಕೇಂದ್ರೀಕರಣಗೊಂಡಿತ್ತು. ದ್ವೇಷ ಸಾಧಿಸುವ ಭಕ್ತರ ಒಂದು ಪಡೆಯನ್ನು ಪ್ರೋತ್ಸಾಹಿಸುತ್ತಿರುವ ಮೋದಿಯವರ ಆಡಳಿತ ಒಬ್ಬರನ್ನು ಮತ್ತೊಬ್ಬರ ವಿರುದ್ದ ಎತ್ತಿಕಟ್ಟುತ್ತಿದೆ. ಮತ್ತು ಬಂಡವಾಳಶಾಹಿಗಳ ಹಿತಾಸಕ್ತಿಯ ಪರವಾಗಿ ಕೆಲಸ ಮಾಡುತ್ತಿದೆ. ನಿರಂಕುಶ ಪ್ರಭುತ್ವ ಮತ್ತು ಫ್ಯಾಸಿಸಂ ನಡುವೆ ಒಂದು ಶಬ್ದದ ವ್ಯತ್ಯಾಸವಿದೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿದಬ್ಬಾಳಿಕೆಯ ಅಂಕಿಅಂಶಗಳು ಹೇಳುವಂತೆ ಜನರನ್ನು ಜೈಲಿಗೆ ತಳ್ಳುವುದು ಅತಿಯಾಗಿತ್ತು. ಆದರೆ ಈಗ ದಬ್ಬಾಳಿಕೆಯ ಪ್ರಮಾಣ ಮತ್ತು ಅದರ ಶಕ್ತಿ ಬಹಳ ದೊಡ್ಡದಾಗಿದೆ ಮತ್ತು ಅದನ್ನು ನಿಯಂತ್ರಿಸುವುದು ಸಾಧ್ಯವಾಗುತ್ತಿಲ್ಲ

ಮೋದಿ ಕಾಲದ ಪ್ರತಿಯೊಂದು ಅಂಶ, ಘಟನೆ ಮತ್ತು ನಿರ್ಧಾರಗಳು ಫ್ಯಾಸಿಸಂನ ಗುಣಲಕ್ಷಣಗಳನ್ನು ಹೊಂದಿವೆ. ಸದಾ ಉನ್ಮಾದದಲ್ಲಿರುವ ದೊಂಬಿ ಗುಂಪು, "ಪ್ರಭುತ್ವದ ಅದಿಕಾರ ಮತ್ತು ಬಂಡವಾಳಶಾಹಿಗಳ ನಡುವಿನ ಒಂದುಗೂಡುವಿಕೆ"(ಬೆನಿಟೋ ಮುಸ್ಸಲೋನಿಯ ಫ್ಯಾಸಿಸಂ .ಕುರಿತಾದ ವ್ಯಾಖ್ಯಾನ), ಅಸಹಾಯಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ದೌರ್ಜನ್ಯ ನಡೆಸುವುದು, ವಿ.ವಿಗಳ ನಾಶ, ಇತ್ಯಾದಿ. ಈ ರೀತಿ ಹೇಳುವುದು 1930ರ ಮರು ಸ್ಥಾಪನೆ ಎಂದರ್ಥವಲ್ಲ, ಈಗ ಫ್ಯಾಸಿಸಂನ ಅಂಶಗಳು ಮೇಲೆ ಬರುತ್ತಿವೆ ಆದರೆ ಇಲ್ಲಿ ಫ್ಯಾಸಿಸಂ ಪ್ರಭುತ್ವವಿಲ್ಲ. ಈಗಿನ ಸಂದರ್ಭ 1930ರ ಸಂದರ್ಭಕ್ಕಿಂತಲೂ ಭಿನ್ನವಾಗಿದೆ ಮತ್ತು ಅದು ಈಗ ಮರುಹುಟ್ಟುಪಡೆಯುವ ಸಾಧ್ಯತೆಯಂತೂ ಇಲ್ಲ.

ಒಂದಂತೂ ನಿಜ, 1930ರಂತೆ ಈ ಕಾಲಘಟ್ಟದಲ್ಲಿಯೂ ಫ್ಯಾಸಿಸಂ ಕುರಿತಾದ ಒಲವು ಒಂದು ಜಾಗತಿಕ ವಿದ್ಯಮಾನವಾಗಿದೆ ಮತ್ತು ಬಂಡವಾಳಶಾಹಿಯ ಬಿಕ್ಕಟ್ಟಿನ ಪರಿಣಾಮವಾಗಿ ಉಂಟಾಗಿದೆ. ಈ ಬಿಕ್ಕಟ್ಟು ತನ್ನೊಂದಿಗೆ ಬಂಡವಾಳಶಾಹಿ–ಆರ್ಥಿಕ ಆಲಿಗಾರ್ಕಿಯ (ಅಲ್ಪಜನಾಧಿಪತ್ಯ) ಯಾಜಮಾನ್ಯದ ಅಪಾಯವನ್ನು ಕೊಂಡುತರುತ್ತದೆ. ಈ ಯಾಜಮಾನ್ಯವನ್ನು ಉಳಿಸಿಕೊಳ್ಳಲು ದೇಶದ ಗಮನವನ್ನು ಬೇರೆಡೆ ಸೆಳೆಯಲಾಗುತ್ತದೆ. ಉದಾಹರಣೆಗೆ ಅಲ್ಪಸಂಖ್ಯಾತರ ವಿರುದ್ದ ಜನಬಿಪ್ರಾಯವನ್ನು ರೂಪಿಸುವುದು. ಇಂತಹ ಸಂದರ್ಭಗಳಲ್ಲಿ ಬಂಡವಾಳಶಾಹಿಗಳ ಬಂಡವಾಳವು ಅಂಚಿನಲ್ಲಿರುವ ಪುಂಡು ಪೋಕರಿಗಳ ಗುಂಪಿಗೆ ಉತ್ತೇಜನ ಕೊಟ್ಟು, ಹಣಕಾಸಿನ ನೆರವನ್ನು ನೀಡಿ ಆವನ್ನು ಕೇಂದ್ರಕ್ಕೆ ತಂದು ನಿಲ್ಲಿಸುತ್ತವೆ (ಇಂದಿನ ಬಹುತೇಕ ಆಧುನಿಕ ಸಮಾಜಗಳಲ್ಲಿ ಅಲ್ಪಸಂಖ್ಯಾತರ ವಿರುದ್ದ ದ್ವೇಷದ ಭಾವನೆಗಳು ಯಥೇಚ್ಛವಾಗಿವೆ). ಪೋಲೆಂಡ್‌ನ ಆರ್ಥಿಕತಜ್ಞ ಮೈಕೆಲ್ ಕಲೇಚ್ಕಿ ಇದನ್ನ 'ಉದಯಿಸುತ್ತಿರುವ ಫ್ಯಾಸಿಸ್ಟರ ಜೊತೆಗೆ ದೊಡ್ಡ ಉದ್ಯಮದ ಪಾಲುದಾರಿಕೆಯ ಪ್ರಾರಂಭ' ಎಂದು ಕರೆಯುತ್ತಾನೆ

2008ರ ನಂತರ ದೀರ್ಘ ಸ್ಥಗಿತತೆಯಿಂದಾಗಿ ನವ–ಉದಾರವಾದಿ ಬಂಡವಾಳಶಾಹಿಯ ಮೇಲೆ ಭರವಸೆ ಹಿಂದಕೆ ಸರಿಯುತ್ತಿರುವುದರಿಂದ, ಈಗ ಭಾರತದಲ್ಲಿಯೂ ಇದೇ ಸಂಭವಿಸುತ್ತಿದೆ. ಅತಿ ದೊಡ್ಡ ಉದ್ಯಮ ಮತ್ತು ಹಿಂದುತ್ವದ ಪುಂಡರ ನಡುವಿನ ಪಾಲುದಾರಿಕೆ ಕುದುರಿಕೊಳ್ಳಲು ಮೋದಿ ಬಹು ಮುಖ್ಯ ಕಾರಣಕರ್ತರಾಗುತ್ತಿದ್ದಾರೆ.

ಆದರೆ 1930ರ ಮತ್ತು ಈಗಿನ ಸಂದರ್ಭದ ನಡುವೆ ಮತ್ತೊಂದು ಮುಖ್ಯ ವ್ಯತ್ಯಾಸವೆಂದರೆ ಆಗ ಬಂಡವಾಳಶಾಹಿ ದೇಶಗಳ ಕಾರ್ಪೋರೇಟ್–ಆರ್ಥಿಕ ಆಲಿಗಾರ್ಕಿಯು (ಅಲ್ಪಜನಾಧಿಪತ್ಯ) ದೇಶವೊಂದರ ನೀತಿಯಾಗಿರುತ್ತಿತ್ತು ಮತ್ತು ಬೇರೆ ದೇಶಗಳ ಅದೇ ಮಾದರಿಯ ವ್ಯವಸ್ಥೆಯ ಆಲಿಗಾರ್ಕಿಯ ಜೊತೆಗೆ ಪ್ರತಿಸ್ಪರ್ಧೆ ನಡೆಸುತ್ತಿತ್ತು. ಫ್ಯಾಸಿಸಂ ಜೊತೆ ಘನಿಷ್ಠ ಸಂಬಂಧ ಇರುವ ಮಿಲಿಟರೀಕರಣ ಉತ್ತುಂಗ ಸ್ಥಿತಿ ತಲುಪಿದಾಗ ಅನಿವಾರ್ಯವಾಗಿ ಅದು ಆಗ ಯುದ್ದಕ್ಕೆ ಕಾರಣವಾಯಿತು

ಇದು ಎರಡು ಬಗೆಯಲ್ಲಿ ಪರಿಣಾಮಗಳನ್ನು ಬೀರಿತ್ತು : ಮೊದಲನೆಯದಾಗಿ ಯುದ್ದದ ತಯಾರಿಗಾಗಿ ಮಿಲಿಟರಿಯ ಖರ್ಚು ವೆಚ್ಚಕ್ಕಾಗಿ ಸರಕಾರಗಳ ಸಾಲದ ಮೂಲಕ ಪಡೆದ ಹಣಕಾಸಿನ ಸಹಾಯದಿಂದ ಬಲು ದೊಡ್ಡ ಮುಗ್ಗಟ್ಟಿನಿಂದ, ಸಾಮೂಹಿಕ ನಿರುದ್ಯೋಗದಿಂದ ಹೊರಬರಲು ಸಾಧ್ಯವಾಯಿತು (1931ರಲ್ಲಿ ಜಪಾನ್ 1933ರಲ್ಲಿ ಜರ್ಮನಿ ಚೇತರಿಸಿಕೊಂಡವು). ಮುಗ್ಗಟ್ಟಿನಿಂದ ಚೇತರಿಕೆ ಮತ್ತು ಯುದ್ದದಿಂದ ಉಂಟಾದ ಭೀಕರ ಪರಿಣಾಮಗಳು ಈ ಎರಡರ ನಡುವಿನ ಅಲ್ಪಕಾಲದ ವಿರಾಮ ಕಾಲಘಟ್ಟದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದರ ಮೂಲಕ ಫ್ಯಾಸಿಸ್ಟ್ ಸರಕಾರಗಳು ಜನಪ್ರಿಯತೆಯನ್ನು ಪಡೆದುಕೊಂಡವು. ಎರಡನೆ ಪರಿಣಾಮವೆಂದರೆ ಈ ಪ್ರಕ್ರಿಯೆಯಲ್ಲಿ ಯುದ್ದದಲ್ಲಿ ಫ್ಯಾಸಿಸಂ ಸಹ ಬೆಂದು ಭಸ್ಮವಾಯಿತು. ಈ ನಿರ್ನಾಮಕ್ಕೆ ತೆರಬೇಕಾದ ಬೆಲೆ ಘೋರವಾಗಿದ್ದರೂ ಸಹ ಅದು ಫ್ಯಾಸಿಸಂನ ನಾಶವಂತೂ ಆಯಿತು.

ಇಂದಿನ ವೈದೃಶ್ಯವೆಂದರೆ ಪ್ರತಿಸ್ಪರ್ದಿಗಳಾಗಿರುವ ಕಾರ್ಪೋರೇಟ್–ಹಣಕಾಸಿನ ಆಲಿಗಾರ್ಕಿಗಳು ಪರಸ್ಪರ ಸ್ಪರ್ಧೆಯಲ್ಲಿ ತೊಡಗಿಕೊಂಡಿರುವುದು ಕಂಡುಬರುವುದಿಲ್ಲ. ಇವೆಲ್ಲವೂ ಜಾಗತಿಕ ಬಂಡವಾಳದ ಚೌಕಟ್ಟಿನಲ್ಲಿ ಏಕೀಕೃತಗೊಂಡಿವೆ ಮತ್ತು ಮತ್ತೊಂದು ಯುದ್ದದ ಮೂಲಕ ಜಗತ್ತು ಪ್ರತ್ಯೇಕ "ಆರ್ಥಿಕ ಪ್ರದೇಶ"ಗಳಾಗುವುದನ್ನು ಬಯಸುವುದಿಲ್ಲ. ಬದಲಿಗೆ ಬಂಡವಾಳಕ್ಕೆ, ಹಣಕಾಸಿನ ಹರಿವಿಗೆ ಮಾರುಕಟ್ಟೆ ಜಗತ್ತು ಮುಕ್ತವಾಗಿರಲು ಬಯಸುತ್ತವೆ. ಆದರೆ ಇದರರ್ಥ ಮತ್ತೊಂದು ಯುದ್ದದ ಸಾದ್ಯತೆ ಇಲ್ಲವೆಂದಲ್ಲ. ಪ್ರದಾನ ಶಕ್ತಿಗಳು (ಬಲಿಷ್ಟ ರಾಷ್ಟ್ರಗಳು) ಜಾಗತಿಕ ಹಣಕಾಸಿನ ಯಾಜಮಾನ್ಯದ ಹಂಗಿಲ್ಲದ, ತಮಗೆ ಸವಾಲು ಒಡ್ಡುತ್ತಿರುವ ದೇಶಗಳ ವಿರುದ್ದ ಯುದ್ದವನ್ನು ಕೇಂದ್ರೀಕರಿಸುತ್ತವೆ.

ಬಂಡವಾಳ ಹಣಕಾಸು ವ್ಯವಸ್ಥೆ ವಿತ್ತೀಯ ಕೊರತೆಯನ್ನು ಇಷ್ಟಪಡುವುದಿಲ್ಲ. ಆ ಕಾರಣಕ್ಕಾಗಿ ಸರಕಾರದ ವೆಚ್ಚವು ಪ್ರಧಾನವಾಗಿರುವ (ಸೈನ್ಯದ ವೆಚ್ಚವಾದರೂ ಸಹ) ದೇಶವೊಂದರ ವಿರುದ್ದ ಜಾಗತಿಕ ಬಂಡವಾಳ ಹಣಕಾಸು ವ್ಯವಸ್ಥೆಯು ವಿತ್ತೀಯ ಕೊರತೆಯಿದ್ದರೆ ಹಣಕಾಸು ನೆರವು ಕೊಡಲು ಸಾದ್ಯವಿಲ್ಲವೆಂದು ಫರ್ಮಾನು ಹೊರಡಿಸುತ್ತದೆ (ಇಲ್ಲವೆಂದರೆ ಆ ದೇಶವನ್ನೇ ತೊರೆದು ಹೊರಬರುತ್ತದೆ ಮತ್ತು ಆ ಮೂಲಕ ಹಣಕಾಸಿನ ಬಿಕ್ಕಟ್ಟಿಗೆ ಕಾರಣವಾಗುತ್ತದೆ). ಬಂಡವಾಳ ಶಾಹಿಗಳ ಮೇಲೆ ತೆರಿಗೆ ಹೇರುವುದರ ಮೂಲಕ ಆರ್ಥಿಕ ಸ್ಥಿತಿಯನ್ನ ಸಮತೂಗಿಸುವುದನ್ನೂ ಬಂಡವಾಳ ಹಣಕಾಸು ವ್ಯವಸ್ಥೆ ಸಹಜವಾಗಿಯೆ ವಿರೋಧಿಸುತ್ತದೆ. ಆದರೆ ಸರಕಾರದ ವೆಚ್ಚಕ್ಕೆ ಹಣ ಒದಗಿಸುವ ದಾರಿ ಇದೊಂದೇ ಆಗಿರುತ್ತದೆ ಮತ್ತು ಇದು ಉದ್ಯೋಗ ಅವಕಾಶಗಳನ್ನು ಹೆಚ್ಚಿಸುತ್ತದೆ. ನವ ಉದಾರೀಕರಣದ ಬಂಡವಾಳಶಾಹಿಯ ಅಡಿಯಲ್ಲಿನಿರುದ್ಯೋಗದ ಸ್ಥಿತಿಯಲ್ಲಿ ಯಾವುದೆ ಬಗೆಯ ವ್ಯತ್ಯಾಸವನ್ನು ಉಂಟು ಮಾಡಲುಸಮಕಾಲೀನ ಫ್ಯಾಸಿಸಂಗೆ ಸಾಧ್ಯವಾಗುವುದಿಲ್ಲ ಮತ್ತು ಕಾರ್ಪೋರೇಟ್ ಹಣಕಾಸು ಸಹಾಯ ಪಡೆದುಕೊಳ್ಳುವುದರಿಂದ ಈ ಫ್ಯಾಸಿಸಂಗೆ ನವ ಉದಾರೀಕರಣದ ಬಂಡವಾಳಶಾಹಿಗೆ ಸವಾಲು ಒಡ್ಡಲು ಸಹ ಸಾಧ್ಯವಿಲ್ಲ.

ಇದರರ್ಥವೆಂದರೆ ದುಡಿಯುವ ವರ್ಗದ ಜನರ ಬದುಕನ್ನು ಉತ್ತಮಗೊಳಿಸುವುದರ ಮೂಲಕ ಈ ಫ್ಯಾಸಿಸಂ ರಾಜಕೀಯ ನ್ಯಾಯಸಮ್ಮತಿಯನ್ನು ಗಳಿಸಲು ಸಾದ್ಯವಿಲ್ಲ ಮತ್ತು ಅದೇ ಸಂದರ್ಭದಲ್ಲಿ 1930ರಲ್ಲಿ ಆದಂತೆ ಯುದ್ದದ ಮೂಲಕವೂ ಈ ಫ್ಯಾಸಿಸಂ ನಾಶವಾಗುವುದಿಲ್ಲ. ಸಂಸದೀಯ ಚುನಾವಣೆಗಳನ್ನು ಪೂರ್ಣವಾಗಿ ನಿಲ್ಲಿಸುವುದು ಅದಕ್ಕೆ ಸಾದ್ಯವಾಗುವುದಿಲ್ಲ ಏಕೆಂದರೆ ಈ ಚುನಾವಣೆಗಳು ಜಾಗತಿಕ ಹಣಕಾಸಿನ ಯಜಮಾನ್ಯಕ್ಕೆ ನ್ಯಾಯಸಮ್ಮತಿಯನ್ನು ತಂದುಕೊಡುತ್ತವೆ. (ನವ ಉದಾರೀಕರಣದ ನೀತಿಗಳಿಂದ ಹೊರಬರಲು ಪ್ರಯತ್ನಿಸಿದ ಲ್ಯಾಟೀನ್ ಅಮೇರಿಕಾ ದೇಶಗಳ ಪ್ರಗತಿಪರ ಆಡಳಿತದ ವಿರುದ್ದ 'ಪ್ರಜಾಪಭುತ್ವ ಉಳಿಸಿ' ಹೆಸರಿನಲ್ಲಿ 'ಸಂಸದೀಯ ಕ್ಷಿಪ್ರ ಕಾರ್ಯಾಚರಣೆ'ಗಳು ಸಂಭವಿಸಿದವು. ಹಿಂದಿನ ಕಾಲದಲ್ಲಿ ಸಿಐಎ ಏಜೆನ್ಸಿ ಪ್ರಾಯೋಜಿತದಿಂದ ನಡೆದ ಕ್ಷಿಪ್ರ ಪಿತೂರಿಯಲ್ಲಿ ಇರಾನ್‌ನಲ್ಲಿ ಮೋಸ್ಸೇದೇಗ ಅವರನ್ನು ಅಥವಾ ಗ್ವಾಟೆಮಾಲಾದ ಅರ್ಬೆಂಜ್ ಅಥವಾ ಚಿಲಿಯ ಅಲೆಂಡೆ ಅವರನ್ನು ಪದಚ್ಯುತಿಗೊಳಿಸಿದ ಮಾದರಿಗೆ ಇಂದಿನದನ್ನು ಹೋಲಿಸಲಾಗುವುದಿಲ್ಲ)

ಈ ಎಲ್ಲಾ ಹಿನ್ನೆಲೆಯಲ್ಲಿ ಈ ಕೆಳಗಿನ ಸಂಭವನೀಯ ಸಾರಾಂಶದ ಸಾಧ್ಯತೆ ಇದೆ. ಚುನಾವಣ ಪ್ರಕ್ರಿಯೆಯ ಅನವಶ್ಯಕ ಮಧ್ಯಪ್ರವೇಶ ಇದ್ದಾಗ್ಯೂ ಸಹ; ದಿನನಿತ್ಯದ ಬದುಕಿನ ಅಗತ್ಯಗಳ ಕುರಿತ ಕಾಳಜಿ, ಆಸಕ್ತಿ ಕಾಣೆಯಾಗಿ ಹಠಾತ್ ಭಯೋತ್ಪಾದನೆಯ ಕಾರಣಕ್ಕೆ ಹುಟ್ಟಿಕೊಂಡ ಹುಸಿಯಾದ, ಟೊಳ್ಳುತನದ ದೇಶಭಕ್ತಿಯ ಕುರಿತು ಚರ್ಚೆ ನಡೆಯುತ್ತಿದ್ದರೂ ಸಹ (ಇಲ್ಲಿ ಭಯೋತ್ಪಾದನೆ ಮತ್ತು ಪ್ರಭುತ್ವದಲ್ಲಿರುವ ಫ್ಯಾಸಿಸಂ ಮೂಲಾಂಶಗಳ ನಡುವೆ ಒಂದು ಡಯಲೆಕ್ಟಿಕ್ ಇದೆ. ಇವೆರೆಡೂ ಪರಸ್ಪರ ಬಲಗೊಳ್ಳುವಂತಹ ಕಾರ್ಯಯೋಜನೆ ರೂಪಿಸುತಿರುತ್ತವೆ) ಮೋದಿ ಸರಕಾರವು ಮುಂಬರುವ ಲೋಕಸಬೆ ಚುನಾವಣೆಯಲ್ಲಿ ಸೋಲುತ್ತದೆ. ಆದರೆ ನಂತರ ಅದಿಕಾರಕ್ಕೆ ಬರುವ ಸರಕಾರವು ದುಡಿಯುವ ವರ್ಗಕ್ಕೆ ಉತ್ತೇಜನ ನೀಡಲು ನವಉದಾರೀಕರಣದ ಬಲೆಯಿಂದ ಕಳಚಿಕೊಳ್ಳುವುದಿಲ್ಲ ಮತ್ತು ಕೆಲ ಸಮಯದ ನಂತರ ತನ್ನ ಜನಪ್ರಿಯ ಬೆಂಬಲವನ್ನು ಕಳೆದುಕೊಳ್ಳುತ್ತದೆ. ಇದು ಮತ್ತೆ ಮದ್ಯಂತರ ಚುನಾವಣೆಯಲ್ಲಿ ಫ್ಯಾಸಿಸಂ ಆಡಳಿತ ಮರಳಿ ಅಧಿಕಾರಕ್ಕೆ ಬರಲು ಸಹಾಯ ಮಾಡುತ್ತದೆ (*ಇದು ಚುನಾವಣೆಯ ಫಲಿತಾಂಶಕ್ಕೆ ಮೊದಲು ಬರೆದ ಲೇಖನ: ಸಂಪಾದಕ)

ಸಮಾಜದ ಫ್ಯಾಸಿಸಂ

ಸರಕಾರ ರಚನೆಯ ಕುರಿತು ತೂಗುಯ್ಯಾಲೆ ನಡೆಯುತ್ತಿದೆ, ಫ್ಯಾಸಿಸಂ ಶಕ್ತಿಗಳು ನಾಶವಾಗುತ್ತಿಲ್ಲ ಬದಲಿಗೆ ಈ ಹೊಯ್ದಾಡುವಿಕೆಗಳ ಮೂಲಕ ಹಂತ ಹಂತವಾಗಿ ಸಮಾಜ ಮತ್ತು ರಾಜ್ಯವ್ಯವಸ್ಥೆಯನ್ನೆ ಫ್ಯಾಸಿಸಂಕರಣಗೊಳಿಸಲಾಗುತ್ತಿದೆ. ಉದಾಹರಣೆಗೆ ಮದ್ಯಪ್ರದೇಶದಲ್ಲಿ ಬಿಜೆಪಿ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಹಿಂದುತ್ವಕ್ಕೆ ಮೊರೆ ಹೋಗುವುದರ ಮೂಲಕ ಸಂಘ ಪರಿವಾರವನ್ನು ಅನುಕರಿಸುತ್ತಿದೆ. ಇದು ಸರಕಾರ ರಚನೆಯಲ್ಲಿನ ಅನಿಶ್ಚತೆಯ ಮೂಲಕ ಉಂಟಾಗುವ ಸಮಾಜದ ಹಂತಹಂತವಾದ ಫ್ಯಾಸಿಸಂಕರಣಕ್ಕೆ ಪ್ರತ್ಯಕ್ಷ ಸಾಕ್ಷಿ.

ಮುಂದಿನ ದಿನಗಳಲ್ಲಿ ಈ ಫ್ಯಾಸಿಸ್ಟ್ ಶಕ್ತಿಗಳ ಒತ್ತಡದಿಂದಾಗಿ (ಅವು ಅದಿಕಾರದಲ್ಲಿ ಇರಲಿ ಅಥವಾ ಬಿಡಲಿ) ಸಮಾಜವು ಫ್ಯಾಸಿಸಂಕರಣಗೊಳ್ಳುತ್ತಲೆ ಇರುತ್ತದೆ. ಈ ಮಾದರಿಯ ಫ್ಯಾಸಿಸಂಕರಣವು ಫ್ಯಾಸಿಸ್ಟ್ ಪ್ರಭುತ್ವವನ್ನು ಹೇರುವುದರ ಮೂಲಕ ಸಮಾಜವನ್ನು ಫ್ಯಾಸಿಸಂಕರಣಗೊಳಿಸುತ್ತಿದ್ದ 1930ರ ಮಾದರಿಗೆ ಸಂಪೂರ್ಣ ವಿರುದ್ದವಾಗಿದೆ. ಫ್ಯಾಸಿಸ್ಟ್ ಪ್ರಭುತ್ವವಿಲ್ಲದೆ ಸಮಾಜವನ್ನು ಫ್ಯಾಸಿಸಂಕರಣಗೊಳಿಸುವ,ಯಾವುದೋ ಒಂದು ಸಂದರ್ಭದಲ್ಲಿ ಸ್ವತಃ ತಾನೆ ನಾಶವಾಗುವ ತನಕವೂ ಇದು "ಶಾಶ್ವತ ಫ್ಯಾಸಿಸಂ"ಗೆ ಒಂದು ನಿದರ್ಶನದಂತಿದೆ

ನವಉದಾರೀಕರಣದ ಬಿಕ್ಕಟ್ಟು ಈ ತರಹದ ಸಂದರ್ಭಗಳಲ್ಲೊಂದು. ಇಂಡಿಯಾದಲ್ಲಿ ಈ ಫ್ಯಾಸಿಸಂಕರಣವನ್ನು ಪರಿಣಾಮಕಾರಿಯಾಗಿ ವಿರೋಧಿಸಬೇಕೆಂದರೆ ತನ್ನ ಕೊನೆ ತುದಿಯನ್ನು ತಲುಪಿರುವ ಈಗಿನ ನವಉದಾರೀಕರಣದ ಬಂಡವಾಳಶಾಹಿ ಆಳ್ವಿಕೆಯನ್ನು ಮೀರಿ ಚಿಂತಿಸಬೇಕಾಗುತ್ತದೆ. ಈ ನವಉದಾರೀಕರಣವು ಜಗತ್ತನ್ನು ಬಿಕ್ಕಟ್ಟಿನ ಬಲೆಯೊಳಗೆ ಸಿಲುಕಿಸಿದೆ. ಎಷ್ಟರಮಟ್ಟಿಗೆಂದರೆ ಡೊನಾಲ್ಡ್ ಟ್ರಂಪ್‌ಗೆ ಅಮೇರಿಕಾದಲ್ಲಿ ವ್ಯಾಪಾರ ರಕ್ಷಣೆ ಕಾನೂನು ಜಾರಿಗೊಳಿಸದೆ ಬೇರೆ ವಿಧಿಯಿಲ್ಲ ಎನ್ನುವಂತಹ ಸ್ಥಿತಿ ಇದೆ (ಇದು ನವ–ಉದಾರೀಕರಣದ ಕೊಂಚ ಮಟ್ಟಿಗಿನ ನಿರಾಕರಣೆಯಂತಿದೆ). ಸದ್ಯದ ಪರಿಸ್ಥಿತಿಯಲ್ಲಿ ದುಡಿಯುವ ವರ್ಗದ ಜನರ ಬದುಕನ್ನ ಹಸನುಗೊಳಿಸುವ ಸಲುವಾಗಿ ಕನಿಷ್ಟ ಕಾರ್ಯಕ್ರಮಗಳನ್ನು ರೂಪಿಸುವುದರ ಕಡೆಗೆ ಇಡುವ ಹೆಜ್ಜೆಗಳು ಈ ನವಉದಾರಿಕರಣವನ್ನು ಮೀರುವಲ್ಲಿ ಸಹಾಯವಾಗುತ್ತವೆ

ಹೀಗೆಲ್ಲ ಹೇಳುವುದರ ಅರ್ಥ ಈ ಚುನಾವಣೆಯಲ್ಲಿ ಹಿಂದುತ್ವ ಶಕ್ತಿಗಳನ್ನ ಸೋಲಿಸುವುದನ್ನು ಮತ್ತು ಮತ್ತು ಇದನ್ನು ಸಾಧಿಸಲು ಸೆಕ್ಯುಲರ್ ಪಕ್ಷಗಳ ನಡುವೆ ಐಕ್ಯತೆಯ ಅಗತ್ಯವನ್ನು ಗೌಣಗೊಳಿಸಿದಂತಲ್ಲ. ಆದರೆ ಇದು ಮೊದಲನೆ ಹೆಜ್ಜೆಯಷ್ಟೇ. ಸಮಾಜ ಮತ್ತು ರಾಜ್ಯವ್ಯವಸ್ಥೆ ಫ್ಯಾಸಿಸಂಕರಣಗೊಳಿಸುವುದನ್ನು ತಡೆಯಲು ಬೇರೆಯದೇ ಚಿಂತನೆಗಳ ಅವಶ್ಯಕತೆ ಇದೆ. ಈ ನವಉದಾರೀಕರಣದ ಸುಲಿಗೆಯಿಂದ ದುಡಿಯುವ ವರ್ಗದ ಜನರನ್ನುಕಾಪಾಡಲು ಕಾರ್ಯಯೋಜನೆಗಳ ಅವಶ್ಯಕತೆ ಇದೆ. ಈ ತರಹದ ಪರಿಹಾರವನ್ನು ಕಂಡುಕೊಂಡಾಗ ಮಾತ್ರ ಮೋದಿ ವರ್ಷಗಳ ಫ್ಯಾಸಿಸ್ಟ್ ಸಂಪ್ರದಾಯವನ್ನು ಮೀರಲು ಸಾದ್ಯವಾಗುತ್ತದೆ. ■

ಕುಂದಾಪುರದಲ್ಲಿ ಸಿಐಟಿಯು ಶತಮಾನೋತ್ಸವ.... ಪುಟ 5 ರಿಂದ

ಹುನ್ನಾರ ನಡೆಸಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಈ ನೀತಿ ವಿರುದ್ಧ ಕಟ್ಟಡ ಕಾರ್ಮಿಕರು ಐಕ್ಯತೆಯಿಂದ ಹೋರಾಟ ನಡೆಸಬೇಕೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಕೆಲವು ಮಾಲಕರು ಕಟ್ಟಡ ಕಾರ್ಮಿಕರನ್ನು ಸರಕು ಸಾಗಾಟ ವಾಹನಗಳಲ್ಲಿ ಸಾಗಿಸುತ್ತಿರುವುದನ್ನು ವಿರೋಧಿಸಿ ನಿರ್ಣಯ ತೆಗೆದುಕೊಳ್ಳಲಾಯಿತು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಯು.ದಾಸ್ ಭಂಡಾರಿ ವಹಿಸಿದ್ದರು.

ಸಂಘದ ಕೋಶಾಧಿಕಾರಿ ಜಗದೀಶ್ ಆಚಾರ್ ಹೆಮ್ಮಾಡಿ, ಮುಖಂಡರಾದ ಚಿಕ್ಕ ಮೊಗವೀರ, ಅರುಣ್ ಕುಮಾರ್ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂತೋಷ ಹೆಮ್ಮಾಡಿ ಸ್ವಾಗತಿಸಿದರು. ರಮೇಶ್ ಗುಲ್ವಾಡಿ ವಂದಿಸಿದರು.



ಸಿಐಟಿಯು ಉಡುಪಿ ತಾಲೂಕು ಸಮಿತಿ ಇಂದು ಉಡುಪಿಯಲ್ಲಿ ಸಿಐಟಿಯು ಸ್ಥಾಪನ ದಿನಾಚರಣೆ 50 ನೇ ವರ್ಷಾಚರಣೆ ಹಾಗೂ ಶತಮಾನೋತ್ಸವ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಸಮರ್ಪಕ ಬರ ನಿರ್ವಹಣೆಗಾಗಿ ಆಗ್ರಹ..... ಪುಟ 3 ರಿಂದ

ಗಳ ವೇತನ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ, ಉದಯೋಗ ಖಾತ್ರಿ ನಗರಗಳಿಗೆ ಅನ್ವಯಿಸಬೇಕು. ಸರ್ಕಾರ ಭೂಮಿ, ಅರಣ್ಯ ಭೂಮಿ ಸಾಗುವಳಿ ಮಾಡುವವರಿಗೆ 57 ನಂಬರ್ ಫಾರ್ಮ ತುಂಬಿದ್ದಾರೆ. ಇನ್ನು ಕೆಲವರದು ಉಳಿದಿದ್ದು, ಅವುಗಳನ್ನು ತೆಗೆದುಕೊಳ್ಳಬೇಕು. ಅಕ್ರಮ– ಸಕ್ರಮ ಕಮಿಟಿ ರಚಿಸಬೇಕು. ಏಪ್ರಿಲ್ 16 ರಂದು ಬಂದ್ ಮಾಡಲಾಗಿದೆ. ಫಾರ್ಮ್ ತುಂಬುವುದನ್ನು ಪುನರ್ ಆರಂಭಿಸಬೇಕು. ಸರ್ಕಾರದ ಆದೇಶದ ಪ್ರಕಾರ ಅಕ್ರಮ ಮನೆಗಳನ್ನು ಸಕ್ರಮಗೊಳಿಸಬೇಕು. ಹಕ್ಕು ಪತ್ರ ನೀಡಬೇಕು. ಆಶ್ರಯ ಅಂಬೇಡ್ಕರ್, ಇಂದ್ರಾ ಆವಾಜ್ ಮನಗಳ ಹಕ್ಕು ಪತ್ರ ನೀಡಬೇಕು. ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗದೇ ತೊಂದರೆಯಾಗಿದ್ದಾರೆ. ತಕ್ಷಣ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಹೊಸ ಬೋರ್‌ವೆಲ್ ಕೊರೆಯಬೇಕು. ಹೋಬಳಿ ಮಟ್ಟದಲ್ಲಿ ಗೋಶಾಲೆ ತೆರೆಯಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಭೀಮಶಿ ಕೋಟ್ಯಾಳ, ರಾಮಣ್ಣ ಶಿರೆಗೋಳ, ಖಾಜಾಸಾಬ ಕೋಲಾರ, ಸಿದ್ದಪ್ಪ ಹಳಗುಂಡಗಿ, ಪರಶುರಾಮ ಮಂಟೂರ, ಬಸವರಾಜ ಗುಡಿಮನಿ, ಸಿದ್ರಾಮ ಬಂಗಾರಿ, ಮೈಬೂಬ ಶಿವಣಗಿ, ಸೋಮಶೇಖರ, ಸುರೇಖಾ ರಜಪೂತ, ಭಾರತಿ ವಾಲಿ, ಸುನಂದಾ ನಾಯಕ, ಅಶ್ವಿನಿ ತಳವಾರ, ದಾನಮ್ಮ ಗುಗ್ಗರಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಅಣ್ಣಾರಾಯ ಈಳಗೇರ





'ಸಬ್ ಕಾ ವಿಶ್ವಾಸ್'–2019ರ ನಂತರ ಮಾತು ಮತ್ತು ಕೃತಿಯ ಮೊದಲ ನೋಟ

ಐದು ವರ್ಷಗಳ ಹಿಂದೆ ಭಾರೀ ಬಹುಮತದಿಂದ ಗೆದ್ದಿದ್ದ ಬಿಜೆಪಿ–ಎನ್‌ಡಿಎ ಸರಕಾರದ ನೇತೃತ್ವ ವಹಿಸಲಿದ್ದ ನರೇಂದ್ರ ಮೋದಿಯವರು ಸಂಸದ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ತಮ್ಮ ಮೊದಲ ಭಾಷಣ ಮಾಡುವ ಮೊದಲು ಸಂಸದ್ ಭವನವನ್ನು ಅದರ ಮೆಟ್ಟಲಲ್ಲಿ ತಲೆಯಿಟ್ಟು ನಮಿಸಿ ಪ್ರವೇಶಿಸಿದ್ದರು. ಈ ಬಾರಿ ಇನ್ನಷ್ಟು ಬಹುಮತದಿಂದ ಮತ್ತೆ ಪ್ರಧಾನ ಮಂತ್ರಿಯಾಗುವ ಮೊದಲು ಅದೇ ಸೆಂಟ್ರಲ್ ಹಾಲ್‌ನಲ್ಲಿ ನವ–ಚುನಾಯಿತ ಎನ್‌ಡಿಎ ಸಂಸದರನ್ನು ಉದ್ದೇಶಿಸಿ ಮಾತಾಡುವ ಮೊದಲು ಭಾರತ ಗಣರಾಜ್ಯದ ಸಂವಿಧಾನಕ್ಕೆ ತಲೆಬಾಗಿ ನಮಿಸಿದರು ಎಂದು ವರದಿಯಾಗಿದೆ.

ನಂತರ ತಮ್ಮ ಭಾಷಣದಲ್ಲಿ ಅವರು ಎನ್‌ಡಿಎ ಸಂಸದರಿಗೆ ತಮಗೆ ಮತನೀಡಿದವರ ವಿಶ್ವಾಸವನ್ನು ಉಳಿಸಿಕೊಳ್ಳಬೇಕು ಮಾತ್ರವಲ್ಲ, ಮತ ನೀಡದವರ ವಿಶ್ವಾಸವನ್ನು ಕೂಡ ಗಳಿಸಿಕೊಳ್ಳಬೇಕು ಎಂದು ಬುದ್ಧಿವಾದ ಹೇಳಿದರು. ವಿಶೇಷವಾಗಿ ಅಲ್ಪಸಂಖ್ಯಾತರ ವಿಶ್ವಾಸವನ್ನು ಗಳಿಸಬೇಕು, ಏಕೆಂದರೆ ಇದುವರೆಗೆ ಪ್ರತಿಪಕ್ಷದವರು ತಮ್ಮ ಹುಸಿ ಜಾತ್ಯತೀತತೆಯ ಹೆಸರಲ್ಲಿ ಅವರನ್ನು ವೋಟ್ ಬ್ಯಾಂಕ್ ಮಾಡಿಕೊಂಡು ಮೋಸ ಮಾಡಿದ್ದಾರೆ ಎಂದು ಹೇಳುತ್ತ ಅವರು ತಮ್ಮ ಕಳೆದ ಬಾರಿಯ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಘೋಷಣೆ'ಗೆ 'ಸಬ್ ಕಾ ವಿಶ್ವಾಸ್' ಎಂಬುದನ್ನು ಸೇರಿಸಿದ್ದಾರೆ.

ಇದಕ್ಕೆ ಸಂಸದ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಮಾತ್ರವಲ್ಲ, ಹೊರಗೂ ಭಾರೀ ಕರತಾಡನವಾಗಿದೆ. ಕೆಲವು ವಿಶ್ಲೇಷಕರು ಇದೀಗ ಒಬ್ಬ ಮುತ್ಸದ್ದಿಯ ಮಾತು ಎಂದು ಅಭಿಮಾನ ವ್ಯಕ್ತಪಡಿಸಿದರೆ, ಇನ್ನು ಕೆಲವರು ಮೋದಿಯವರು ತಮ್ಮ ಮೊದಲ ಐದು ವರ್ಷಗಳಿಂದ ನಿಜವಾಗಿಯೂ ಪಾಠ ಕಲಿತಿದ್ದಾರೆ ಎಂದರು, ಆದರೆ ಮತ್ತೆ ಕೆಲವರಿಗೆ ಗೊಂದಲ, ನಿಜವಾಗಿಯೂ ಪಾಠ ಕಲಿತಿದ್ದಾರೆಯೇ ಎಂದು. ಹಲವಾರು ಜುಮ್ಲಾಗಳ ಐದು ವರ್ಷಗಳ ನಂತರ ಇಂತಹ ಜಿಜ್ಞಾಸೆ ಸಹಜ ಎನ್ನುತ್ತಾರೆ ಮತ್ತೆ ಕೆಲವರು.

ಪ್ರಧಾನಿಗಳ ಈ ಹೊಸ ಘೋಷಣೆಯ ಬೆನ್ನಲ್ಲೇ, ಮೇ 23ರಂದು ಚುನಾವಣಾ ಫಲಿತಾಂಶಗಳು ಪ್ರಕಟವಾದ ಒಂದೇ ವಾರದೊಳಗೆ ಕನಿಷ್ಟ ಆರು ಇಂತಹ 'ವಿಶ್ವಾಸ ಗಳಿಸುವ' ಘಟನೆಗಳು ಮತ್ತು ಎರಡು ಬಿಜೆಪಿ ಸಂಸದರ ಹೇಳಿಕೆಗಳು ಈ ಗೊಂದಲ/ಜಿಜ್ಞಾಸೆಯನ್ನು ಮತ್ತಷ್ಟು ಹೆಚ್ಚಿಸಿವೆ.

- ಮೇ 23, ಗುಜರಾತಿನ ವಡೋದರಾ ಜಿಲ್ಲೆಯ ಮಹುವಾಡ್ ಹಳ್ಳಿಯಲ್ಲಿ ಮೋದಿಯವರ ಭಾಷಣದ ರಾತ್ರಿಯಂದೇ ಸುಮಾರು 200 ಮೇಲ್ಜಾತಿ ಜನಗಳು ಪ್ರವೀಣ್ ಮಕ್ವಾನ ಮತ್ತು ತರುಲತ ಮಕ್ವಾನ ಎಂಬ ದಲಿತ ದಂಪತಿಗಳನ್ನು ಥಳಿಸಿದರು. ಕಾರಣ ಎರಡು ದಿನಗಳ ಹಿಂದೆ ಪ್ರವೀಣ್ ಮಕ್ವಾನ ಊರ ದೇವಸ್ಥಾನವನ್ನು ಅಧಿಕಾರಿಗಳು ದಲಿತರಿಗೆ ಮದುವೆ ಕಾರ್ಯಕ್ರಮಗಳನ್ನು ನಡೆಸಲು ಬಿಡುತ್ತಿಲ್ಲ ಎಂದು ದೂರಿದ್ದರು. ಪೋಲೀಸರು 11 ಮಂದಿಯನ್ನು ಬಂಧಿಸಿದ್ದಾರೆ.

- ಮೇ 24, ಗೋರಕ್ಷಕರೆಂದು ಹೇಳಿಕೊಳ್ಳುವವರ ಐದು ಜನಗಳ ಒಂದು ಗುಂಪು ಮಧ್ಯಪ್ರದೇಶದ ಸಿಯೊನಿ ಜಿಲ್ಲೆಯಲ್ಲಿ ಮೂವರು ಮುಸ್ಲಿಮರು ಗೋಮಾಂಸ ಒಯ್ಯುತ್ತಿದ್ದರು ಎಂಬ ಗುಮಾನಿಯ ಮೇಲೆ ದಾಳಿ ಮಾಡಿತು. ಇಬ್ಬರು ಗಂಡಸರನ್ನು ಮರಕ್ಕೆ ಕಟ್ಟಿ ಥಳಿಸಿತು. ಆಮೇಲೆ ಅವರನ್ನು ಬಿಡಿಸಿ ಅವರ ಜತೆಗಿದ್ದ ಮಹಿಳೆಗೆ 'ಜೈಶ್ರೀರಾಮ್' ಎನ್ನುತ್ತ ಅವರೇ ಚಪ್ಪಲಿನಿಂದ ಹೊಡೆಯಬೇಕೆಂದು ಆದೇಶಿಸುತ್ತಿದ್ದ ವೀಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆಯಂತೆ.

- ಮೇ 25 ರ ಸಂಜೆ, ಹರ್ಯಾಣದ ಗುರುಗ್ರಾಮದಲ್ಲಿ ಮುಸ್ಲಿಮರು ಧರಿಸುವ ಟೋಪಿಯನ್ನು ಧರಿಸಿದ್ದ ಒಬ್ಬ 25 ವರ್ಷದ ಹುಡುಗನನ್ನು ಒಂದು ಗುಂಪು ಅಟ್ಟಿಸಿಕೊಂಡು ಬಂತು. ಟೋಪಿ ತೆಗೆಯಲು ಹೇಳಿತು. ಆತ, ಮಹಮ್ಮದ್ ಬರ್ಕತ್, ತಾನು ಮಸೀದಿಯಿಂದ ನಮಾಜು ಮುಗಿಸಿ ಬರುತ್ತಿದ್ದೇನೆ ಎಂದ. ಟೋಪಿ ತೆಗೆದು 'ಭಾರತ್ ಮಾತಕೀ ಜೈ' ಎನ್ನಲು ಆತನನ್ನು ತಾಕೀತು ಮಾಡಲಾಯಿತು, ಆತ ಹೇಳಿದ, 'ಜೈಶ್ರೀರಾಮ್' ಎನ್ನು ಎಂದಾಗ ಮಾತ್ರ ಆತ ನಿರಾಕರಿಸಿದ, ಅತನನ್ನು ಥಳಿಸಿ ಶರ್ಟ್ ಹರಿದು ಆ ಗುಂಪು ಹೊರಟು ಹೋಯಿತು.

- ಮೇ 25, ಝಾರ್ಖಂಡ್‌ನ ಜಮಷೇದ್‌ಪುರದ ಅಧ್ಯಾಪಕ ಜೀತ್ರಾಯ್ ಹಂಸ್‌ದಾ ಅವರನ್ನು ಪೋಲೀಸರು ಬಂಧಿಸಿದರು. ಕಾರಣ ಸಂತಾಲ್ ಬುಡಕಟ್ಟಿಗೆ ಸೇರಿದ ಈತ ಜೂನ್ 2017ರಲ್ಲಿ ಗೋಮಾಂಸದ ವಿರುದ್ಧ ಭಾವಾತಿರೇಕದ ಬಗ್ಗೆ ಫೇಸ್‌ಬುಕ್‌ನಲ್ಲಿ ಆತಂಕ ವ್ಯಕ್ತಪಡಿಸಿದ್ದರು, ಸಂತಾಲರು ಭಾರತೀಯರಾದರೆ, ಅವರು ಹಿಂದೂ ಆಚರಣೆಗಳನ್ನು ಅಂಗೀಕರಿಸುವಂತೆ ಬಲವಂತ ಮಾಡುವ ಕಾನೂನು ತರಬಾರದು ಎಂದು ಬರೆದಿದ್ದರಂತೆ. ಎಬಿವಿಪಿ ಇದರ ವಿರುದ್ಧ ಗಲಭೆ ಎಬ್ಬಿಸಿ ಎಫ್‌ಐಆರ್ ಹಾಕಿಸಿದ್ದರು, ಆದರೆ ಆಗ ಬಂಧಿಸಿರಲಿಲ್ಲ, 2018ರಲ್ಲಿ ನಿರೀಕ್ಷಣಾ ಜಾಮೀನು ಸಿಗದಿದ್ದರೂ ಬಂಧಿಸಿರಲಿಲ್ಲ, ಸಂತಾಲರ ಮತ ಕಳೆದುಕೊಳ್ಳುವಂತಾಗಬಾರದೆಂದು ಚುನಾವಣೆ ಮುಗಿಯುವುದನ್ನೇ ಕಾಯುತ್ತಿದ್ದಂತಿತ್ತು ಎನ್ನಲಾಗಿದೆ.

- ಮೇ 26ರಂದು ಒಬ್ಬ ಡಿಟರ್ಜೆಂಟ್ ಸೇಲ್ಸ್‌ಮನ್ ತನ್ನ ಬೈಕಿನಲ್ಲಿ ಬಿಹಾರದ ಬೇಗುಸರಾಯ್ ಜಿಲ್ಲೆಯ ಒಂದು ಹಳ್ಳಿಯ ಮೂಲಕ ಹಾದು ಹೋಗುವಾಗ ರಾಜೀವ್ ಯಾದವ್ ಎಂಬಾತ ಆತನನ್ನು ನಿಲ್ಲಿಸಿ ಹೆಸರು ಕೇಳಿದ. 'ಮಹಮ್ಮದ್ ಕಾಸಿಂ' ಎಂಬ ಮಾತು ಕೇಳುತ್ತಲೇ ಆತನ ಮೇಲೆ ಗುಂಡು ಹಾರಿಸಿಯೇ ಬಿಟ್ಟ, ಇನ್ನೊಂದು ಗುಂಡು ಹೊಡೆಯಲು ಆತ ಸಿದ್ಧಮಾಡಿಕೊಳ್ಳುತ್ತಿದ್ದಾಗ ಕಾಸಿಂ ಆತನನ್ನು ಬದಿಗೆ ತಳ್ಳಿ ಅಲ್ಲಿಂದ ತಪ್ಪಿಸಿಕೊಂಡು ಈಗ ಆಸ್ಪತ್ರೆಯಲ್ಲಿದ್ದಾನೆ. ಅಲ್ಲಿದ್ದ ಯಾರೂ ತನ್ನ ನೆರವಿಗೆ ಬರಲಿಲ್ಲ ಎನ್ನುತ್ತಾನೆ.

- ಇದು ದೂರದ ಒಂದು ಹಳ್ಳಿಯ ಘಟನೆಯಾದರೆ, ಅದೇ ದಿನ ದೇಶದ ರಾಜಧಾನಿಯ ಕೇಂದ್ರ ಭಾಗದಲ್ಲಿ ಕಾರ್ಯನಿಮಿತ್ತ ಪುಣೆಯಿಂದ ಬಂದಿದ್ದ ಪ್ರಖ್ಯಾತ ಸ್ತ್ರೀರೋಗತಜ್ಞ ಡಾ. ಅರುಣ್ ಗದ್ರೆಯವರನ್ನೂ ಇದೇ ರೀತಿ ಯುವಕರ ಗುಂಪೊಂದು ತಡೆದು ನಿಲ್ಲಿಸಿ ಅವರ ಧರ್ಮ ಯಾವುದೆಂದು ಕೇಳಿ 'ಜೈಶ್ರೀರಾಮ್' ಎಂದು ಹೇಳುವಂತೆ ಆಗ್ರಹಿಸಿದರು. ಇದನ್ನು ಅವರು ಪುಣೆಗೆ ಹೋದ ಮೇಲೆ ಮೇ 28ರಂದು ತಿಳಿಸುತ್ತ ಇದೊಂದು ಅಲ್ಪ ಘಟನೆ, ಇದರಿಂದ ಯಾವ ತೀರ್ಮಾನಕ್ಕೂ ಬರಬೇಡಿ ಎಂದು ಹೇಳಿರುವುದಾಗಿ ವರದಿಯಾಗಿದೆ.

ಬಹುಶಃ ಪ್ರಧಾನಿಗಳೂ ಹಾಗೆಯೇ ಭಾವಿಸಿರಬೇಕು, ಏಕೆಂದರೆ ಈ ಯಾವ ಘಟನೆಯ ಬಗ್ಗೆಯೂ ಅವರು ಕಳೆದ ಐದು ವರ್ಷಗಳಂತೆ ಏನೂ ಹೇಳಿರುವುದು ವರದಿಯಾಗಿಲ್ಲ.

ಈ ಆರು ಘಟನೆಗಳ 9 ವ್ಯಕ್ತಿಗಳಲ್ಲಿ 5 ಜನ ಮುಸ್ಲಿಮರು, ಇಬ್ಬರು ದಲಿತರು ಮತ್ತು ಒಬ್ಬರು ಆದಿವಾಸಿ ಕುಟುಂಬದವರು. ಎಲ್ಲ ಘಟನೆಗಳೂ ನಡೆದಿರುವುದು ಉತ್ತರ ಮತ್ತು ಮಧ್ಯ ಭಾರತದಲ್ಲಿ, ಅದಕ್ಕಿಂತ ಹೆಚ್ಚಾಗಿ ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿ ಜಯಭೇರಿ ಗಳಿಸಿದ ಪ್ರದೇಶಗಳಲ್ಲಿ. ಇವು ಕೇವಲ ಆಕಸ್ಮಿಕ ಸಂಗತಿಗಳೇ?

ಈ ನಡುವೆ, ಬಹುಶಃ ಪ್ರಧಾನಿಗಳ ಸಲಹೆಯನ್ನು ಗಂಭೀರವಾಗಿ ತೆಗೆದುಕೊಂಡ ನವ ಚುನಾಯಿತ ಬಿಜೆಪಿಯ ದಿಲ್ಲಿ ಸಂಸದ, ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಗುರುಗ್ರಾಮದ ಘಟನೆಯನ್ನು ಖಂಡಿಸುತ್ತ ಮಹಮ್ಮದ್ ಬರ್ಕತ್‌ನನ್ನು ಥಳಿಸಿದವರಿಗೆ 'ಮಾದರಿ ಶಿಕ್ಷೆ' ಕೊಡಬೇಕೆಂದು ಆಗ್ರಹಿಸಿದ್ದಾರೆ. ತಮಾಷೆಯೆಂದರೆ ಬಹಳಷ್ಟು ಆತನ ಬಿಜೆಪಿ ಗೆಳೆಯರು ಅವರ ಬೆಂಬಲಕ್ಕೆ ಬಂದಿಲ್ಲ, ಆತನಿಗೆ 'ಅನುಭವ ಸಾಲದು' ಎಂದು ದೂರವುಳಿದರು ಎಂದು ವರದಿಯಾಗಿದೆ.

ಅತ್ತ ಉತ್ತರಪ್ರದೇಶದ ಅಲಿಘಢ್‌ನಿಂದ **ಪುನರಾಯ್ಕೆಗೊಂಡಿರುವ ಬಿಜೆಪಿ ಸಂಸದ ಸತೀಶ್ ಗೌತಮ್ ಮಾತ್ರ ತನ್ನ ಸರ್ವೋಚ್ಚ ಮುಖಂಡರ ಮಾತನ್ನು ಗಂಭೀರವಾಗಿ ಪರಿಗಣಿಸಿದಂತೆಯೇ ಇಲ್ಲ.** 'ಕೋಟ್ಯಂತರ ಮಂದಿ ನರೇಂದ್ರ ಮೋದಿಯವರ ಜಾಣ ಮುಖಂಡತ್ವಕ್ಕೆ ಅನುಮೋದನೆಯ ಮುದ್ರೆ ಒತ್ತಿದ ಮೇಲೂ ಅಲಿಘಢ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಬಿಜೆಪಿಗೆ ವಿರೋಧ ವ್ಯಕ್ತಪಡಿಸುವುದನ್ನು ಮುಂದುವರೆಸಿದರೆ ಆ ವಿಶ್ವವಿದ್ಯಾಲಯದ ಉಪಕುಲಪತಿಗಳು ರಾಜೀನಾಮೆ ಕೊಡಬೇಕಾಗುತ್ತದೆ' ಎಂದು ಎಚ್ಚರಿಸಿದ್ದಾರಂತೆ.

ಈ ಬಗ್ಗೆಯೂ ಪ್ರಧಾನಿಗಳ ಟಿಪ್ಪಣಿ ಕೇಳಬಂದಿಲ್ಲ. ಈ ಸಂದರ್ಭದಲ್ಲಿ ಅಮೆರಿಕಾದ ಪ್ರಖ್ಯಾತ ಪತ್ರಿಕೆ 'ಟೈಮ್' ಅವರನ್ನು ಮೊನ್ನೆಯಷ್ಟೇ 'ಮಹಾ ವಿಭಜನಕಾರ' ಎಂದು ಹೇಳಿರುವುದನ್ನು ನೆನಪಿಸಿಕೊಳ್ಳುತ್ತ, ನಮ್ಮ ಪ್ರಧಾನಿಗಳಿಗೆ ವಿದೇಶಗಳಲ್ಲಿ, ಅದರಲ್ಲೂ ಪಾಶ್ಚಿಮಾತ್ಯರ ನಡುವೆ ತಮ್ಮ ಇಮೇಜಿನ ಬಗ್ಗೆ ಭಾರೀ ಕಾಳಜಿ ಎಂದು ಒಬ್ಬ ಟಿಪ್ಪಣಿಗಾರರು ನೆನಪಿಸಿದ್ದಾರೆ. ಬಹುಶಃ ಇದು ಮೇಲೆ ಹೇಳಿದ ಗೊಂದಲವನ್ನು ಸ್ವಲ್ಪ ತಿಳಿಗೊಳಿಸಬಹುದು. ಈಗ ಅದೇ ಪತ್ರಿಕೆಯಲ್ಲಿ ಮಹಾ ಒಗ್ಗಟ್ಟು ತಂದವರು ಎಂಬರ್ಥದ ಮತ್ತೊಂದು ಲೇಖನ ಪ್ರಕಟವಾಗಿದೆ!

ಇಲ್ಲಿ ಇನ್ನೊಂದು ಪ್ರಶ್ನೆಯೂ ಎದ್ದಿದೆ. ಇದುವರೆಗೆ ಜಾತ್ಯತೀತತೆ ಮೋದಿಯವರ ಪಕ್ಷಕ್ಕೆ 'ನಕಲಿ'ಯಾಗಿತ್ತು, ಎಂದರೆ ಅಲ್ಪಸಂಖ್ಯಾತರ 'ತುಷ್ಟೀಕರಣ'ವಾಗಿತ್ತು. ಈಗ ಅಲ್ಪಸಂಖ್ಯಾತರೂ ವಂಚಿತರು ಎನ್ನುತ್ತ 'ಸಬ್ ಕಾ ವಿಶ್ವಾಸ್' ಘೋಷಣೆ ಕೊಟ್ಟಿರುವಾಗ ಅದು 'ತುಷ್ಟೀಕರಣ'ವಾಗಿ ಉಳಿದಿಲ್ಲ ಎಂದರ್ಥವಲ್ಲವೇ ಎಂದು ಒಬ್ಬ ವಿಶ್ಲೇಷಕರು ಆಶಾವಾದ ವ್ಯಕ್ತಪಡಿಸಿದ್ದಾರೆ. ಆದರೆ ಕಳೆದ ಒಂದು ವಾರದ ಘಟನೆಗಳು ಇಂತಹ ಆಶಾವಾದ ಹುಟ್ಟಿಸಿವೆಯೇ?.



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

17ನೇ ಲೋಕಸಭೆಯಲ್ಲಿ 150ಕ್ಕೂ ಹೆಚ್ಚು ಗಂಭೀರ ಕ್ರಿಮಿನಲ್ ದಾಖಲೆಗಳ ಸದಸ್ಯರು

2019ರ ಚುನಾವಣೆಗಳ ನಂತರ ಹೊಸದಾಗಿ ರಚನೆಗೊಳ್ಳುತ್ತಿರುವ ಲೋಕಸಭೆಯಲ್ಲಿ ಸುಮಾರು ಅರ್ಧದಷ್ಟು ಸದಸ್ಯರು ಕ್ರಿಮಿನಲ್ ದಾಖಲೆಗಳನ್ನು ಹೊಂದಿರುವವರು ಎಂದು ಎ.ಡಿ.ಆರ್. ('ಅಸೋಸಿಯೇಷನ್ ಫಾರ್ ಡೆಮಾಕ್ರಸಿ' ಸಂಸ್ಥೆ). ಚುನಾವಣಾ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಕೊಡುವ ವಿವರಗಳನ್ನು ಆಧರಿಸಿ ಎ.ಡಿ.ಆರ್. ಈ ಮಾಹಿತಿಗಳನ್ನು ಕಲೆ ಹಾಕುತ್ತದೆ. ಅದರ ಪ್ರಕಾರ, ಅದು ವಿಶ್ಲೇಷಿಸಿರುವ 539 ವಿಜಯೀ ಅಭ್ಯರ್ಥಿಗಳಲ್ಲಿ 233 ಸದಸ್ಯರು, ಅಂದರೆ 43% ಮಂದಿ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದಾರೆ. 2014ಕ್ಕೆ ಹೋಲಿಸಿದರೆ, ಇದು 26% ಏರಿಕೆ ಎಂದು ಎ.ಡಿ.ಆರ್. ಹೇಳಿದೆ.



ವ್ಯಂಗ್ಯಚಿತ್ರ: ಮಿಕ ಅಜೀಜ್

ಬಿಜೆಪಿಯ 303 ಸದಸ್ಯರಲ್ಲಿ 116 ಮಂದಿ, ಜೆಡಿ(ಯು)ನ 16ರಲ್ಲಿ 13, ಕಾಂಗ್ರೆಸಿನ 52ರಲ್ಲಿ 29, ತೃಣಮೂಲ ಕಾಂಗ್ರೆಸಿನ 22ರಲ್ಲಿ 9 ಮತ್ತು ಡಿಎಂಕೆಯ 23ರಲ್ಲಿ 10 ಸದಸ್ಯರು ಕ್ರಿಮಿನಲ್ ದಾಖಲೆಗಳನ್ನು ಹೊಂದಿದ್ದಾರೆ.

ರಾಜಕೀಯದಲ್ಲಿ ಸಕ್ರಿಯರಾಗಿರುವವರ ಮೇಲೆ ಕ್ರಿಮಿನಲ್ ಆರೋಪಗಳೆಲ್ಲವೂ ನಿಜವಿರಬೇಕೆಂದೇನಿಲ್ಲ. ಆದರೆ 29%, ಅಂದರೆ 150ಕ್ಕೂ ಹೆಚ್ಚು ಸದಸ್ಯರ ಮೇಲೆ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಇತರ ಅಪರಾಧಗಳು, ಕೊಲೆ ಮತ್ತು ಕೊಲೆ ಪ್ರಯತ್ನದ ಆರೋಪಗಳಿವೆ. 2009ರಿಂದೀಚೆಗೆ ಇಂತಹ ಆರೋಪಗಳಿರುವ ಸದಸ್ಯರ ಸಂಖ್ಯೆ ದ್ವಿಗುಣಗೊಂಡಿದೆ ಎಂದು ಎ.ಡಿ.ಆರ್.ಗೆ ಕಂಡು ಬಂದಿದೆ.

ಮಾಲೆಗಾಂವ್ ಭಯೋತ್ಪಾದಕ ಕೃತ್ಯದ ಆರೋಪಿ ಬಿಜೆಪಿಯ ಪ್ರಜ್ಞಾ ಠಾಕುರ್ ಪ್ರಧಾನಿಗಳಿಂದ 'ಕ್ಷಮೆ' ಪಡೆಯಲಾಗದಿದ್ದರೂ, ಕರ್ನಾಟಕದ ಇತರ ಇಬ್ಬರಂತೆ ಭಾರೀ ಅಂತರದಿಂದ ಆಯ್ಕೆಯಾಗಿದ್ದಾರೆ. ಈ ನಡುವೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕೋರ್ಟ್ ಆಕೆ ವಾರಕ್ಕೊಮ್ಮೆ ತನ್ನ ಮುಂದೆ ಹಾಜರಾಗಬೇಕು ಎಂದು ಆದೇಶ ನೀಡಿದೆಯಂತೆ.

29 ಸದಸ್ಯರ ಮೇಲೆ ದ್ವೇಷ ಭಾಷಣಗಳ ಆರೋಪಗಳಿವೆ.

ಕೇರಳದ ಇಡುಕ್ಕಿಯಿಂದ ಆರಿಸಿ ಬಂದಿರುವ ಕಾಂಗ್ರೆಸ್ ಸದಸ್ಯ ಡೀನ್ ಕುರಿಯಕೋಸ್ ಮೇಲೆ ದಂಡನೀಯ ನರಹತ್ಯೆ, ಮನೆಗೆ ನುಗ್ಗುವುದು, ದರೋಡೆ, ಕ್ರಿಮಿನಲ್ ಬೆದರಿಕೆ ಮುಂತಾದ 204 ಕ್ರಿಮಿನಲ್ ಕೇಸುಗಳಿವೆ ಎಂದು ಎ.ಡಿ.ಆರ್. ಗಮನಕ್ಕೆ ಬಂದಿದೆ.

ಆರ್ಥಿಕ ಹಿಂಜರಿತದ ಬಿರು ಮೋಡಗಳು ದಟ್ಟೈಸುತ್ತಿವೆ



ನವ ಉದಾರವಾದವೇ ಅವಸಾನದ ಅಂಚಿನಲ್ಲಿದೆ. ಅದರ ಹಿಡಿತಕ್ಕೆ ಒಳಪಟ್ಟಿರುವ ಭಾರತದ ಅರ್ಥವ್ಯವಸ್ಥೆಯಲ್ಲಿ ಹಾಲಿ ಪರಿಸ್ಥಿತಿಯನ್ನು ಬದಲಿಸುವಂತಹ ಆಂತರಿಕ ಮಾರುಕಟ್ಟೆ ಆಧರಿತ ಯಾವ ಬದಲಿ ಆರ್ಥಿಕ ಆಳ್ವಿಕೆವೂ ಮುಂದೆ ಬರುತ್ತಿಲ್ಲ. ಹಾಗಾಗಿ, ಭಾರತದ ಅರ್ಥವ್ಯವಸ್ಥೆಯು ಒಂದು ತ್ರಿಶಂಕು ಸ್ಥಿತಿಯಲ್ಲಿದೆ. ಆದರೆ, ನವ ಉದಾರವಾದವು ತನ್ನ ಅಂತ್ಯವನ್ನು ತಲುಪಿದೆ ಎಂಬ ಅರಿವು ಮೋದಿ ಸರ್ಕಾರಕ್ಕೆ ಇದ್ದಂತಿಲ್ಲ. ನವ ಉದಾರವಾದಕ್ಕೆ ಮುಂದಕ್ಕೆ ಸಾಗಲು ದಾರಿ ಕಾಣದಾಗಿರುವಾಗ ಮೋದಿ ಸರ್ಕಾರಕ್ಕೆ ಅದನ್ನು ಧಿಕ್ಕರಿಸುವ ನೀತಿಗಳನ್ನು ಅನುಸರಿಸುವ ಧೈರ್ಯವಿಲ್ಲ. ಆದ್ದರಿಂದ, ಕೈಗಾರಿಕಾ ಹಿಂಜರಿತವು ಉಲ್ಬಣಗೊಳ್ಳುವ ಸಂಭವವಿದೆ.


ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಜೂನ್ 2013 ರ ನಂತರ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದಲ್ಲಿ ಮೊದಲ ಬಾರಿಗೆ 2019ರ ಮಾರ್ಚ್‌ನಲ್ಲಿ ಅದರ ಹಿಂದಿನ ಮಾರ್ಚ್‌ಗೆ ಹೋಲಿಸಿದರೆ 0.1% ಇಳಿಕೆಯಾಗಿದೆ. ಹಿಂದಿನ ನವೆಂಬರ್, ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಕಂಡ ತುಸು ಏರಿಕೆಯ ನಂತರ ಸೂಚ್ಯಂಕದಲ್ಲಿ ಇಳಿಕೆಯಾಗಿದೆ. ಇತ್ತೀಚಿನ ಅವಧಿಯಲ್ಲಿ ಕೈಗಾರಿಕಾ ಬೆಳವಣಿಗೆ ಮಂದವಾಗುತ್ತಿದೆ ಎಂಬ ಅಂಶವನ್ನು ಈ ಅಂಕಿಗಳು ಗಟ್ಟಿಯಾಗಿಯೇ ದೃಢಪಡಿಸುತ್ತವೆ.

ಈ ಸೂಚ್ಯಂಕದಲ್ಲಿ, 77.6% ಗಣನೆ ಹೊಂದಿರುವ ತಯಾರಿಕಾ ವಲಯದ ಬೆಳವಣಿಗೆಯು 2019ರ ಮಾರ್ಚ್‌ನಲ್ಲಿ ಅದರ ಹಿಂದಿನ ಮಾರ್ಚ್‌ಗೆ ಹೋಲಿಸಿದರೆ 0.4% ಇಳಿದಿದೆ. ತಯಾರಿಕಾ ವಲಯದ ಉಪ ವಿಭಾಗಗಳಾದ ಮೂಲ ವಸ್ತುಗಳ ಉತ್ಪಾದನೆಯಲ್ಲಿ 8.7%, ಗೃಹ ಬಳಕೆ ವಸ್ತುಗಳ ಉತ್ಪಾದನೆಯಲ್ಲಿ 5.1%, ಮಧ್ಯವರ್ತಿ ವಸ್ತುಗಳ ಉತ್ಪಾದನೆಯಲ್ಲಿ 2.5% ಇಳಿಕೆಯಾಗಿದೆ ಮತ್ತು ಗೃಹ ಬಳಕೆಯೇತರ ವಸ್ತುಗಳ ಉತ್ಪಾದನೆಯಲ್ಲಿ 0.3% ಏರಿಕೆಯಾಗಿದೆ. ಇಡೀ 2018–19 ವರ್ಷದಲ್ಲಿ ಒಟ್ಟಾರೆ ಆಗಿರುವ 3.6% ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯು ಅದರ ಹಿಂದಿನ 2017–18 ವರ್ಷದಲ್ಲಿದ್ದ 4.4% ಬೆಳವಣಿಗೆಗಿಂತಲೂ ಕಡಿಮೆ ಇದೆ. ಹಾಗಾಗಿ, 2018–19 ವರ್ಷದ ಕೊನೆಯ ತಿಂಗಳುಗಳಲ್ಲಿ ಆರ್ಥಿಕ ಹಿಂಜರಿತ ಬಲಿಯಲಾರಂಭಿಸಿತು.

ಒಂದು ರೀತಿಯಲ್ಲಿ ಈ ಹಿಂಜರಿತವು ಅನಿವಾರ್ಯವೇ. ಏಕೆಂದರೆ, ಭಾರತದ ಅರ್ಥವ್ಯವಸ್ಥೆಯು, ವಿಶ್ವದ ಇತರ ಅರ್ಥವ್ಯವಸ್ಥೆಗಳಂತಲ್ಲದೆ, ತ್ರಿಶಂಕು ಸ್ಥಿತಿಗೊಳಗಾಗಿದೆ. ಇದು, ರೋಗ ತಟ್ಟಿದೆ ಎಂಬುದರ ಒಂದು ಸೂಚನೆ. ನವ ಉದಾರವಾದವೇ ಅವಸಾನದ ಅಂಚಿನಲ್ಲಿದೆ. ಅದರ ಹಿಡಿತಕ್ಕೆ ಒಳಪಟ್ಟಿರುವ ಭಾರತದ ಅರ್ಥವ್ಯವಸ್ಥೆಯಲ್ಲಿ ಹಾಲಿ ಪರಿಸ್ಥಿತಿಯನ್ನು ಬದಲಿಸುವಂತಹ ಆಂತರಿಕ ಮಾರುಕಟ್ಟೆ ಆಧರಿತ ಯಾವ ಬದಲಿ ಆರ್ಥಿಕ ಆಳ್ವಿಕೆವೂ ಮುಂದೆ ಬರುತ್ತಿಲ್ಲ. ಹಾಗಾಗಿ, ಭಾರತದ ಅರ್ಥವ್ಯವಸ್ಥೆಯು ಒಂದು ತ್ರಿಶಂಕು ಸ್ಥಿತಿಯಲ್ಲಿದೆ.

ಜಾಗತಿಕ ಅರ್ಥವ್ಯವಸ್ಥೆಯ ಮಂದಗತಿಯ ಪರಿಣಾಮವಾಗಿ ಭಾರತ ಮತ್ತು ಚೀನಾದಂತಹ ಅರ್ಥವ್ಯವಸ್ಥೆಗಳು ಈಗ ನಲುಗುತ್ತಿವೆ. ಈ ದೇಶಗಳ ರಫ್ತು ದರಗಳು ಇಳಿಮುಖವಾಗುತ್ತಿವೆ. ರಫ್ತುಗಳ ಈ ಇಳಿಕೆಯನ್ನು ಸರಿದೂಗಿಸಿಕೊಳ್ಳಲು ಬೇಕಾಗುವ ಮಟ್ಟದಲ್ಲಿ ಆಂತರಿಕ ಮಾರುಕಟ್ಟೆಗಳನ್ನು ಬೆಳೆಸುವ ಕ್ರಮಗಳನ್ನೇ ದೇಶದಲ್ಲಿ ಕೈಗೊಂಡಿಲ್ಲ. ಹಾಗಾಗಿ, ದೇಶದ ಆಂತರಿಕ ಮಾರುಕಟ್ಟೆಯೂ ಕುಗ್ಗುತ್ತಿದೆ. ಗ್ರಾಮೀಣ ಪರಿಸ್ಥಿತಿಯ ಯಾತನಾಮಯ ಕಾರಣದಿಂದಾಗಿ ಮತ್ತು ರಫ್ತು ದರ ಇಳಿಕೆಯ ಅಡ್ಡ ಪರಿಣಾಮಗಳ ಕಾರಣಗಳಿಂದಾಗಿ ಕೈಗಾರಿಕಾ ಬೆಳವಣಿಗೆ ಕುಂಠಿತವಾಗಿದೆ. ಜೊತೆಗೆ, ವಸೂಲಾಗದ ಸಾಲಗಳು ಹೆಚ್ಚಿದ ಕಾರಣದಿಂದಾಗಿ ಹೊಸ ಸಾಲಗಳು ದುರ್ಲಭವಾಗುತ್ತಿವೆ. ಇದರಿಂದಾಗಿ ಕೈಗಾರಿಕಾ ಬೆಳವಣಿಗೆಗೆ ಹೆಚ್ಚಿನ ಖರ್ಚು ಮಾಡುವುದು ಸಾಧ್ಯವಾಗುತ್ತಿಲ್ಲ. ಅಂದರೆ, ರಫ್ತುಗಳ ಇಳಿಕೆಯು, ಅದನ್ನು ಸರಿದೂಗಿಸಿಕೊಳ್ಳುವ ಮಾತು ಒತ್ತಟ್ಟಿಗಿರಲಿ, ದೇಶದ ಆಂತರಿಕ ಮಾರುಕಟ್ಟೆಯ ಕುಗ್ಗುವಿಕೆಗೂ ಕಾರಣವಾಗಿದೆ.



ನಾವೀಗ ಒಂದು ವಿಲಕ್ಷಣ ಪರಿಸ್ಥಿತಿಯಲ್ಲಿದ್ದೇವೆ. ಬಲಿಯುತ್ತಿರುವ ಹಿಂಜರಿತವನ್ನು ತಡೆಯಲು ಒಂದು ಕಡೆ ಪ್ರಯತ್ನಿಸಿದರೆ ಚಾಲ್ತಿ ಖಾತೆ ಕೊರತೆ ನಿಭಾಯಿಸುವುದು ಕಷ್ಟವಾಗುತ್ತದೆ. ಇನ್ನೊಂದು ಕಡೆ ಹಿಂಜರಿತವನ್ನು ತಡೆಯುವ ಯಾವ ಪ್ರಯತ್ನವನ್ನೂ ಮಾಡದಿದ್ದರೆ, ಈಗಾಗಲೇ ಭೀಕರವಾಗಿರುವ ನಿರುದ್ಯೋಗವು ಇನ್ನಷ್ಟು ಭೀಕರವಾಗಗುತ್ತದೆ. ನಿರುದ್ಯೋಗದ ಭೀಕರತೆ ಸಾರ್ವಜನಿಕರ ಗಮನಕ್ಕೆ ಬರದಿರಲಿ ಎಂಬ ದುರುದ್ದೇಶದಿಂದ ಸರ್ಕಾರವು ನಿರುದ್ಯೋಗ ಪರಿಸ್ಥಿತಿಯ ಬಗ್ಗೆ ಯಾವ ಅಂಕಿ ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಲು ಎರಡು ವರ್ಷಗಳಿಂದಲೂ ನಿರಾಕರಿಸಿದೆ.

ಗೃಹ ಬಳಕೆ ವಸ್ತುಗಳ ತಯಾರಿಕೆ ಕುಗ್ಗುತ್ತಿರುವ ಅಂಶವು ದೇಶದ ಆಂತರಿಕ ಮಾರುಕಟ್ಟೆ ಕುಗ್ಗಿರುವ ಅಂಶವನ್ನು ಸ್ಪಷ್ಟಪಡಿಸುತ್ತದೆ. ಮತ್ತು, ಗೃಹ ಬಳಕೆಯೇತರ ವಸ್ತುಗಳ ಉತ್ಪಾದನಾ ವಲಯವು ಎಪ್ರಿಲ್‌ನಲ್ಲಿ ಅದರ ಹಿಂದಿನ ಎಪ್ರಿಲ್‌ಗೆ ಹೋಲಿಸಿದರೆ ಸ್ಥಗಿತವಾಗಿತ್ತು. ಅರ್ಥವ್ಯವಸ್ಥೆಯಲ್ಲಿ ಹೂಡಿಕೆ ಇಳಿಯುತ್ತಿದೆ ಎಂಬುದನ್ನು ಅದಾಗಲೇ ಫೆಬ್ರವರಿಯಲ್ಲಿಯೇ ಮೂಲ ಸರಕು ಉತ್ಪಾದನಾ ವಲಯವು ಸ್ಥಗಿತಗೊಂಡಿದ್ದ ಪರಿಸ್ಥಿತಿಯೇ ಸೂಚಿಸುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಈಗಾಗಲೇ ಎರಡು ಬಾರಿ, ಪ್ರತಿ ಸಲವೂ 25 ಮೂಲಾಂಶದಷ್ಟು (ಅಂದರೆ, ಒಟ್ಟು 0.5%) ಬಡ್ಡಿ ದರ ಇಳಿಸಿದೆ. ಈ ಕ್ರಮದಿಂದಾಗಿ ಪರಿಸ್ಥಿತಿ ಹೆಚ್ಚು ಸುಧಾರಿಸುವ ಸಂಭವವಿಲ್ಲ. ಏಕೆಂದರೆ, ಸಾಲದ ಮೇಲಿನ ಬಡ್ಡಿ ದರ ಎಷ್ಟು ಎಂಬುದಕ್ಕಿಂತಲೂ ಸಾಲ ಕೊಡಲು ಬ್ಯಾಂಕ್‌ಗಳ ಬಳಿ ಎಷ್ಟು ಹಣ ಲಭ್ಯವಿದೆ ಎಂಬುದೇ ಸಾಲ ಕೊಡುವಿಕೆಯನ್ನು ತಡೆ ಹಿಡಿದಿರುವ ಅಂಶ. ಹಿಂದಿನ ಸಾಲಗಳು ವಸೂಲಾಗದೇ ಉಳಿದ ಕಾರಣದಿಂದಾಗಿ ಬ್ಯಾಂಕ್‌ಗಳ ಬಳಿ ಹೊಸ ಸಾಲ ಕೊಡಲು ಹಣ ಲಭ್ಯವಿಲ್ಲ. ಒಂದು ವೇಳೆ ಹೊಸ ಸಾಲಗಳು ಲಭ್ಯವಿದ್ದರೂ ಅದರಿಂದ ಪರಿಸ್ಥಿತಿ ಎಷ್ಟರಮಟ್ಟಿಗೆ ಸುಧಾರಿಸುತ್ತಿತ್ತು ಎಂಬುದು ಸ್ಪಷ್ಟವಿಲ್ಲ. ಅದೇನಿದ್ದರೂ, ಸಾಲ ಲಭ್ಯತೆಯೇ ಬಿಗಿತಗೊಂಡಿರುವ ಪರಿಸ್ಥಿತಿಯಲ್ಲಿ ಬಡ್ಡಿ ದರ ಇಳಿಸುವುದರಿಂದಾಗಿ ಸಾಲ ಲಭ್ಯತೆ ಗಣನೀಯ ಎನ್ನುವಷ್ಟು ಹೆಚ್ಚುವುದಿಲ್ಲ.

ಈ ಪರಿಸ್ಥಿತಿಯಲ್ಲಿ ಅಗತ್ಯವಿರುವುದು ಏನೆಂದರೆ, ವಿತ್ತೀಯ ವಿಸ್ತರಣೆ. ಇಡೀ ಈ ವಿಷಯದ ಸಾರಾಂಶ ಇರುವುದು ಇಲ್ಲೇ. ಚುನಾವಣೆಗಳ ಈ ಕಾಲದಲ್ಲಿ, ಗ್ರಾಮೀಣ ಬಡವರಿಗೆ ದೊಡ್ಡ ಮೊತ್ತದ ಹಣವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸುವ ಭರವಸೆಯನ್ನು ಬೇರೆ ಬೇರೆ ರಾಜಕೀಯ ಪಕ್ಷಗಳು ಕೊಟ್ಟಿವೆ. ಈ ಕಾರ್ಯಕ್ರಮವು ಖಂಡಿತವಾಗಿಯೂ ದೇಶದ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸುತ್ತದೆ ಮತ್ತು ಸೊರಗುತ್ತಿರುವ ಕೈಗಾರಿಕೆಗಳ ಉತ್ಪಾದನೆಗೆ ಚೈತನ್ಯ ತುಂಬುತ್ತದೆ. ಮೋದಿ ಸರ್ಕಾರವು ತನ್ನ ಕೊನೆಯ ಬಜೆಟ್‌ನಲ್ಲಿ, ಬಡ ಕುಟುಂಬಗಳಿಗೆ ಸೇರಿದ 12 ಕೋಟಿ ವ್ಯಕ್ತಿಗಳಿಗೆ ತಲಾ ವಾರ್ಷಿಕ 6,000 ರೂಗಳನ್ನು ಕೊಡುವುದಾಗಿ ಭರವಸೆ ಕೊಟ್ಟಿತ್ತು. ಕಾಂಗ್ರೆಸ್ ಅದಕ್ಕಿಂತಲೂ ಮುಂದೆ ಹೋಗಿ, ತನ್ನ "ನ್ಯಾಯ" ಯೋಜನೆಯಡಿಯಲ್ಲಿ, ಐದು ಕೋಟಿ ಬಡ ಕುಟುಂಬಗಳಿಗೆ ತಿಂಗಳಿಗೆ 6,000 ರೂಗಳಂತೆ ವರ್ಷಕ್ಕೆ 72,000 ರೂಗಳನ್ನು ಕೊಡುವುದಾಗಿ ಭರವಸೆ ಕೊಟ್ಟಿತ್ತು.

ಇಂತಹ ಯೋಜನೆಗಳು, ಅದರಲ್ಲೂ ವಿಶೇಷವಾಗಿ ಭಾರೀ ಮಹತ್ವಾಕಾಂಕ್ಷೆಯ "ನ್ಯಾಯ" ಯೋಜನೆಯು ದೇಶದ ಆಂತರಿಕ ಮಾರುಕಟ್ಟೆಯನ್ನು ಹಿಗ್ಗಿಸುವಲ್ಲಿ ಸಹಾಯವಾಗುತ್ತಿತ್ತು. ಆದರೆ, ಇಂತಹ ಯೋಜನೆಗೆ ಹಣ ಎಲ್ಲಿದೆ ಎಂಬ ಪ್ರಶ್ನೆ ಏಳುತ್ತದೆ. ಶ್ರೀಮಂತರಿಗೆ ತೆರಿಗೆ ವಿಧಿಸುವ ಮೂಲಕ, ಅಂದರೆ ಅವರ ಸಂಪತ್ತಿನ ಮೇಲೆ ತೆರಿಗೆ ಹಾಕುವ ಮೂಲಕ ಈ ಯೋಜನೆಗೆ ಬೇಕಾಗುವಷ್ಟು ಹಣವನ್ನು ಹೊಂದಿಸಿಕೊಳ್ಳಬಹುದು. ಈ ದೇಶದಲ್ಲಿ ಸಂಪತ್ತಿನ ಮೇಲೆ ತೆರಿಗೆಯೇ ಇಲ್ಲ. ಹಿಂದೆ ಇದ್ದ ಇಂತಹ ಒಂದು ಕಾನೂನನ್ನು ಕಿತ್ತುಹಾಕಿ ವರ್ಷಗಳೇ ಕಳೆದಿವೆ. ಸಂಪತ್ತು ತೆರಿಗೆಯಂತಹ ಒಂದು ಕಾನೂನನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಶತಾಯು ಗತಾಯು ವಿರೋಧಿಸುತ್ತದೆ. 'ನ್ಯಾಯ' ಯೋಜನೆಯ ಘೋಷಣೆ ಮಾಡುವಾಗ, ಅದಕ್ಕೆ ಬೇಕಾಗುವ ಹಣ ಹೊಂದಿಸಿಕೊಳ್ಳುವುದು ಕಷ್ಟವಾಗಲಾರದು ಎಂಬ ಬಹಳ ಚಾತುರ್ಯದ ಉತ್ತರ ಕೊಟ್ಟಿದ್ದರು ಮನಮೋಹನ ಸಿಂಗ್. ಆದರೆ, ನವ ಉದಾರ ಆರ್ಥಿಕ ಆಳ್ವಿಕೆಯಲ್ಲಿ ಇಂತಹ ಯೋಜನೆಗೆ ಹಣ ಹೊಂದಿಸಿಕೊಳ್ಳುವುದು ಅತ್ಯಂತ ಕಷ್ಟಕರವಾದ ಕೆಲಸವೇ.

ಅದೇ ರೀತಿಯಲ್ಲಿ ಇಂತಹ ಯೋಜನೆಗೆ ಸರ್ಕಾರವು ವಿತ್ತೀಯ ಕೊರತೆಯ ಮೂಲಕ ಭಾಗಶಃ ಹಣ ಒದಗಿಸಿದರೂ ಅದು ವಿತ್ತೀಯ ಕೊರತೆಯನ್ನು ಹೆಚ್ಚಿಸಿ ಜೊತೆಗೆ, ಈ ಕೊರತೆಯ ಮೇಲೆ ವಿಧಿಸಿರುವ ಮಿತಿಯನ್ನು (ಜಿಡಿಪಿಯ 3.4%) ತಪ್ಪದೇ ಮೀರುತ್ತದೆ. ಆಗ, ಭಾರತದ ಕ್ರೆಡಿಟ್ ರೇಟಿಂಗ್‌ಅನ್ನು ಕೆಳ ದರ್ಜೆಗೆ ಇಳಿಸುವ ಸಂಭವವಿದೆ. ಅಂತಹ ಸಂದರ್ಭದಲ್ಲಿ, ವಿದೇಶ ವ್ಯಾಪಾರದಿಂದ ಉಂಟಾದ ಕೊರತೆಯನ್ನು ತೀರಿಸುವ ಸಲುವಾಗಿ ಚಾಲ್ತಿ ಖಾತೆಯ(ವಿದೇಶಿ ವಿನಿಮಯ) ಕೊರತೆ ತುಂಬಿಸಿಕೊಳ್ಳುವುದು ಭಾರೀ ಕಷ್ಟದ ಕೆಲಸವಾಗುತ್ತದೆ. ಚಾಲ್ತಿ ಖಾತೆ ಕೊರತೆ ಸಮಸ್ಯೆಯು ಅಮೇರಿಕಾದ ಒತ್ತಾಯಕ್ಕೆ ಕಟ್ಟುಬಿದ್ದು ಮಾರುಕಟ್ಟೆಯ ದೈನಿಕ ದರದಲ್ಲಿ ತೈಲ ಕೊಂಡಾಗಲೂ ಉಂಟಾಗುತ್ತದೆ. ಈಗ ದೇಶವು ಇರಾನಿನಿಂದ ಅಗ್ಗದ ದರದಲ್ಲಿ ತೈಲ ಕೊಳ್ಳುತ್ತಿದೆ, ಬೇರೊಂದು ಕಾರಣದ ಮೇಲೆ, ಇರಾನಿನಿಂದ ತೈಲ ಕೊಳ್ಳಕೂಡದು ಎಂದು ಅಮೇರಿಕಾ ಒತ್ತಾಯಿಸುತ್ತಿದೆ. ಅಮೇರಿಕಾದ ಒತ್ತಡಕ್ಕೆ ಮೋದಿ ಸರ್ಕಾರವು ಈಗಾಗಲೇ ತಲೆಬಾಗಿದೆ. ಅಧಿಕಾರಕ್ಕೆ ಮರಳಿದ ನಂತರವೂ ಇದೇ ನಿಲುವಿಗೆ ಆತುಕೊಳ್ಳುತ್ತದೆ.

ಈಗಾಗಲೇ ಖಚಿತ ಏರು ಮುಖಿಯಾಗಿರುವ ತೈಲ ಬೆಲೆಗಳಿಂದಾಗಿ ಚಾಲ್ತಿ ಖಾತೆಯಲ್ಲಿ ಕೊರತೆ ಹೆಚ್ಚಲಿದೆ. ಇರಾನಿನ ಮೇಲೆ ಅಮೇರಿಕಾ ಹೇರಿರುವ ನಿರ್ಬಂಧಗಳು ಜಾರಿಯಾದಾಗ ಚಾಲ್ತಿ ಖಾತೆಯಲ್ಲಿ ಕೊರತೆ ಮತ್ತಷ್ಟು ಹೆಚ್ಚಲಿದೆ. ಅದರ ಜೊತೆಗೆ ವಿತ್ತೀಯ ಕೊರತೆಯು ಗರಿಷ್ಠ ಮಿತಿಗಿಂತಲೂ ಹೆಚ್ಚಿಗೆ ಇದ್ದರೆ, ಕ್ರೆಡಿಟ್ ರೇಟಿಂಗ್ ಕೆಳ ದರ್ಜೆಗೆ ಇಳಿಯುತ್ತದೆ. ಅದರ ಪರಿಣಾಮವಾಗಿ ಬಂಡವಾಳದ ಒಳಹರಿವೂ ಬತ್ತುತ್ತದೆ. ಆಗ, ಚಾಲ್ತಿ ಖಾತೆ (ವಿದೇಶಿ ವಿನಿಮಯ) ಕೊರತೆ ನಿಭಾಯಿಸುವುದು ವಾಡಿಕೆಯ ಪ್ರಕಾರ ಸಾಧ್ಯವಾಗುವುದಿಲ್ಲ.

ನಾವೀಗ ಒಂದು ವಿಲಕ್ಷಣ ಪರಿಸ್ಥಿತಿಯಲ್ಲಿದ್ದೇವೆ. ಬಲಿಯುತ್ತಿರುವ ಹಿಂಜರಿತವನ್ನು ತಡೆಯಲು ಒಂದು ಕಡೆ ಪ್ರಯತ್ನಿಸಿದರೆ ಚಾಲ್ತಿ ಖಾತೆ ಕೊರತೆ ನಿಭಾಯಿಸುವುದು ಕಷ್ಟವಾಗುತ್ತದೆ. ಇನ್ನೊಂದು ಕಡೆ ಹಿಂಜರಿತವನ್ನು ತಡೆಯುವ ಯಾವ ಪ್ರಯತ್ನವನ್ನೂ ಮಾಡದಿದ್ದರೆ, ಈಗಾಗಲೇ ಭೀಕರವಾಗಿರುವ ನಿರುದ್ಯೋಗವು ಇನ್ನಷ್ಟು ಭೀಕರವಾಗಗುತ್ತದೆ.

ನಿರುದ್ಯೋಗದ ಭೀಕರತೆ ಸಾರ್ವಜನಿಕರ ಗಮನಕ್ಕೆ ಬರದಿರಲಿ ಎಂಬ ದುರುದ್ದೇಶದಿಂದ ಸರ್ಕಾರವು ನಿರುದ್ಯೋಗ ಪರಿಸ್ಥಿತಿಯ ಬಗ್ಗೆ ಯಾವ ಅಂಕಿ ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಲು ಎರಡು ವರ್ಷಗಳಿಂದಲೂ ನಿರಾಕರಿಸಿದೆ. ಆದರೆ, ಸರ್ಕಾರದ ಅಂಕಿ ಸಂಖ್ಯೆಗಳ ಸಂಸ್ಥೆಯು ಬಚ್ಚಿಟ್ಟಿದ್ದ ಒಂದು ವರದಿಯು ಸೋರಿಕೆಯಾಗಿದೆ. ಈ ವರದಿಯ ಪ್ರಕಾರ, 6.1% ನಿರುದ್ಯೋಗ ದರ ಏರಿಕೆ ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚಿನದು. ಭಾರತದ ಅರ್ಥವ್ಯವಸ್ಥೆಯ ಬೆಳವಣಿಗೆಗಳನ್ನು ಗಮನಿಸುತ್ತಿರುವ ಸಿಎಂಐಇ ಸಂಸ್ಥೆಯ ಪ್ರಕಾರ 2019ರ ಎಪ್ರಿಲ್‌ನಲ್ಲಿ ನಿರುದ್ಯೋಗ ದರ 7.6% ಇತ್ತು. ನಿರುದ್ಯೋಗ ದರವು ನಿರುದ್ಯೋಗದ ಏರಿಕೆ ಅಥವಾ ಇಳಿಕೆಯ ದಿಕ್ಕನ್ನು ಸೂಚಿಸುತ್ತದೆಯಲ್ಲದೆ ಅದರ ಅಗಾಧತೆಯನ್ನು ತೋರಿಸುವುದಿಲ್ಲ. ಏಕೆಂದರೆ, ಉದ್ಯೋಗಗಳ ಹರವು ಏಕ ರೂಪದಲ್ಲಿಲ್ಲ. ಎಲ್ಲೋ ಕೆಲವರು ಪೂರ್ಣಾವಧಿ ಉದ್ಯೋಗದಲ್ಲಿದ್ದರೆ, ಹೆಚ್ಚಿನ ಮಂದಿ ಅರೆ ಕಾಲಿಕ ಉದ್ಯೋಗದಲ್ಲಿದ್ದಾರೆ, ಉಳಿದವರು ಪೂರಾ ನಿರುದ್ಯೋಗಿಗಳು.

ಆದ್ದರಿಂದ, ಸರ್ಕಾರವು ನಿರುದ್ಯೋಗ ಪರಿಸ್ಥಿತಿಯನ್ನು ತಕ್ಕಮಟ್ಟಿಗಾದರೂ ಸುಧಾರಿಸುವ ಕೆಲಸ ಮಾಡಬೇಕು. ಆದರೆ, ಈ ನಿಟ್ಟಿನಲ್ಲಿ ಏನು ಮಾಡಲು ಹೊರಟರೂ, ನವ ಉದಾರ ಮಾದರಿಯ ಆರ್ಥಿಕ ಆಳ್ವಿಕೆಯ ಸಂದರ್ಭದಲ್ಲಿ, ಅದು ವಿದೇಶ ವ್ಯಾಪಾರದ ಬಾಕಿ ಚುಕ್ತಾ (ಪಾವತಿ ಶೇಷ) ಪರಿಸ್ಥಿತಿಯನ್ನು ಅಸ್ಥಿರಗೊಳಿಸುತ್ತದೆ. ಮಾಡಿದ್ದುಣ್ಣೋ ಮಹರಾಯ ಎಂಬಂತಾಗಿದೆ ನವ ಉದಾರ ಆರ್ಥಿಕ ಮಾದರಿಯ ಪರಿಸ್ಥಿತಿ.

ನವ ಉದಾರವಾದವೇ ತನ್ನ ಅಂತ್ಯವನ್ನು ತಲುಪಿರುವ ಪರಿಸ್ಥಿತಿಯಲ್ಲಿ ಅದರ ಹಿಡಿತದಿಂದ ಕಳಚಿಕೊಳ್ಳುವ ಒಂದು ಅವಕಾಶವಿದೆ. ವಿದೇಶ ವ್ಯಾಪಾರ ಮತ್ತು ಬಂಡವಾಳದ ಹರಿವಿನ ಮೇಲೆ ನಿಯಂತ್ರಣ ಹೇರುವ ಮೂಲಕ ನವ ಉದಾರವಾದದ ಹಿಡಿತದಿಂದ ಕಳಚಿಕೊಳ್ಳುವ ಅವಕಾಶವನ್ನು ಸದುಪಯೋಗಿಸಿ ಕೊಳ್ಳಬಹುದು. ಅಮೇರಿಕಾ ಈಗಾಗಲೇ ವಿದೇಶ ವ್ಯಾಪಾರದ ಮೇಲೆ ನಿಯಂತ್ರಣ ಹೇರಿದೆ. ಭಾರತವೂ ಅದನ್ನು ಅನುಸರಿಸಬಹುದಿತ್ತು. ಅಂತಹ ಒಂದು ತೀರ್ಮಾನ ಕೈಗೊಂಡಾಗ, ಸಂಪತ್ತು ತೆರಿಗೆ ಮತ್ತು ಅನುವಂಶಿಕ ಆಸ್ತಿ ತೆರಿಗೆ ವಿಧಿಸುವುದು ಸಾಧ್ಯವಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ, ಚುನಾವಣೆಗಳ ಸಮಯದಲ್ಲಿ ಗ್ರಾಮೀಣ ಬಡವರಿಗೆ ದೊಡ್ಡ ಮೊತ್ತದ ಹಣವನ್ನು ಅವರ ಖಾತೆಗೆ ನೇರವಾಗಿ ವರ್ಗಾಯಿಸುವುದಾಗಿ ಕೊಟ್ಟಿದ್ದ ಭರವಸೆಯನ್ನು ಈಡೇರಿಸುವುದು ಸಾಧ್ಯವಿತ್ತು. ವರ್ಗಾವಣೆಯ ಈ ಕಾರ್ಯಕ್ರಮವು ಖಂಡಿತವಾಗಿಯೂ ದೇಶದ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸುತ್ತಿತ್ತು. ತರುವಾಯ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸುವ ಕ್ರಮ ಕೈಗೊಳ್ಳಬಹುದಿತ್ತು. ಈ ರೀತಿಯಲ್ಲಿ ನೀತಿಗಳನ್ನು ಬದಲಾಯಿಸಿಕೊಂಡಿದ್ದರೆ, ಬಂಡವಾಳದ ಒಳ ಹರಿವು ಬತ್ತಿದರೂ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ, ವಿದೇಶ ವ್ಯಾಪಾರದ ಮೇಲೆ ನಿಯಂತ್ರಣ ಹೇರಿದಾಗ ಚಾಲ್ತಿ ಖಾತೆಯ ಕೊರತೆಯೂ ಹದ್ದುಬಸ್ತಿನಲ್ಲಿರುತ್ತದೆ. ಹಾಗಾಗಿ, ವಿದೇಶ ವ್ಯಾಪಾರದ ಬಾಕಿ ಚುಕ್ತಾ ಮಾಡುವುದೂ ಸಮಸ್ಯೆಯಾಗುವುದಿಲ್ಲ.

ಆದರೆ, ನವ ಉದಾರವಾದವು ತನ್ನ ಅಂತ್ಯವನ್ನು ತಲುಪಿದೆ ಎಂಬ ಅರಿವು ಮೋದಿ ಸರ್ಕಾರಕ್ಕೆ ಇದ್ದಂತಿಲ್ಲ. ನವ ಉದಾರವಾದೀ ಸುಧಾರಣೆಗಳ ವಿನ್ಯಾಸಕಾರನಾದ ಕಾಂಗ್ರೆಸ್ ಪಕ್ಷಕ್ಕೆ, 'ನ್ಯಾಯ' ಯೋಜನೆಯ ಬಗ್ಗೆ ಕೊಟ್ಟ ಭರವಸೆಯ ಹೊರತಾಗಿಯೂ, ನವ ಉದಾರವಾದಕ್ಕೆ ಮುಂದಕ್ಕೆ ಸಾಗಲು ದಾರಿ ಕಾಣದಾಗಿರುವಾಗ ಅದನ್ನು ಧಿಕ್ಕರಿಸುವ ನೀತಿಗಳನ್ನು ಅನುಸರಿಸುವ ಧೈರ್ಯವಿಲ್ಲ. ಆದ್ದರಿಂದ, ಕೈಗಾರಿಕಾ ಹಿಂಜರಿತವು ಉಲ್ಬಣಗೊಳ್ಳುವ ಸಂಭವವಿದೆ. ●

ವಿಜಯಪುರದಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ



ವಿಜಯಪುರ: ಕರ್ನಾಟಕ ಪ್ರಾಂತ ರೈತ ಸಂಘ, ಅಂಗನವಾಡಿ ಹಾಗೂ ಸಿಐಟಿಯು (ಸಿಐಟಿಯು ಸಂಯೋಜಿತ) ಜಿಲ್ಲಾ ಸಮಿತಿ ವಿಜಯಪುರವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇಂಗ್ಲಿಷ್ ಮಾಧ್ಯಮ ಬೇಡವೇ ಬೇಡ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಬೃಹತ್ ಮೆರವಣಿಗೆಯೊಂದಿಗೆ ಅಂಬೇಡ್ಕರ್ ವೃತ್ತದಿಂದ, ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಸಭೆಯಾಗಿ ಮಾರ್ಪಟ್ಟಿತು.

ಈ ಸಂದರ್ಭಧಲ್ಲಿ ಸುನಂದಾ ನಾಯಕ ಮಾತನಾಡಿ, ರಾಜ್ಯ ಸಮ್ಮಿಶ್ರ ಸರ್ಕಾರ 2018–19 ಬಜೆಟ್‌ನಲ್ಲಿ ಮಾಧ್ಯಮಿಕ ಶಾಲೆಗಳು ಹಾಗೂ ಎಲ್‌ಕೆಜಿ, ಯುಕೆಜಿಯಲ್ಲಿ ಅಂಗನವಾಡಿ ಕೇಂದ್ರದಲ್ಲಿ 3 ವರ್ಷದಿಂದ 10 ವರ್ಷದೊಳಗೆ ಇಂಗ್ಲಿಷ್‌ನ್ನು ಜೂನ್‌ದಲ್ಲಿ ಜಾರಿಗೆ ತರುವುದನ್ನು ನಮ್ಮ ಸಂಘಟನೆಗಳು ವಿರೋಧಿಸಿವೆ. ಎಳೆ ವಯಸ್ಸಿನ ಮಕ್ಕಳಿಗೆ ಇಂಗ್ಲಿಷ್ ಹೇಳುವುದನ್ನು ಖಂಡಿಸುತ್ತೇವೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಫಲಾನುಭವಿ ಆಗುವ ಹಕ್ಕನ್ನು ಕಳಚಿ ಹಾಕುವುದು ಮತ್ತು ರಾಜ್ಯದಲ್ಲಿರುವ 67 ಸಾವಿರ ಅಂಗನವಾಡಿ ಕೇಂದ್ರವನ್ನು ಮುಚ್ಚಿ ಹಾಕುವಲ್ಲಿ ಸರ್ಕಾರ ನಿರ್ಧರಿಸುವ ಸುಮಾರು 1 ಲಕ್ಷ 35 ಸಾವಿರ ಉದ್ಯೋಗಿಗಳನ್ನು ಕಳಿಯುವ ಸಂಚು ಇದರಲ್ಲಿ ಇದೆ. ಮೊದಲು ಈ ಅವಧಿಯಲ್ಲಿ ಶೇ.40 ರಷ್ಟು ದೌಹಿಕ ಹಾಗೂ ಶೇ.88 ರಷ್ಟು ಮಾನಸಿಕ ಬೆಳವಣಿಗೆ ಸಾಧಿಸಲಿದೆ. ಕನ್ನಡ ಭಾಷೆಯ ಮೇಲೆ ದಾಳಿ ಮಾಡಿದೆ. ಇಂಗ್ಲಿಷ್‌ನಲ್ಲಿ ನಡೆಸುತ್ತಿರುವುದನ್ನು ಖಂಡಿಸುತ್ತೇವೆ ಎಂದರು.

ಅಂಗನವಾಡಿ ನೌಕರರ ಸಂಘದ ಭಾರತಿ ವಾಲಿ ಮಾತನಾಡಿ, ಬೌಹುತೇಕ ಬಡವರ ಈ ರಾಜ್ಯದಲ್ಲಿ ಅಪೌಷ್ಟಿಕದಿಂದ ಬಳಲುತ್ತಿದ್ದಾರೆ. ಪೌಷ್ಟಿಕ ಆಹಾರದಿಂದ ಶಿಶು ಅಭಿವೃದ್ಧಿಯನ್ನು ಕಳಚಿ ಹಾಕುವ ಹುನ್ನಾರವಿದೆ ಎಂದರು.

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, ಸರ್ಕಾರವೇ ಕನ್ನಡದ ಮೇಲೆ ಭಾಷಾವಾರ ಪ್ರಾಂತ ಉದ್ದೇಶದಿಂದ ಇಂಗ್ಲಿಷ್ ಹೇರಿ ದಾಳಿ ನಡೆಸುತ್ತಿದ್ದಾರೆ. ಎಳೆ ಮಕ್ಕಳ ಮೇಲೆ ಇಂಗ್ಲಿಷ್ ಹೇರುವುದನ್ನು ಕೈ ಬಿಡಬೇಕೆಂದು ಆಗ್ರಹಿಸಿದರು.

ಪರಶುರಾಮ ಮಂಟೂರ ಮಾತನಾಡಿ, ಭಾರತಿ ವಾಲಿ ರಾಜ್ಯ ಉಪಾಧ್ಯಕ್ಷರು, ಅಣ್ಣಾರಾಯ ಈಳಗೇರ ಜಿಲ್ಲಾಧ್ಯಕ್ಷ, ಸುರೇಖಾ ರಜಪೂತ ಜನವಾದಿ ಮಹಿಳಾ ಸಂಘ ರಾಜ್ಯ ಉಪಾಧ್ಯಕ್ಷೆ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಅಶ್ವಿನಿ ತಳವಾರ, ದಾನಮ್ಮ ಗುಗ್ಗರಿ, ಅಶ್ವಿನಿ ತಳವಾರ, ಶೈಲಾ ಕಟ್ಟಿ, ಶೋಭಾ ಕಾಡೆ, ದಾನಮ್ಮ ಗುಗ್ಗರೆ, ರಾಜಮಾ ನಧಾಪ, ಶಕೀಲಾ ಜಮಾದಾರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಸುನಂದಾ ನಾಯಕ

ಡಾರ್ವಿನ್ 'ಮಂಗನಿಂದ ಮಾನವ' ಎಂದು.... ಪುಟ 16 ರಿಂದ

ಪತ್ತೆಯಾದ ಮಾನವನಿಗೆ 'ಕ್ರೋಮಾಗ್ನನ್ ಮಾನವ' ಎಂದೇ ಹೆಸರಿಸಲಾಗಿದೆ.

ಮಾನವನ ವಿಕಾಸದ ಹಾದಿ

ಮಾನವನು, ಮಾನವನಾಗಿ ರೂಪುಗೊಳ್ಳುವಲ್ಲಿ ಪ್ರಕೃತಿಯ ಅಂದರೆ ಪರಿಸರದ ಪಾತ್ರವಿದೆ. ಯಾವುದೋ ಒಂದು ಘಟ್ಟದಲ್ಲಿ ಹವಾಮಾನದಲ್ಲಿ ಆದ ಬದಲಾವಣೆಯಿಂದ ಕಾಡು ಮಾಯವಾಗಿ ವಿಶಾಲವಾದ ಹಲ್ಲುಗಾವಲುಗಳು ರೂಪುಗೊಂಡವು. ಈ ಘಟ್ಟದಲ್ಲಿ ಮರದ ಮೇಲಿದ್ದ ಮಾನವನ ಪೂರ್ವಜನಾದ ವಾನರ ಮರಬಿಟ್ಟು ಇಳಿದು ಹುಲ್ಲುಗಾವಲಿಗೆ–ಬಯಲಿಗೆ ಬಂದ. ಶತ್ರು ಪ್ರಾಣಿಗಳನ್ನು ದೂರದಿಂದಲೇ ಕಾಣಲು, ತನ್ನ ಆಹಾರವನ್ನು ಕಂಡುಕೊಳ್ಳಲು ಈ ವಾನರ ಕ್ರಮೇಣ ತನ್ನ ಎರಡು ಕಾಲುಗಳ ಮೇಲೆ ಎದ್ದುನಿಲ್ಲಬೇಕಾದ ಸಂದರ್ಭಗಳು ಪದೇ ಪದೇ ಬರುತ್ತಿದ್ದವು. ಇಂತಹ ಕಾಲಘಟ್ಟದಲ್ಲಿ ದೇಹದ ಅಸ್ತಿಪಂಜರದಲ್ಲಿ ಎದ್ದು ನಿಲ್ಲಲು ಅನುಕೂಲಕರ ಬದಲಾವಣೆಗಳು ಕಂಡು ಬಂದ ವಾನರ ಜೀವಿಗಳು ಹೆಚ್ಚು ಹೆಚ್ಚು ಬದುಕಿ ಉಳಿದು ಬೆಳೆದವು. ಇದೇ ರೀತಿಯ ವಿಕಾಸದ ಪ್ರಕ್ರಿಯೆಯಲ್ಲಿ ಕ್ರಮೇಣ ಕ್ರಮೇಣ, ಎರಡು ಕಾಲಿನ ಮೇಲಿನ ನಡಿಗೆ ಆರಂಭವಾದ ಮೇಲೆ ಮುಂಗಾಲುಗಳೇ ಕೈಗಳಾದವು. ಕೈಗಳು ಬಿಡುವಾದವು. ಬಿಡುವಾದ ಕೈಗಳಿಗೆ ಬೇಟೆಯಾಡುವಾಗ ಸತ್ತ ಪ್ರಾಣಿಯ ಯಾವುದೋ ಮೂಳೆಯ ಚೂರೋ, ಒಂದು ಒಣ ಸೌದೆಯೋ, ಚೂಪು ಕಲ್ಲೋ ಆಯುಧವಾಗಿ ದೊರೆಯಿತು. ಹೀಗೆ ಮನುಷ್ಯನು ತನ್ನ ದೇಹದ ಅಂಗವನ್ನಲ್ಲದೇ ಹೊಸದೊಂದು ಸಾಧನವನ್ನು ತನ್ನ ಆಹಾರ ಸಂಪಾದನೆಗಾಗಿ, ತನ್ನ ರಕ್ಷಣೆಗಾಗಿ ಬಳಸಿಕೊಳ್ಳಲು ಆರಂಭಿಸಿದ.

ಕಾಡಿನಲ್ಲಿ ಆಗಾಗ ಹಬ್ಬುವ ಕಾಡ್ಗಿಚ್ಚಿನಲ್ಲಿ ಅರೆಬೆಂದ ಪ್ರಾಣಿಗಳನ್ನು ತಿನ್ನುವುದು ರೂಢಿ ಮಾಡಿಕೊಂಡ ಮಾನವ ಕ್ರಮೇಣ ಕ್ರಮೇಣ ಬೆಂಕಿಯನ್ನು ಪಳಗಿಸುವುದನ್ನು ಕಲಿತ. ಚೂಪು ಕಲ್ಲುಗಳನ್ನು ತಿಕ್ಕಿ, ಉಜ್ಜಿ, ಚಚ್ಚಿ ಕಲ್ಲಿನ ಆಯುಧ ಮಾಡುವ ಕೆಲಸದಲ್ಲಿ ಮನುಷ್ಯನು ಪರಿಶ್ರಮ ಹಾಕುತ್ತಾ ಹಾಕುತ್ತಾ ಅವನ ಜೀವನ ಕ್ರಮ ವಿಕಾಸಗೊಂಡಿತು. ಮನುಷ್ಯನ ಮೆದುಳಿನ ಬೆಳೆವಣಿಗೆಯಲ್ಲಿ ಕಲ್ಲಿನಿಂದ ಆಯುಧ ಮಾಡುವುದು ಮುಂತಾದ ಶ್ರಮ ಮತ್ತು ಪ್ರೋಟೀನ್‌ಯುಕ್ತ ಬೆಂದ ಮಾಂಸಾಹಾರ ಬಹಳ ಮುಖ್ಯ ಪರಿಣಾಮ ಬೀರಿವೆ ಎಂದು ಈ ವಿಷಯದ ಮೇಲೆ ಆಳವಾದ ಅಧ್ಯಯನ ನಡೆಸಿದ ಫೆಡರಿಕ್ ಎಂಗೆಲ್ಸ್‌ರವರು ಪ್ರತಿಪಾದಿಸಿದ್ದಾರೆ. 'ವಾನರನಿಂದ ಮಾನವನವರೆಗೆ' ಎಂಬ ಕೃತಿಯಲ್ಲಿ ಈ ಕುರಿತು ವಿವರಿಸಿದ್ದಾರೆ.

ಸಾಮೂಹಿಕವಾಗಿ ಬೇಟೆಯಾಡುವಾಗ ತನಗಿಂತ ಹೆಚ್ಚು ಬಲಿಷ್ಟವಾದ ಪ್ರಾಣಿಗಳನ್ನು ಮನುಷ್ಯನು ಮಣಿಸಬೇಕಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಮನುಷ್ಯನು ತನ್ನ ಶಕ್ತಿಯ ಜೊತೆಗೆ ಯುಕ್ತಿಯನ್ನು ಬಳಸಬೇಕಾಗಿ ಬಂತು. ಹೀಗೆ ಮನುಷ್ಯನಿಗೆ ತನ್ನ ಮಿದುಳನ್ನು ಹೆಚ್ಚು ಹೆಚ್ಚು ಬಳಸುವ ಅಗತ್ಯ ಬಂದಿತು. ಬೇಟೆ, ಆಹಾರ ಸಂಗ್ರಹಣೆಯಂತಹ ಸಾಮೂಹಿಕ ಕ್ರಿಯೆಗಳಲ್ಲಿ ಮನುಷ್ಯನಿಗೆ ಭಾಷೆಯ ಅಗತ್ಯ ಕೂಡ ಬಂದಿತು. ನಾನಾ ಬಗೆಯ ಶಬ್ದಗಳಿಗೆ ನಾನಾ ಬಗೆಯ ಅರ್ಥಗಳನ್ನು ಆರೋಪಿಸಿದ. ಹೀಗೆ ಮನುಷ್ಯನಲ್ಲಿ ಭಾಷೆ ಮತ್ತು ಧ್ವನಿಪೆಟ್ಟಿಗೆಯೂ ವಿಕಾಸಗೊಂಡಿತು. ಆಯುಧಗಳಿಂದ ಬೇಟೆ ಸುಲಭವಾಯಿತು. ಹೆಚ್ಚು ಆಹಾರ ದೊರೆಯಿತು. ಬೇಟೆಯಿಂದ ದೊರೆತ ಆಹಾರವನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನುವುದರಿಂದ ಮನುಷ್ಯನ ಜೀರ್ಣ ಕ್ರಿಯೆಯೂ ಹೆಚ್ಚು ಸರಾಗವಾಗುವಂತಾಯಿತು. ಇದರಿಂದ ದೇಹದ ಬೆಳವಣಿಗೆಗೆ ಬೇಕಾದ ಅತ್ಯುತ್ತಮ ಪ್ರೋಟೀನ್ ಅಂಶ ದೇಹಕ್ಕೆ ಹೆಚ್ಚು ಹೆಚ್ಚು ದೊರಕುವಂತಾಯಿತು. ಆಯುಧಗಳ ಬಳಕೆಯಲ್ಲಿ ಕೈಬೆರಳುಗಳು ಮತ್ತಷ್ಟು ಮತ್ತಷ್ಟು ನಿಖರತೆ ಸಾಧಿಸುತ್ತಾ ಬಂದವು. ಮನುಷ್ಯ ಹಳೆಯ ಶಿಲಾಯುಗ, ನೂತನ ಶಿಲಾಯುಗ, ಕಂಚಿನಯುಗ, ಕಬ್ಬಿಣದ ಯುಗಗಳನ್ನು ದಾಟಿ ಈಗ 'ಆಧುನಿಕ ಮಾನವ'ನಾಗಿ ನಿಂತಿದ್ದಾನೆ.

ಡಾರ್ವಿನ್ನನು 'ಮಂಗನಿಂದ ಮಾನವ' ಎಂದಿಲ್ಲ.

ಜೀವ ವಿಕಾಸವನ್ನು ವಿವರಿಸುವಾಗ ಬಹಳ ಜನಪ್ರಿಯವಾಗಿ 'ಮಂಗನಿಂದ ಮಾನವ' ಎಂದು ಹೇಳುವುದು ರೂಢಿಯಾಗಿದೆ. ಇದೇ ಹೇಳಿಕೆಯನ್ನು ಹಿಡಿದುಕೊಂಡು ಕೆಲವರು "ಮಂಗನಿಂದ ಮಾನವ ವಿಕಾಸಗೊಂಡಿದ್ದು ಎನ್ನುವುದಾದರೆ, ಮಂಗಗಳು ಈಗಲೂ ಹಾಗೆಯೇ ಇವೆಯಲ್ಲಾ ??"ಎಂದು ಪ್ರಶ್ನಿಸುತ್ತಾರೆ ಮತ್ತು ಇಡೀ ವಿಕಾಸವಾದದ ಸಿದ್ಧಾಂತವೇ ತಪ್ಪೇನೋ ಎನ್ನುವಂತಹ ಭಾವನೆಯನ್ನು ಬಿತ್ತುತ್ತಾರೆ. ಆದರೆ ಚಾರ್ಲ್ಸ್ ಡಾರ್ವಿನ್ ಎಲ್ಲಿಯೂ 'ಮಂಗನಿಂದ ಮಾನವ' ಎಂದು ಹೇಳಿಲ್ಲ. ಇದನ್ನು ಎಲ್ಲರೂ ಗಮನಿಸಬೇಕು. "ಮಾನವರೂ, ಈ ಕಪಿಗಳೂ ಹಿಂದಿನ ಯಾವುದೋ ಒಂದು ಮೂಲ ಪ್ರಾಣಿಯಿಂದ ವಿಕಾಸಗೊಂಡಿರಬಹುದೇ?" ಎಂಬ ಪ್ರಶ್ನೆಯನ್ನು ಆತನು ತನ್ನ "ಜೀವ ಸಂಕುಲಗಳ ಉಗಮ ಮತ್ತು ವಿಕಾಸ" ಎಂಬ ಕೃತಿಯಲ್ಲಿ ಇಟ್ಟಿದ್ದಾನೆ.

ಈ ಸಂಬಂಧದ ಆತನ ಪೂರ್ಣ ಹೇಳಿಕೆಯನ್ನು ಗಮನಿಸಿದರೆ ಮಾತ್ರ ನಮಗೆ ವಿಷಯ ಸರಿಯಾಗಿ ಅರ್ಥವಾಗುತ್ತದೆ. ಆತನ ಹೇಳಿಕೆ ಹೀಗಿದೆ.

"ಮಾನವನ ಅಸ್ತಿಪಂಜರವು ಆಫ್ರಿಕಾದ ಬಾಲವಿಲ್ಲದ ಮಂಗಗಳ, ಚಿಂಪಾಂಜಿ ಮತ್ತು ಗೊರಿಲ್ಲಗಳ ಅಸ್ತಿಪಂಜರವನ್ನು ಹೋಲುತ್ತದೆ. ಬಹುಶಃ ಮಾನವರೂ, ಈ ಕಪಿಗಳೂ ಹಿಂದಿನ ಯಾವುದೋ ಒಂದು ಮೂಲ ಪ್ರಾಣಿಯಿಂದ ವಿಕಾಸಗೊಂಡಿರಬಹುದೇ ? ಆ ಹಿಂದಿನ ಪ್ರಾಣಿಯು ಮಾನವ ಗುಣಗಳನ್ನೂ, ಕಪಿಗುಣಗಳನ್ನೂ ಒಟ್ಟಿಗೇ ಹೊಂದಿರಬಹುದು." ಎಂದು ಡಾರ್ವಿನ್ 1871 ರಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ ಹೇಳಿದ್ದಾನೆ.

ಆಫ್ರಿಕಾ ಖಂಡದಲ್ಲಿ ಮನುಷ್ಯನ ಪೂರ್ವಜರು ವಿಕಾಸಗೊಂಡು ಜಗತ್ತಿನ ನಾನಾ ಭಾಗಗಳಿಗೆ ಹರಡಿರುವುದು ಮತ್ತು ಜಗತ್ತಿನ ಯಾವುದೇ ಖಂಡದ ಯಾವುದೇ ಜನಾಂಗದ ಯಾವುದೇ ಬಣ್ಣದ ಮನುಷ್ಯನಿರಲಿ ಆತನ ಮೂಲ ಒಂದೇ, ಅದು ಆಫ್ರಿಕಾ ಖಂಡದಲ್ಲಿ ವಿಕಾಸಗೊಂಡ ಮಾನವ ಎಂಬುದು ಈಗ ಆಧುನಿಕ ವಿಜ್ಞಾನ ಕಂಡುಕೊಂಡ ಸತ್ಯವಾಗಿದೆ.

ಮನುಷ್ಯನ ಮೈ ಬಣ್ಣ ಮತ್ತು ಜನಾಂಗೀಯ ಲಕ್ಷಣಗಳಲ್ಲಿ ಭಿನ್ನತೆ

ಜಗತ್ತಿನ ನಾನಾ ಖಂಡಗಳಲ್ಲಿ, ನಾನಾ ಭಾಗಗಳಲ್ಲಿ ವಾಸಿಸುವ ಮನುಷ್ಯರಲ್ಲಿ ಕಪ್ಪು, ಕಂದು, ಬಿಳಿ ಹೀಗೆ ನಾನಾ ಬಣ್ಣಗಳಿದ್ದರೂ, ಮನುಷ್ಯರಲ್ಲಿ ಹತ್ತಾರು ಜನಾಂಗಗಳಿದ್ದರೂ ಸಹ ಮನುಷ್ಯನ ಮೂಲ ಒಂದೇ. ಭೂಮಿಯ ಮೇಲೆ ಉಷ್ಣವಲಯದಲ್ಲಿ ವಾಸಿಸುವ ಮನುಷ್ಯನ ದೇಹದಲ್ಲಿ ಸೂರ್ಯನ ಕಿರಣಗಳಿಂದ ದೇಹವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಚರ್ಮದಲ್ಲಿ 'ಮೆಲನಿನ್' ಅಂಶ ಹೆಚ್ಚಾಗಿ, ಅಲ್ಲಿ ವಾಸಿಸುವ ಮನುಷ್ಯನ ಚರ್ಮದ ಬಣ್ಣ ಕಪ್ಪಾಗಿದೆ. ಶೀತವಲಯಗಳಲ್ಲಿ ವಾಸಿಸುವ ಮನುಷ್ಯನ ಚರ್ಮ ಬೆಳ್ಳಗಾಗಿದೆ. ಇಷ್ಟೆ ವ್ಯತ್ಯಾಸ. ಮನುಷ್ಯನ ದೇಹದ ಎತ್ತರ ದಪ್ಪ ಇತರೆ ಗುಣಲಕ್ಷಣಗಳೂ ಸಹ ಅಷ್ಟೆ. ಮನುಷ್ಯ ವಾಸಿಸುವ ಪ್ರದೇಶದ ಪರಿಸರಕ್ಕೆ ತಕ್ಕಂತೆ ಬದಲಾವಣೆಗಳಾಗಿವೆ.

ಈ ಎಲ್ಲ ವೈಜ್ಞಾನಿಕ ವಾಸ್ತವ ಸತ್ಯಗಳಿಂದ ಮನುಷ್ಯ ಇವತ್ತು ಹಲವು ಅಮೂಲ್ಯ ಪಾಠಗಳನ್ನು ಕಲಿಯಬೇಕಿದೆ. ದೇಶ ದೇಶಗಳ ನಡುವಿನ ಗೋಡೆಯನ್ನು ಎಳೆದಿರುವುದು ಮನುಷ್ಯನೇ ಹೊರತು ಪ್ರಕೃತಿಯಲ್ಲ. ಸಾವಿರ ವರ್ಷಗಳ ಹಿಂದೆಯೇ 'ಮನುಜ ಕುಲ ತಾನೊಂದೇ ವಲಂ'– ಎಂದು ಸಾರಿದ ಕನ್ನಡದ ಆದಿಕವಿ ಪಂಪನ ಘೋಷಣೆ ನಮ್ಮೆಲ್ಲರ ಮನಸ್ಸಿನ ಆಳಕ್ಕೆ ಇಳಿಯಬೇಕಿದೆ. ಕಳಿಂಗ ಯುದ್ದದಲ್ಲಿ ಆದ ಅಪಾರ ಸಾವು ನೋವುಗಳನ್ನು ಕಂಡು ಯುದ್ಧ ವಿರೋಧಿಯಾದ ನಿಲುವು ತಳೆದ ಮೌರ್ಯ ಸಾಮ್ರಾಟ ಅಶೋಕನ ಆದರ್ಶ ಇಂದು ನಮ್ಮೆಲ್ಲರದಾಗಬೇಕಿದೆ. ಯುದ್ಧದಿಂದಾಗುವ ಸಾವು ನೋವುಗಳನ್ನು ಹಿಂಸೆಯನ್ನು ನಿವಾರಿಸಬೇಕಿದೆ.

ಇಂದು ಜಗತ್ತಿನಲ್ಲಿರುವ 700 ಕೋಟಿ ಮೀರಿದ ಜನಸಂಖ್ಯೆಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ ಇತ್ಯಾದಿ ನೀಡುವಂತಹ ಸಂಪನ್ಮೂಲವು ಇಂದು ಭೂಮಿಯ ಮೇಲಿದೆ. ಆದರೆ ಈ ಸಂಪತ್ತಿನ ಮೇಲೆ ಕೆಲವೇ ದೇಶಗಳ, ಅದರಲ್ಲೂ ಕೆಲವೇ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ, ಶ್ರೀಮಂತರ ಹಿಡಿತ ಏರ್ಪಟ್ಟಿದೆ. ಜಗತ್ತಿನ ಉದ್ದಗಲ ಹಸಿವು, ಬಡತನ, ಅನಕ್ಷರತೆ, ರೋಗ, ರುಜಿನಗಳು, ಹಿಂಸೆ, ಅಶಾಂತಿ, ಯುದ್ದಗಳು ತಾಂಡವವಾಡುತ್ತಿವೆ. ಜಗತ್ತಿನ ಒಂದೊಂದು ದೇಶವೂ ಮಿಲಿಟರಿಗಾಗಿ, ಶಸ್ತ್ರಾಸ್ತ್ರಗಳು, ಯುದ್ಧೋಪಕರಣಗಳಿಗಾಗಿ ಮಾಡುತ್ತಿರುವ ವೆಚ್ಚದಲ್ಲಿ ಇಡೀ ಜಗತ್ತಿನ ಬಡವರನ್ನು ಬಡತನದ ರೇಖೆಯಿಂದ ಮೇಲೆತ್ತಿ ಅವರನ್ನು ಸ್ಥಿತಿವಂತರನ್ನಾಗಿ ಮಾಡಬಹುದು.

ಕನಿಷ್ಟ 5,000 ವರ್ಷಗಳ ಲಿಖಿತ ಇತಿಹಾಸವುಳ್ಳ ಮಾನವನ ಚರಿತ್ರೆಯಲ್ಲಿ ಬುಡಕಟ್ಟು, ಜನಾಂಗ, ಜಾತಿ, ಧರ್ಮ, ದೇವರು, ಪ್ರದೇಶ, ಭಾಷೆ, ಬಣ್ಣಗಳ ಮೇಲ್ಮೆಗಾಗಿ ನಡೆದ ಯುದ್ಧಗಳೆಷ್ಟೋ ಲೆಕ್ಕವಿಟ್ಟವರಿಲ್ಲ. ಈ ಅಸಂಖ್ಯಾತ ಯುದ್ದಗಳಲ್ಲಿ, ಘರ್ಷಣೆಗಳಲ್ಲಿ ಪ್ರಾಣತೆತ್ತ ಜೀವಗಳೆಷ್ಟೋ ಬರೆದಿಟ್ಟವರಿಲ್ಲ.

ಸುಮಾರು 70 ಸಾವಿರ ವರ್ಷಗಳ ಹಿಂದಕ್ಕೆ ಹೋದರೆ ಭಾರತದ ಉಪಖಂಡದಲ್ಲಿ ಮನುಷ್ಯವಾಸದ ಯಾವ ಕುರುಹುಗಳೂ ದೊರೆಯುವುದಿಲ್ಲ. ಬಾರತದ ಆದಿವಾಸಿಗಳು, ದ್ರಾವಿಡರು, ಆರ್ಯರು, ಭಾರತದಲ್ಲಿ ನೆಲೆಸಿರುವ ನಾನಾ ಜನಾಂಗಗಳು ಎಲ್ಲರೂ ಸಹ ಮೂಲತಃ ಭಾರತದ ಉಪಖಂಡಕ್ಕೆ ವಲಸೆ ಬಂದವರೆ. ಎಲ್ಲರೂ ಒಂದೇ ಮಾರ್ಗವಾಗಿಯೂ ಬಂದಿಲ್ಲ. ಒಂದೇ ಕಾಲಘಟ್ಟದಲ್ಲಿಯೂ ಬಂದಿಲ್ಲ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ಮಾರ್ಗಗಳಲ್ಲಿ ಭಾರತಕ್ಕೆ ಈ ಜನರು ಪ್ರವೇಶಿಸಿದ್ದಾರೆ. ಇಲ್ಲಿ ನೆಲೆಸಿ ಬದುಕು ರೂಪಿಸಿಕೊಂಡಿದ್ದಾರೆ. ಜೈವಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಬೆರೆತಿದ್ದಾರೆ. ಜನರು ಇಂತಹ ಚಾರಿತ್ರಿಕ ಸತ್ಯವನ್ನು ಅರಿತರೆ ಮನುಷ್ಯ ಮನುಷ್ಯರ ನಡುವೆ ಬೇಧವನ್ನುಂಟು ಮಾಡುವ ಯಾವ ಶಕ್ತಿಗಳೂ ಭಾರತದ ಜನರನ್ನು ಜಾತಿ, ಮತ, ಬಣ್ಣ, ಭಾಷೆ, ಪ್ರದೇಶಗಳ ಆಧಾರದಲ್ಲಿ ವಿಭಜಿಸಲು ಸಾಧ್ಯವಿಲ್ಲ.

ಕುವೆಂಪು ಅವರ 'ಮನುಜ ಮತ–ವಿಶ್ವಪಥ' ಎಂಬ ವಿಶ್ವಮಾನವ ಸಂದೇಶದ ಸಾರಾಂಶವನ್ನು ನಾವು ಅರಿಯಬೇಕು. ಜಗತ್ತು ಹಿಂಸೆ, ಯುದ್ದಗಳಿಂದ ಮುಕ್ತವಾಗಿ ಶಾಂತಿ, ಸಹಕಾರ, ಸೌಹಾರ್ದತೆಯ ತಾಣವಾಗಬೇಕು. ಇಡೀ ಮನುಜ ಕುಲ ಜಗತ್ತಿನಲ್ಲಿ ಸುಖ ಶಾಂತಿಯಿಂದ ನೆಮ್ಮದಿಯಾಗಿ ಬದುಕುವಂತಾಗಬೇಕು. ಇರುವ ಒಂದೇ ಭೂಮಿಯನ್ನೂ ಸಹ ಎಲ್ಲರೂ ಕೂಡಿ ಕಾಪಾಡಿಕೊಳ್ಳಬೇಕು.

ಅಮೆರಿಕಾಕ್ಕೆ ‘ಹುವಾವೇ’ ಬಗ್ಗೆ ಯಾಕಿಷ್ಟು ಭಯ?

ಜಗದ ಸುತ್ತ
ನಾಗರಾಜ ನಂಜುಂಡಯ್ಯ

ಚೀನಾವು ತನ್ನ ದೇಶಿಯ ಮಾರುಕಟ್ಟೆಯನ್ನು ರಕ್ಷಿಸಲು ಮತ್ತು ಹುವಾವೇ ಯಂತಹ ತನ್ನ ‘ಚಾಂಪಿಯನ್ ಕಂಪನಿ’ ಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಲು, ಯುಎಸ್ ನ ಮತ್ತು ಅದರ ಮಿತ್ರರ ಆಕ್ರಮಣಗಳನ್ನು ಪ್ರತಿರೋಧಿಸಲು, ಶಕ್ತವಾಗುವ ತಾಂತ್ರಿಕ ಸಾರ್ವಭೌಮತ್ವವನ್ನು ಅಭಿವೃದ್ಧಿ ಪಡಿಸಿಕೊಂಡಿದೆ. ಯುಎಸ್ ನ ಯಾವುದೇ ತಾಂತ್ರಿಕ ಸಮರವನ್ನು ಎದುರಿಸಲು, ಸಾಮ್ರಾಜ್ಯಶಾಹಿ ಅಜೆಂಡಾ ಹಾಗೂ ಯುಎಸ್ ನ ತಂತ್ರಜ್ಞಾನ ಅಧಿಪತ್ಯವನ್ನು ಹಿಮ್ಮೆಟ್ಟಿಸಲು ಚೀನಾವು ಸಜ್ಜಾಗುತ್ತಿದೆ. ಇದೇ ಯು.ಎಸ್. ಸರಕಾರ ಹುವಾವೇ ಬಗ್ಗೆ ಇಷ್ಟು ಆತಂಕಕ್ಕೆ ಕಾರಣ. ಅಮೆರಿಕದ ಜಾಗತಿಕ ಅಧಿಪತ್ಯದೊಂದಿಗೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಅಧಿಪತ್ಯವೂ ತಳುಕು ಹಾಕಿಕೊಂಡಿದೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಚೀನಾದ "ಹುವಾವೇ" ಎಂಬ ಟೆಲಿಕಾಂ ಕಂಪನಿಯು 5ಜಿ ನೆಟ್‌ವರ್ಕ್ ಕ್ಷೇತ್ರದಲ್ಲಿ ಪ್ರಮುಖ ಕಂಫನಿಯಾಗಿ ಹೊಮ್ಮಿದೆ. ಹುವಾವೇಯ 5ಜಿ ನೆಟ್‌ವರ್ಕ್ ಉಪಕರಣಗಳ ಜಾಗತಿಕ ಮಾರುಕಟ್ಟೆಗೆ ವಿಸ್ತರಣೆಯನ್ನು ನಿರ್ಬಂಧಿಸಲು ಅಮೆರಿಕಾವು ಅನೇಕ ಉಗ್ರ ಕ್ರಮಗಳನ್ನು ಇತ್ತೀಚೆಗೆ ಕೈಗೊಂಡಿದೆ. 5ಜಿ ನೆಟ್‌ವರ್ಕ್ ಉಪಕರಣಗಳ ತಯಾರಿಗೆ ಅಗತ್ಯವಾದ ಪ್ರಮುಖವಾದ ಬಿಡಿಭಾಗಗಳು ಮತ್ತು ಸಾಫ್ಟ್‌ವೇರ್ ಗಳನ್ನು ನಿರಾಕರಿಸುವ ಪ್ರಯತ್ನಗಳನ್ನು ಮಾಡುವ ಮೂಲಕ ಹುವಾವೇಯ ಮುಖ್ಯ ವ್ಯವಹಾರವನ್ನು ಪರಿಣಾಮಕಾರಿಯಾಗಿ ದುರ್ಬಲಗೊಳಿಸಲು ಅಮೆರಿಕಾ ಕಾರ್ಯ ಪ್ರವೃತ್ತವಾಗಿದೆ. ಹಿಂದೆನೂ ಹುವಾವೇ ವಿರುದ್ಧ ಹಲವು ಕ್ರಮಗಳನ್ನು ಕೈಗೊಂಡಿತ್ತು. ಅವು ಪ್ರಮುಖವಾಗಿ ವಿವಿಧ ದೇಶಗಳಲ್ಲಿ ಹುವಾವೇ ಪ್ರವೇಶವನ್ನು ನಿರ್ಬಂಧಿಸುವ ಗುರಿಯನ್ನು ಹೊಂದಿದ್ದವು. ಹುವಾವೇ ಕಂಪನಿಯ ವಿರುದ್ದ ಅಮೆರಿಕದ ಕ್ರಮಗಳಿಂದ ಚೀನಾದ ಮೇಲೆ ಅದು ತಾಂತ್ರಿಕ ಸಮರವನ್ನೇ ಸಾರಿದಂತಾಗಿದೆ.

ಹುವಾವೇ ವಿಶ್ವದಲ್ಲೇ ಅತಿ ದೊಡ್ಡ (ನಂಬರ್ 1) ಟೆಲಿಕಾಂ ಉಪಕರಣಗಳ ತಯಾರಕ ಮತ್ತು ಮೊಬೈಲ್ ಎರಡನೆಯ ಅತಿ ದೊಡ್ಡ ಮೊಬೈಲ್ ಫೋನ್‌ಗಳ ತಯಾರಕ ಸಂಸ್ಥೆಯಾಗಿದೆ. ಇದು 5ಜಿ ತಂತ್ರಜ್ಞಾನದಲ್ಲಿ ಜಾಗತಿಕ ನಾಯಕ ಮತ್ತು ಟೆಕ್ ವಲಯದಲ್ಲಿ ಅಮೆರಿಕಾದ ಅಧಿಪತ್ಯಕ್ಕೆ ಗಮನಾರ್ಹ ಸವಾಲನ್ನು ಒಡ್ಡುವ ಸಂಸ್ಥೆಯಾಗಿ ಬೆಳೆದಿದೆ. ಆದ್ದರಿಂದಲೇ, ಇದನ್ನು ಅಮೆರಿಕಾಕ್ಕೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ, 5 ಜಿ ನೆಟ್‌ವರ್ಕ್ ಜಗತ್ತಿನ ಜನಜೀವನದ ಪ್ರತಿಯೊಂದು ವಿಚಾರ ಮತ್ತು ಅಂಶಗಳ ಮೇಲೂ ತನ್ನ ಅಪಾರ ಪ್ರಭಾವ ಬೀರಲಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ತನ್ನ ಪಾರಮ್ಯವನ್ನು ಸ್ಥಾಪಿಸುವುದು ಅದರ ಸಾಮ್ರಾಜ್ಯಶಾಹಿ ಕಾರ್ಯಸೂಚಿಯ ಅಗತ್ಯದ ಭಾಗವಾಗಿದೆ. ಅದಕ್ಕೆ ಹುವಾವೇ ಸಂಸ್ಥೆಯು ಈ ಕ್ಷೇತ್ರದಲ್ಲಿ ಅಡ್ಡವಾಗಿ ನಿಲ್ಲುತ್ತದೆ. ಹೀಗಾಗಿ ಚೀನಾದ ಈ ಹುವಾವೇ ಟೆಕ್ ದೈತ್ಯ ಸಂಸ್ಥೆಯ ಅಭಿವೃದ್ಧಿಯನ್ನು ಅಮೆರಿಕಾ ಎಂದಿಗೂ ಸಹಿಸುವುದಿಲ್ಲ. ಇದನ್ನು ನೆಲ ಸಮ ಮಾಡಲೇ ಬೇಕೆಂದು ಎಲ್ಲಾ ತರದ ಒಳಸಂಚುಗಳ ಸಮರವನ್ನು ನಡೆಸಲು ಆರಂಭಿಸಿದೆ.

ಪ್ರಮುಖ ವಾಗಿ ಹುವಾವೇ ವಿರುದ್ದ ಎರಡು ರೀತಿಯಲ್ಲಿ ತನ್ನ ಆಕ್ರಮಣವನ್ನು ನಡೆಸಲು ಸಜ್ಜಾಗಿದೆ. ಇತ್ತೀಚೆಗೆ, ಅಮೆರಿಕಾದ ವಾಣಿಜ್ಯ ಇಲಾಖೆಯು ಎರಡು ಬಗೆಯ ಉಗ್ರವಾದ ನಿರ್ಬಂಧ ಕ್ರಮಗಳನ್ನು ಹುವಾವೇ ವಿರುದ್ದ ಘೋಷಿಸಿದೆ.


ಅದರಲ್ಲಿ, ಮೊದಲನೆಯದು, ಹುವಾವೇ ತಯಾರು ಮಾಡುವ ಮೊಬೈಲ್ ಗಳು ಮತ್ತು 5ಜಿ ನೆಟ್ ವರ್ಕ್ ಉಪಕರಣಗಳಿಗೆ, ಯುಎಸ್ ನ ಟೆಕ್ ಸಂಸ್ಥೆ ಗಳು ಸರಬರಾಜು ಮಾಡುವ ಎಲ್ಲಾ ಬಗೆಯ ಬಿಡಿ ಭಾಗಗಳನ್ನು (ಮೂಲ ‘ಚಿಪ್ ಸೆಟ್’ ಗಳು ಮತ್ತಿತರ ಹಾರ್ಡ್‌ವೇರ್, ಸಾಫ್ಟ್ ವೇರ್) ತಡೆಗಟ್ಟುವುದು. ಎರಡನೆಯದು, ಕೆಲವು ದಿನಗಳ ಹಿಂದೆಯಷ್ಟೇ, ಆಂಡ್ರಾಯ್ಡ್ ಸಾಫ್ಟ್‌ವೇರ್ ಮತ್ತು ಇದಕ್ಕೆ ಸಂಬಂಧಿಸಿದ ಮತ್ತಿತರ ಗೂಗಲ್ ಸೇವೆಗಳನ್ನು ಹುವಾವೇ ಮೊಬೈಲುಗಳಲ್ಲಿ ಬಳಸಲು ನಿರ್ಬಂಧಗಳನ್ನು ಹೇರುವ ಘೋಷಣೆಯನ್ನು ಗೂಗಲ್ ಮೂಲಕ ಮಾಡಿರುವುದು. ಇದರಿಂದಾಗಿ,



ಆಂಡ್ರಾಯ್ಡ್ ಮತ್ತು ಇತರ ಗೂಗಲ್ ಸೇವೆಗಳಿಗೆ ಪರ್ಯಾಯ ಪರಿಸರ ವ್ಯವಸ್ಥೆಯನ್ನು ಹುವಾವೇ ಮಾಡಿಕೊಳ್ಳಬೇಕಾಗಿದೆ. ಈ ಎರಡೂ ಕ್ರಮಗಳು ಹುವಾವೇ ಮೊಬೈಲ್ ಗಳು ಮತ್ತು 5ಜಿ ನೆಟ್ ವರ್ಕ್ ಉಪಕರಣಗಳ ಉತ್ಪಾದನೆ, ಪೂರೈಕೆ ಮತ್ತು ಮಾರುಕಟ್ಟೆ ವಿಸ್ತರಣೆಗೆ ತೀವ್ರ ಸವಾಲೊಡ್ಡಲಿವೆ.


ಕಳೆದ ಡಿಸೆಂಬರ್ ನಲ್ಲಿ ಹುವಾವೇ ಸಿ.ಎಫ್.ಒ. ಮೆಂಗ್ ವನ್ಝೌರನ್ನು ಯುಎಸ್ ಅಧಿಕಾರಿಗಳ ಆಜ್ಞೆಯ ಮೇರೆಗೆ ಕೆನಡಾದಲ್ಲಿ ಬಂಧಿಸಲಾಗಿತ್ತು. ಇರಾನ್ ಮೇಲೆ ಇತ್ತೀಚೆಗೆ ಯು.ಎಸ್. ತೆಗೆದು ಕೊಂಡ ನಿರ್ಬಂಧಗಳನ್ನು ಪಾಲಿಸದಿರುವ ಹಿನ್ನೆಲೆಯಲ್ಲಿ ಚೀನಾದ ಮೇಲೆ ಒತ್ತಡ ಹೇರಲು ಅಮೆರಿಕಾ ಕೈಗೊಂಡಿರುವ ಕ್ರಮ ಇದಾಗಿರಬಹುದೆಂದು ಅನೇಕ ವಿಶ್ಲೇಷಕರ ಅಭಿಪ್ರಾಯವಾಗಿತ್ತು.

ಆದಾಗ್ಯೂ, ಹುವಾವೇ ಮತ್ತು ಚೀನಾದ ಇನ್ನಿತರೆ ಟೆಲಿಕಾಂ ಕಂಪನಿಗಳ ವಿರುದ್ದ ಯುಎಸ್ ನ ನಿರ್ಬಂಧಗಳು, ಡೊನಾಲ್ಡ್ ಟ್ರಂಪ್ ನ ಇರಾನ್ ಮೇಲಿನ ನ್ಯೂಕ್ಲಿಯರ್ ಒಪ್ಪಂದ ದಿಂದ ಹೊರ ಬರುವ ನಿರ್ಧಾರದ ಬಹಳ ಮೊದಲೇ ಆರಂಭವಾಗಿವೆ. ಅನೇಕ ವರ್ಷಗಳಿಂದ, ಟೆಲಿಕಾಂ ಕ್ಷೇತ್ರದಲ್ಲಿ, ವಿಶೇಷವಾಗಿ 5ಜಿ ನೆಟ್‌ವರ್ಕ್ ತಂತ್ರಜ್ಞಾನದಲ್ಲಿ, ಹುವಾವೇ ಯುಎಸ್ ಕಂಪನಿಗಳಿಗಿಂತ ಮುಂದೆ ಇದ್ದವು. ಈ ಹಿಂದೆ, ಅಮೆರಿಕದ ಒತ್ತಡಕ್ಕೆ ಮಣಿದು, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ದೇಶಗಳು ಹುವಾವೇ ಯನ್ನು 5ಜಿ ನೆಟ್‌ವರ್ಕ್ ಉಪಕರಣಗಳ ಪ್ರವೇಶವನ್ನು ನಿರ್ಬಂಧಿಸಲಾಗಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಆದಾಗ್ಯೂ, ಇದೀಗ ಚೀನಾದ ಈ ದೈತ್ಯ ಹುವಾವೇ ಯ ತಂತ್ರಜ್ಞಾನ ಜಗತ್ತಿನಲ್ಲಿ ಹರಡುತ್ತಿರುವುದು ಅಮೆರಿಕಾದ ಆಂತಕಕ್ಕೆ ಮೂಲ ಕಾರಣವಾಗಿದೆ.



ಹುವಾವೇ ತಂತ್ರಜ್ಞಾನವು "ಭದ್ರತಾ ದೃಷ್ಟಿಯಿಂದ ಅಪಾಯಕಾರಿ" ಎಂದು ಯುಎಸ್ ವಾದಿಸುತ್ತದೆ.. ಆದರೆ ಸಿಸ್ಕೊ ನಂತಹ ಯು.ಎಸ್. ಕಂಪನಿಗಳು ತಯಾರಿಸಿದ ನೆಟ್‌ವರ್ಕ್ ಉಪಕರಣಗಳ ಹಿಂಬಾಗಿಲಿನಿಂದ, ನಿರಂತರವಾಗಿ ಅಮೆರಿಕ ಗುಪ್ತ ಮಾಹಿತಿಗಳನ್ನು ಪಡೆಯುತ್ತಿತ್ತು ಎಂದು ಎಡ್ವರ್ಡ್ ಸ್ನೋಡೆನ್ನ್ ಬಯಲು ಮಾಡಿದ್ದು ಇಲ್ಲಿ ನೆನಪಿಸಿಕೊಂಡರೆ, ಅಮೆರಿಕ ಈ ಬಗ್ಗೆ ದೂರುವುದು ಜೋಕ್ ಎನ್ನಬಹುದು.

ಹುವಾವೇ ಪ್ರಾಬಲ್ಯವನ್ನು ತಡೆಹಿಡಿಯುವ ಯುಎಸ್ ಯೋಜಿಸಿರುವ ನಿರ್ಬಂಧಗಳಿಂದ, ಅದರ ಚಿಪ್ ತಯಾರಿಕಾ ಮತ್ತು ಇತರ ಕಂಪನಿಗಳಿಗೆ ವಾರ್ಷಿಕವಾಗಿ ರಫ್ತು ಆದಾಯದಲ್ಲಿ 11 ಬಿಲಿಯನ್ ಡಾಲರ್ ನಷ್ಟು ನಷ್ಟ ಉಂಟಾಗುತ್ತದೆ ಎಂದು ಅಂದಾಜಿಸಲಾಗಿದೆ. ಇದು ಪ್ರಪಂಚದಾದ್ಯಂತ 5 ಜಿ ನೆಟ್ ವರ್ಕ್ ನ ತಂತ್ರಜ್ಞಾನದ ಒಟ್ಟಾರೆ ಅಭಿವೃದ್ಧಿಯ ಮೇಲೆ ಅಗಾಧವಾದ ದುಷ್ಪರಿಣಾಮ ಬೀರುತ್ತದೆ. ಆದಾಗ್ಯೂ, ತನ್ನ ಮಿತ್ರ ರಾಷ್ಟಗಳ ಮಾರುಕಟ್ಟೆಗಳಲ್ಲಿ, ಪ್ರಮುಖವಾಗಿ ಯುರೋಪಿಯನ್ ಒಕ್ಕೂಟದ ರಾಷ್ಟಗಳಲ್ಲಿ, ಹುವಾವೇಯ ಉತ್ಕೃಷ್ಟ 5ಜಿ ತಂತ್ರಜ್ಞಾನದ ಬೇರೂರುವ ಸಾಧ್ಯತೆಯ ಬಗ್ಗೆ ಯುಎಸ್ ಹೆಚ್ಚು ಚಿಂತಿತ ಗೊಂಡಿದೆ. ಪಶ್ಚಿಮ ರಾಷ್ಟಗಳು ತಮ್ಮತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು, ಬಡ ರಾಷ್ಟಗಳಿಗೆ ಮಾತ್ರ ಬೋಧಿಸುವ



ತಮ್ಮ ಮುಕ್ತ ವ್ಯಾಪಾರ ನಿಯಮಗಳನ್ನು ಉಲ್ಲಂಘನೆ ಮಾಡಲು ಹಿಂಜರಿಯುವುದಿಲ್ಲ ಎಂಬುದನ್ನು ಮತ್ತೆ ಇಲ್ಲಿ ಯುಎಸ್ ಸಾಬೀತು ಪಡಿಸುತ್ತಿದೆ.

ಆದರೆ, ಇತ್ತೀಚಿನ ಗೂಗಲ್ ಕ್ರಮಗಳಿಗೂ "ರಾಷ್ಟ್ರೀಯ ಭದ್ರತಾ" ಅಂಶಗಳಿಗೂ ಯಾವುದೇ ಸಂಬಂಧವಿರುವುದಿಲ್ಲ. ಆದರೆ,ಹುವಾವೇ ಸಂಸ್ಥೆಯಲ್ಲಿ ತಯಾರಿಸಿದ ಮೊಬೈಲ್ ಫೋನ್‌ಗಳನ್ನು ಇನ್ನಿತರೆ ದೇಶಗಳಲ್ಲಿ ದುರ್ಬಲಗೊಳಿಸುವ ಸಲುವಾಗಿಯೇ, ಗೂಗಲ್ ಕ್ರಮಗಳ ಮೂಲಕ ಯುಎಸ್ ಪ್ರಯತ್ನ ಮಾಡುತ್ತಿದೆ. ಗೂಗಲ್ ಕ್ರಮಗಳು ಎಂದರೆ, ಹುವಾವೇ ಫೋನ್ ಗಳನ್ನು ಖರೀದಿಸುವ ವರು ಮತ್ತು ಪ್ರಸ್ತುತ ಮಾಲೀಕರು ಸಹಾ, ಗೂಗಲ್ ನ ಉತ್ಪನ್ನಗಳು ಮತ್ತು ಭದ್ರತಾ ನವೀಕರಣಗಳಿಗೆ ಪ್ರವೇಶವನ್ನು ನಿರಾಕರಿಸಲು ಅಮೆರಿಕಾ ಒತ್ತಾಯ ಹೇರುತ್ತಿದೆ. ಇದರಿಂದಾಗಿ ಆಂಡ್ರಾಯ್ಡ್ ಓಎಸ್, ಜಿ–ಮೇಲ್ ಮತ್ತು ಗೂಗಲ್ ಸ್ಟೋರ್ ನಂತಹ ಉತ್ಪನ್ನ ಗಳ ಮೂಲಕ, ಪ್ರಪಂಚದಾದ್ಯಂತ ಇರುವ ಗೂಗಲ್ ನ ಲಕ್ಷಾಂತರ ಬಳಕೆದಾರ ಹೊಂದಿರುವ ವ್ಯಾಪ್ತಿ ಮತ್ತು ಈ ಹಂತದ ಬೆಳವಣಿಗೆಯಲ್ಲಿ ಹುವಾವೇ ಮೊಬೈಲ್ ಫೋನ್ ವ್ಯವಹಾರಕ್ಕೆ ಭಾರಿ ಹಿನ್ನಡೆಯಾಗುವಂತೆ ಮಾಡುವುದು ಅದರ ಉದ್ದೇಶ.

ಹುವಾವೇ ಸವಾಲುಗಳನ್ನು ಎದುರಿಸಲು ಸಿದ್ದವಾಗಿದೆ. ಕಂಪನಿಯ ಸಂಸ್ಥಾಪಕ ರೆನ್ ಝೆಂಗ್ಫೀ ಯವರು ನಿರ್ಬಂಧಗಳು ಕಂಪನಿಯ ಮುಖ್ಯ ವ್ಯವಹಾರದ ಮೇಲೆ ಪರಿಣಾಮ ಬೀರುವುದಿಲ್ಲ ಎಂಬ ವಿಶ್ವಾಸ ಹೊಂದಿದ್ದಾರೆ. ನಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಮುಂದುವರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಚಿಪ್ ಸೆಟ್ ಗಳನ್ನು ಈಗಾಗಲೇ ಸಾಕಷ್ಟು ಸಂಗ್ರಹಿಸಲಾಗಿದೆ. ಹಾಗೆಯೇ, ಗೂಗಲ್ ಪರಿಸರ ವ್ಯವಸ್ಥೆಗೆ ಪರ್ಯಾಯ ಉತ್ಪನ್ನ ಗಳನ್ನು ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಹೊಸ ಹೂಡಿಕೆಗಳನ್ನು ಮಾಡಲಾಗುತ್ತಿದೆ. ಆದಾಗ್ಯೂ, ಈಗಿರುವ ಬಳಕೆದಾರರ ಮೂಲವನ್ನು ಉಳಿಸಿಕೊಳ್ಳಲು ಹುವಾವೇ ಕಾರ್ಯತಂತ್ರಗಳನ್ನು ನಿಯೋಜಿಸಲು ಪ್ರಯತ್ನಗಳನ್ನು ಕೈಗೊಂಡಿದೆ. ಇದು ಹುವಾವೇ

ವಾಣಿಜ್ಯದ ಮೇಲೆ ಯು.ಎಸ್ ಮತ್ತು ಚೀನಾ ಒಪ್ಪಂದದ ಭಾಗವಾಗಿ, ಹುವಾವೇ ವಿರುದ್ದದ ನಿರ್ಬಂಧ ಕ್ರಮಗಳನ್ನು ಅಮೆರಿಕಾ ಹಿಂಪಡೆಯಬಹುದು ಅಥವಾ ಮುಂದೂಡಬಹುದು ಎಂಬ ಸಾಧ್ಯತೆಗಳು ಇವೆಯಾದಾರೂ ಖಂಡಿತವಾಗಿಯೂ ಇವೆರಡೂ ರಾಷ್ಟಗಳ ನಡುವಿನ ವಾಣಿಜ್ಯ ಸಮರವಂತೂ ನಿಲ್ಲುವುದಿಲ್ಲ ಎನ್ನಲಾಗಿದೆ. ಪ್ರಸ್ತುತ ಮುಖಾಮುಖಿ ಯಲ್ಲಿ ಇಬ್ಬರು ಹಲವಾರು ಪಾಠಗಳನ್ನು ಕಲಿಯ ಬೇಕಾಗಿದೆಯಾದರೂ,. ಮೊದಲಿಗೆ, ಅಮೆರಿಕಾದ ಆರ್ಥಿಕತೆಯ ಮೇಲೆ ಹಾನಿ ಉಂಟಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ, ಚೀನಾವು ಹುವಾವೇ ಟೆಲಿಕಾಂ ತಂತ್ರಜ್ಞಾನದಲ್ಲಿ ಅಮೆರಿಕಾಕ್ಕೆ ಬೆದರಿಕೆಯನ್ನು ಒಡ್ಡಿದೆ ಎಂಬುದು ಸ್ಪಷ್ಟಗೊಂಡಿದೆ. 5ಜಿ ತಂತ್ರಜ್ಞಾನದ ಜೊತೆಗೆ ಆರ್ಟಿಫಿಶಿಲ್ ಇಂಟಲಿಜೆನ್ಸ್ ನಂತಹ ಕ್ಷೇತ್ರಗಳಲ್ಲೂ ಚೀನಾವು ಅಮೆರಿಕಾಕ್ಕಿಂತ ಹೆಚ್ಚಿನ ಮುನ್ನಡೆ ಸಾಧಿಸುವ ಸಾಧ್ಯತೆಯಿದೆ. ಇದು ಅಮೆರಿಕಾದ ಆತಂಕವನ್ನು ಹೆಚ್ಚಿಸಿದೆ. ಚೀನಾ ಈ ತಂರ್ರಜ್ಞಾನದ ಮುನ್ನಡೆ ಹಾಗೂ ಬೆಲ್ಟ್ ಮತ್ತು ರೋಡ್ ಫೋರಂ ಬಳಸಿ ವ್ಯಾಪಾರ ಪಾಲುದಾರಿಕೆಯನ್ನು ಹೆಚ್ಚಿಸುತ್ತಿರುವುದು ಅಮೆರಿಕಾಕ್ಕೆ ಮತ್ತೊಂದು ಆತಂಕ..

ಚೀನಾವು ತನ್ನ ದೇಶಿಯ ಮಾರುಕಟ್ಟೆಯನ್ನು ರಕ್ಷಿಸಲು ಮತ್ತು ಹುವಾವೇ ಯಂತಹ ತನ್ನ ‘ಚಾಂಪಿಯನ್ ಕಂಪನಿ’ ಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಲು, ಯುಎಸ್ ನ ಮತ್ತು ಅದರ ಮಿತ್ರರ ಆಕ್ರಮಣಗಳನ್ನು ಪ್ರತಿರೋಧಿಸಲು, ಶಕ್ತವಾಗುವ ತಾಂತ್ರಿಕ ಸಾರ್ವಭೌಮತ್ವವನ್ನು ಅಭಿವೃದ್ಧಿ ಪಡಿಸಿಕೊಂಡಿದೆ. ಯುಎಸ್ ನ ಯಾವುದೇ ತಾಂತ್ರಿಕ ಸಮರವನ್ನು ಎದುರಿಸಲು, ಸಾಮ್ರಾಜ್ಯಶಾಹಿ ಅಜೆಂಡಾ ಹಾಗೂ ಯುಎಸ್ ನ ತಂತ್ರಜ್ಞಾನ ಅಧಿಪತ್ಯವನ್ನು ಹಿಮ್ಮೆಟ್ಟಿಸಲು ಚೀನಾವು ಸಜ್ಜಾಗುತ್ತಿದೆ. ಇದೇ ಯು.ಎಸ್. ಸರಕಾರ ಹುವಾವೇ ಬಗ್ಗೆ ಇಷ್ಟು ಆತಂಕಕ್ಕೆ ಕಾರಣ. ಅಮೆರಿಕದ ಜಾಗತಿಕ ಅಧಿಪತ್ಯದೊಂದಿಗೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಅಧಿಪತ್ಯವೂ ತಳುಕು ಹಾಕಿಕೊಂಡಿದೆ. ಗೂಗಲ್, ಆಪಲ್, ಫೇಸ್ ಬುಕ್ ನಂತಹ ಕಂಪನಿಗಳ ಮೂಲಕ ಇಂಟರ್‌ನೆಟ್ ಮತ್ತು ಆ ಮೂಲಕ ಇಡೀ ಜಗತ್ತಿನ ಮಾಹಿತಿ ಮತ್ತು ಆರ್ಥಿಕದ ಜಾಲವನ್ನು ನಿಯಂತ್ರಣದಲ್ಲಿಟ್ಟಿರುವ ಅದರ ಯೋಜನೆಗೂ ಚೀನಾದಿಂದ ಸವಾಲು ಬರಬಹುದು ಎಂಬ ಆತಂಕದಿಂದಾಗಿಯೇ ಗೂಗಲ್ ಸಹ ಯು.ಎಸ್. ಸರಕಾರದ ಈ ನಿರ್ಧಾರದೊಂದಿಗೆ ಇಷ್ಟು ಆಸಕ್ತಿಯಿಂದ ತೊಡಗಿಸಿಕೊಂಡಿದೆ.

ಚೀನಾದ ತಂತ್ರಜ್ಞಾನದ ಸಾರ್ವಭೌಮತೆಯ ಸ್ವಾವಲಂಬನೆಯ ಪರಿಕಲ್ಪನೆ ಭಾರತಕ್ಕೂ ಮಾದರಿಯಾಗಬೇಕು. ●

JANASHAKTHI KANNADA VARA PATRIKE JUNE 3-9, 2019 Price: Rs. 10/- Date of Publication: 31 MAY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಮಾನವನ ಉಗಮ ಮತ್ತು ವಿಕಾಸ
ಡಾರ್ವಿನ್ 'ಮಂಗನಿಂದ ಮಾನವ' ಎಂದು ಹೇಳಿಲ್ಲ. !!!


ಆರ್. ರಾಮಕೃಷ್ಣ

ಜ್ಞಾನ ವಿಜ್ಞಾನ

ನಾವೀಗ 'ಆಧುನಿಕ ಮಾನವ' ಎಂದು ನೋಡುತ್ತಿರುವ ಈ 'ಪ್ರಾಣಿ'ಗೆ ಕೇವಲ ಹತ್ತು ಸಾವಿರ ವರ್ಷಗಳ ಇತಿಹಾಸವಷ್ಟೆ. ಮನುಷ್ಯನ ಜೀವನದ ಸುದೀರ್ಘ ಇತಿಹಾಸದಲ್ಲಿ ಕೇವಲ ಇತ್ತೀಚಿನ ಕೆಲವು ಸಹಸ್ರಮಾನಗಳಿಂದಷ್ಟೆ ಮನುಷ್ಯನು ವ್ಯವಸಾಯ ಮಾಡುವುದನ್ನು, ಪಶುಪಾಲನೆಯನ್ನು ಮತ್ತು ನಗರ ಕಟ್ಟುವುದನ್ನು ಮಾಡುತ್ತಾ ಬಂದಿದ್ದಾನೆ. ಅದಕ್ಕೂ ಮುಂಚೆ ಮನುಷ್ಯನು ಕಾಡಿನಲ್ಲಿ ಬೇಟೆಯಾಡಿ, ಆಹಾರ ಸಂಪಾದಿಸಿಕೊಂಡು ಜೀವಿಸುತ್ತಿದ್ದನು. ಕಾಡಿನಲ್ಲಿ ದೊರೆಯುವ ಗಡ್ಡೆ ಗೆಣಸುಗಳನ್ನು ಹಣ್ಣು, ಬೀಜಗಳನ್ನು ಸಂಗ್ರಹಿಸಿ ತಿನ್ನುತ್ತಾ ಜೀವಿಸುತ್ತಿದ್ದನು.

ಸುಮಾರು ಎಂಟು ಹತ್ತು ಕೋಟಿ ವರ್ಷಗಳ ಹಿಂದೆ ಮನುಷ್ಯನಾಗಲೀ ಆತನನ್ನು ಹೋಲುವ, ಆತನಿಗೆ ಹತ್ತಿರದ ಜೀವಿಗಳಾಗಲಿ ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿ ಇರಲಿಲ್ಲ. ಆಗ ಇದ್ದ ಒಂದು ಜಾತಿಯ ಪ್ರಾಣಿ ಮನುಷ್ಯನಾಗಿ ವಿಕಾಸವಾಗಿದ್ದು ಸರಳವಾದ ಕತೆಯಲ್ಲ. ಸುಮಾರು 6.5 ಕೋಟಿ ವರ್ಷಗಳ ಹಿಂದೆ ಇಲಿಯನ್ನು ಹೋಲುವ, ಮರದಲ್ಲಿ ವಾಸಿಸುವ ಕೀಟಾಹಾರಿ ಪ್ರಾಣಿ ಇತ್ತು. (ಟ್ರೀ ಷ್ರ್ಯೂ)

ಈ ಪ್ರಾಣಿಯಿಂದ ಹಲವು ಕವಲುಗಳು ಕಾಣಿಸಿಕೊಂಡಿವೆ. ಅಂದರೆ ಲೆಮುರಾಯ್ಡಿಯಾ, ಟಾರ್ಸಿಯಾಯ್ಡಿಯಾ ಮತ್ತು ಆಂಥ್ರಪಾಯ್ಡಿಯಾ ಎಂಬ ಜಾತಿಗಳಿಗೆ ಇದು ದಾರಿ ಮಾಡಿಕೊಟ್ಟಿದೆ. ಮುಂದೆ



ಲೆಮುರ್ ಮತ್ತು ಲೋರಿಸ್ ಟಾರ್ಸಿಯರ್ ಹೆಸರಿನ ಕಾಡುಪಾಪಗಳಿಗೆ ಇವು ದಾರಿಮಾಡಿಕೊಟ್ಟಿವೆ.

ಮುಂದೆ ಆಂಥ್ರಪಾಯ್ಡ್ ಅಥವಾ ಪಿಥಕಾಯ್ಡ್ ಎಂದರೆ ವಾನರ ಮತ್ತು ನರ ಎರಡೂ ಪ್ರಾಣಿಗಳ ಲಕ್ಷಣಗಳುಳ್ಳ ಜೀವಿಗಳು ವಿಕಾಸವಾಗಿವೆ. ಇವುಗಳಿಂದ ಒಂದು ಕಡೆ ಸ್ಪೈಡರ್ ಮಂಗ, ಹೌಲಿಂಗ್ ಮಂಗ ವಿಕಾಸವಾದರೆ ಮತ್ತೊಂದು ಕಡೆ ವಾನರ ಜಾತಿಯ ಮಾಂಡ್ರಿಲ್, ಬಬೂನ್, ಮಕಾಕ, ಲಂಗೂರ್, ಮುಂತಾದವು ವಿಕಾಸಗೊಂಡಿವೆ. ಮುಂದೆ ಇದೇ ಕವಲಿನಿಂದ ಗಿಬ್ಬನ್, ಒರಂಗುಟಾನ್, ಚಿಪಾಂಜಿಗಳು, ಗೊರಿಲ್ಲಾಗಳು ವಿಕಾಸಗೊಂಡಿವೆ. ಇದೇ ಗುಂಪಿನಿಂದ ಕ್ರಮೇಣ ಕಮೇಣ ಮಾನವ ವಿಕಾಸಗೊಂಡಿದ್ದಾನೆ.

ಚಿಂಪಾಂಜಿಯಂತಹ ಪ್ರಾಣಿಯು ಉದ್ದ ಮೂತಿ, ಹಿಂದಕ್ಕೆ ಬಾಗಿಕೊಂಡ ತಲೆ ಬುರುಡೆ, ಸಣ್ಣ ಮಿದುಳು ಇತ್ಯಾದಿ ಲಕ್ಷಣಗಳನ್ನು ಹೊಂದಿದ್ದರೆ, ಮನುಷ್ಯನು ಚಿಕ್ಕ ಮೂತಿ, ದೊಡ್ಡ ಮಿದುಳು, ಮುಂದೆ ಚಾಚಿದ ಹಣೆಯ ಭಾಗ, ನೇರವಾದ ನಿಲುವು ಇತ್ಯಾದಿ ಇತ್ಯಾದಿ ಲಕ್ಷಣಗಳನ್ನು ಹೊಂದಿದ್ದಾನೆ.

ದಕ್ಷಿಣ ಆಫ್ರಿಕಾ ಮತ್ತು ಕೀನ್ಯಾಗಳಲ್ಲಿ 2.5 ಕೋಟಿ ವರ್ಷಗಳ ಹಿಂದೆ ಜೀವಿಸುತ್ತಿದ್ದ 'ಪ್ರೊಕನ್ಸುಲ್ ಆಫ್ರಿಕೇನಸ್' ಎನ್ನಲಾಗುವ ಜೀವಿಯ ಪಳೆಯುಳಿಕೆಗಳನ್ನು ಪತ್ತೆ ಹಚ್ಚಲಾಯಿತು. 1948ರಲ್ಲಿ ಈ ಸಂಶೋಧನೆಯನ್ನು ಮಾಡಲಾಯಿತು. ಭಾರತದ ಹಿಮಾಲಯ ಪರ್ವತದ ಸಿವಾಲಿಕ್ ಸ್ತರಗಳಲ್ಲಿ ಸಮಾರು 1.4 ಕೋಟಿ ವರ್ಷಗಳ ಹಿಂದಿನ, 'ರಾಮಾಪಿಥಕಸ್' ಎಂದು ಹೆಸರಿಸಲಾದ ಜೀವಿಯ ಪಳೆಯುಳಿಕೆಗಳು ಸಿಕ್ಕಿವೆ. 20 ಲಕ್ಷ ವರ್ಷಗಳ ಹಿಂದೆ ಬದುಕಿದ್ದ 'ಆಸ್ಟ್ರಲೋಪಿಥಕಸ್ ಆಫ್ರಿಕೇನಸ್'ನ ಪಳೆಯುಳಿಕೆಗಳು ತಾಂಜೇನಿಯಾ ದೇಶದಲ್ಲಿ ಸಿಕ್ಕಿದೆ.

ಇಲ್ಲಿಂದಾಚೆಗೆ ಸುಮಾರು 15 ಲಕ್ಷ ವರ್ಷಗಳ ಹಿಂದೆ ಚೀನಾದ ಪೀಕಿಂಗ್‌ನ ಗುಹೆಗಳಲ್ಲಿ ವಾಸಿಸುತ್ತಿದ್ದ ಮಾನವನ ಪಳೆಯುಳಿಕೆಗಳು ದೊರೆತಿವೆ. ಇದು 'ಪೀಕಿಂಗ್ ಮಾನವ' ಎಂದೇ ಹೆಸರಾಗಿದೆ. ಎಂದರೆ 15 ಲಕ್ಷ ವರ್ಷಗಳ ಹಿಂದೆಯೇ 'ಮಾನವ' ಎಂದು ಕರೆಯಬಹುದಾದ ಜೀವಿಯಿದ್ದಿತು.

ಜರ್ಮನಿಯ ನಿಯಾಂಡರ್‌ಥಾಲ್ ಕಣಿವೆಯಲ್ಲಿ ಪತ್ತೆಯಾದ ಸು. 40 ಸಾವಿರ ವರ್ಷಗಳ ಹಿಂದಿನ ಮನುಷ್ಯನ ಪಳೆಯುಳಿಕೆಗೆ 'ನಿಯಾಂಡರ್‌ಥಾಲ್ ಮಾನವ' ಎಂದೇ ಹೆಸರು ನೀಡಲಾಗಿದೆ. ಇದೇ ಸಮಯದ ಫ್ರಾನ್ಸಿನ ಕ್ರೋಮಾಗ್ನನ್ ಕಣಿವೆಯಲ್ಲಿ

ಪುಟ 14 ಕ್ಕೆ

ಅಂದು ರೋಹಿತ್ ವೆಮುಲ–ಇಂದು ಡಾ.ಪಾಯಲ್ ಟಡ್ವಿ: ಕೇವಲ ಆಕಸ್ಮಿಕವೇ?

ದೇಶದ ಮುಂದಿನ ಸರಕಾರವನ್ನು ಯಾರು ರಚಿಸಲಿದ್ದಾರೆ ಎಂದು ಜನತೆ ಲೋಕಸಭಾ ಚುನಾವಣೆಗಳ ಫಲಿತಾಂಶಗಳನ್ನು ನೋಡುತ್ತಿದ್ದಾಗ/ಕೇಳುತ್ತಿದ್ದಾಗ ಹಿಂದಿನ ದಿನವಷ್ಟೇ, ಅಂದರೆ ಮೇ 22ರಂದು, ಮುಂಬೈಯ ನಾಯರ್ ಆಸ್ಪತ್ರೆಯ ರೆಸಿಡೆಂಟ್ ಡಾಕ್ಟರ್ ಪಾಯಲ್ ಟಡ್ವಿ ಜಾತಿ ಪಕ್ಷಪಾತವನ್ನು ತಡೆದುಕೊಳ್ಳಲಾರದೆ ತನ್ನ ಹಾಸ್ಟೆಲ್ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬ ಸುದ್ದಿಯನ್ನೂ ಕೇಳಬೇಕಾಗಿ ಬಂತು.

23 ವರ್ಷ ವಯಸ್ಸಿನ ಡಾ. ಪಾಯಲ್ ಟಡ್ವಿ ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯಿಂದ ಸ್ನಾತಕೋತ್ತರ ವೈದ್ಯಕೀಯ ಅಧ್ಯಯನಕ್ಕೆ ಆಯ್ಕೆಯಾಗಿ ಮುಂಬೈಗೆ ಬಂದಿದ್ದ ಆದಿವಾಸಿ ಗುಂಪಿಗೆ ಸೇರಿದ್ದ ವಿದ್ಯಾರ್ಥಿನಿ. ಮುಂಬೈಯ ಟೋಪಿವಾಲ ನ್ಯಾಶನಲ್ ಮೆಡಿಕಲ್ ಕಾಲೇಜಿ(ಟಿಎನ್‌ಎಂಸಿ)ನಲ್ಲಿ ಪ್ರವೇಶ ಪಡೆದಿದ್ದು, ಅಧ್ಯಯನದ ಭಾಗವಾಗಿ ಮುಂಬೈಯ ಪ್ರಸಿದ್ಧ ನಾಯರ್ ಆಸ್ಪತ್ರೆಯಲ್ಲಿ ರೆಸಿಡೆಂಟ್ ಡಾಕ್ಟರ್ ಆಗಿದ್ದರು. ಆಕೆಯ ಸ್ನೇಹಿತರು ಮತ್ತು ಸಹೋದ್ಯೋಗಿಗಳ ಪ್ರಕಾರ ಆಕೆ ತನ್ನ ಮೂವರು ಹಿರಿಯ ರೆಸಿಡೆಂಟ್ ಡಾಕ್ಟರುಗಳಿಂದ ನೇರವಾಗಿ ಮತ್ತು ವಾಟ್ಸ್‌ಆಪ್ ಮುಂತಾದವುಗಳ ಮೂಲಕ ತೀವ್ರ ಕಿರುಕುಳ ಮತ್ತು ಜಾತಿ ನಿಂದನೆಗಳನ್ನು ಎದುರಿಸುತ್ತಿದ್ದು ಅದನ್ನು ತಾಳಿಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಹೇಳಲಾಗುತ್ತಿದೆ.

ಇದು ಮೋದಿ ನೇತೃತ್ವದ ಮೊದಲ ಎನ್‌ಡಿಎ ಸರಕಾರದ ಆರಂಭದ ತಿಂಗಳುಗಳಲ್ಲಿ ನಡೆದ ಹೈದರಾಬಾದ್ ಕೇಂದ್ರೀಯ ವಿಶ್ವ ವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲಾ ಆತ್ಮಹತ್ಯೆಯಂತೆ ಒಂದು ಸಾಂಸ್ಥಿಕ ಹತ್ಯೆ ಎಂದೂ ಹಲವು ಟಿಪ್ಪಣಿಕಾರರು ಹೇಳಿದ್ದಾರೆ.

ಮೇ 27ರಂದು ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐನ ಮಹಾರಾಷ್ಟ್ರ ರಾಜ್ಯ ಘಟಕಗಳು ಮತ್ತು 'ಜಾತಿ ಅಂತ ಸಂಘರ್ಷ ಸಮಿತಿ'(ಜೆಎಎಸ್‌ಎಸ್) ನಾಯರ್ ಅಸ್ಪತ್ರೆಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ.

ಡಾ.ಪಾಯಲ್ ಟಡ್ವಿ ಟಿಎನ್‌ಎಂ ಕಾಲೇಜಿನ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗವನ್ನು ಒಬ್ಬ ರೆಸಿಡೆಂಟ್ ಡಾಕ್ಟರಾಗಿ ಸೇರಿ ಒಂದು ವರ್ಷದ ಮೇಲಾಗಿದ್ದು, ಈ ಅವಧಿಯಾದ್ಯಂತ ಆಕೆಯ ಬುಡಕಟ್ಟು ಹಿನ್ನೆಲೆಯಿಂದಾಗಿ ಸತತವಾಗಿ ಕಿರುಕುಳವನ್ನು ಎದುರಿಸಬೇಕಾಗಿ ಬಂದಿದೆ, 'ಅರ್ಹತೆಗೆ ವಿರುದ್ಧವಾಗಿ ಮೀಸಲಾತಿ' ಎಂಬ ಚರ್ಚೆಯ ಹೆಸರಲ್ಲಿ ಅವಮಾನಗಳನ್ನು ಎದುರಿಸಬೇಕಾಗಿ ಬಂದಿದೆ, ಹೆರಿಗೆ ನಡೆಸುವ ಅಥವ ಶಸ್ತ್ರಚಿಕಿತ್ಸೆ ನಡೆಸುವ ಅವಕಾಶಗಳಿಂದ ವಂಚಿತಳಾಗಿ ಮಾಡುವ ಮೂಲಕ ವೈದ್ಯಳಾಗಿ ಆಕೆಯ ಭವಿಷ್ಯವನ್ನು ನಾಶಮಾಡುವ ಪ್ರಯತ್ನ ನಡೆದಿದೆ ಎಂದು ಈ ಪ್ರತಿಭಟನೆಯಲ್ಲಿ ಮಾತಾಡಿದವರು ಹೇಳಿದರು. ಈ ಬಗ್ಗೆ ದೂರು ನೀಡಿದಾಗ ಕಾಲೇಜು ಅಧಿಕಾರಿಗಳು ನಿರ್ಲಕ್ಷ್ಯ ತೋರಿರುಯವುದನ್ನೂ ಈ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಈ ಮತಪ್ರದರ್ಶನದ ವೇಳೆಯಲ್ಲಿ ಈ ಸಂಘಟನೆಗಳ ಮುಖಂಡರಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ ನೇತೃತ್ವದ ನಿಯೋಗವೊಂದು ಕಾಲೇಜಿನ ಆಡಳಿತಗಾರರು ಮತ್ತು ಹಿರಿಯ ವೈದ್ಯರುಗಳನ್ನು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಸಲ್ಲಿಸಿತು.

ಇದು ಒಂದು ಸಾಂಸ್ಥಿಕ ಕೊಲೆ ಎಂದು ಪರಿಗಣಿಸಬಹುದಾದ ಘಟನೆ. ಇದಕ್ಕೆ ಹೊಣೆಗಾರಿಕೆಯನ್ನು ನಿಗದಿ ಪಡಿಸಬೇಕು. ಇದಕ್ಕೆ ಕಾರಣರಾದ ಮೂವರು ಹಿರಿಯ ರೆಸಿಡೆಂಟ್ ಡಾಕ್ಟರುಗಳು ಮತ್ತು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿರುವ ಕಾಲೇಜಿನ ಅಧಿಕಾರಿಗಳ ಮೇಲೆ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿಯೋಗ ತನ್ನ ಮನವಿ ಪತ್ರದಲ್ಲಿ ಆಗ್ರಹಿಸಿದೆ. ಸಾರ್ವಜನಿಕ ವೈದ್ಯಕೀಯ ಸಂಸ್ಥೆಗಳು ಮಾತ್ರವೇ ಬುಡಕಟ್ಟು, ದಲಿತ ಮತ್ತಿತರ ದಮನಕ್ಕೊಳಗಾಗಿರುವ ವಿಭಾಗಗಳಿಂದ ವೃತ್ತಿಪರ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಅವಕಾಶಗಳನ್ನು ಕಲ್ಪಿಸಿದ್ದು, ಜಾತಿನಿಂದನೆಗಳು ಮತ್ತು ದಮನವನ್ನು ಸಹಿಸಲು ಸಾಧ್ಯವಿಲ್ಲೆಂಬ ಸಂದೇಶ ಕಾಲೇಜು ಸಮುದಾಯಕ್ಕೆ ಮತ್ತು ಒಟ್ಟಾರೆಯಾಗಿ ಸಮಾಜಕ್ಕೆ ಈ ಮೂಲಕ ಹೋಗಬೇಕಾಗಿದೆ ಎಂದು ಮನವಿ ಪತ್ರ ಹೇಳಿದೆ.

ಯುಜಿಸಿ 'ಸಮಾನ ಅವಕಾಶ ಕೋಷ್ಠ'/ ಎಸ್‌ಸಿ–ಎಸ್‌ಟಿ ಸೆಲ್‌ಗಳನ್ನು ರಚಿಸಬೇಕು ಎಂದು ನಿರ್ದೇಶನ ನೀಡಿದೆ. ಜಾತಿ ನಿಂದನೆಗಳನ್ನು ಮತ್ತು ರ್‍ಯಾಗಿಂಗ್ ತಡೆಯಲು ಇಂತಹ ಕ್ರಮಗಳಿರುವ ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸುವಲ್ಲಿ ಕಾಲೇಜು ಆಡಳಿತಗಳು ಮತ್ತು ಮಹಾರಾಷ್ಟ್ರ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಫಲವಾಗಿವೆ ಎಂದಿರುವ ನಿಯೋಗ ಆಪಾದಿತರನ್ನು ಬಂಧಿಸುವಲ್ಲಿ ಮತ್ತು ಈ ಘಟನೆಗೆ ಕಾರಣರು ಯಾರು ಎಂದು ಹೊಣೆ ನಿರ್ಧರಿಸುವಲ್ಲಿ ಅಧಿಕಾರಿಗಳು ಮತ್ತು ಪೋಲೀಸ್ ವಿಳಂಬ ಮಾಡಿದರೆ ಈ ಪ್ರತಿಭಟನಾ ಚಳುವಳಿ ಇನ್ನಷ್ಟು ತೀವ್ರಗೊಳ್ಳುತ್ತದೆ ಎಂದು ಈ ಸಂಘಟನೆಗಳು ಎಚ್ಚರಿಸಿವೆ.

ಎಸ್‌ಎಫ್‌ಐ ಮಹಾರಾಷ್ಟ್ರ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯದ ಇತರೆಡೆಗಳಲ್ಲೂ ಬೀಡ್, ನಾಂದೆಡ್, ಔರಂಗಾಬಾದ್, ಶೋಲಾಪುರ, ನಾಗ್ಪುರಗಳಲ್ಲೂ ಮತಪ್ರದರ್ಶನಗಳು ನಡೆದಿವೆ. ಸಂಬಂಧಪಟ್ಟ ಜಿಲ್ಲಾ ಕಲೆಕ್ಟರುಗಳಿಗೆ ಅವು ಮನವಿ ಪತ್ರಗಳನ್ನು ಸಲ್ಲಿಸಿವೆ. ಪುಣೆಯೂ ಸೇರಿದಂತೆ ಹಲವೆಡೆಗಳಲ್ಲಿ ಜೆಎಂಎಸ್, ಡಿವೈಎಫ್ಐ, ಡಿಎಸ್‌ಎಂಎಂ ಘಟಕಗಳೂ ಪ್ರತಿಭಟನೆಗಳನ್ನು ನಡೆಸಿವೆ.

ಮರುದಿನವೇ, ಮೇ 28ರಂದು ಕಿರುಕುಳ, ಜಾತಿನಿಂದನೆಗಳ ಆರೋಪಕ್ಕೆ ಒಳಗಾಗಿರುವ ಮೂವರನ್ನೂ, ಡಾ. ಭಕ್ತಿ ಮೆಹರೆ, ಡಾ. ಹೇಮಾ ಅಹುಜ ಮತ್ತು ಡಾ. ಅಂಕಿತ ಖಂಡೆಲ್‌ವಾಲ್‌ರನ್ನು ಬಂಧಿಸಿರುವ ಸುದ್ದಿ ಬಂದಿದೆ. ಅವರ ಮೇಲೆ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳು(ಅತ್ಯಾಚಾರ ತಡೆ) ಕಾಯ್ದೆ, ರ್‍ಯಾಗಿಂಗ್–ವಿರೋಧಿ ಕಾಯ್ದೆ, ಮಾಹಿತಿ ತಂತ್ರಜ್ಞಾನ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 306 ಅಡಿಯಲ್ಲಿ ಆತ್ಮಹತ್ಯೆಯತ್ತ ತಳ್ಳಿರುವ ಆರೋಪಗಳನ್ನು ಹಾಕಲಾಗಿದೆ ಎಂದು ವರದಿಯಾಗಿದೆ.





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**